Swabhimani Sahakari

Pages : 34 / 20₹


# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 20
Issue - 12
December - 2023

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಜನವರಿ 01
ಸೌಹಾರ್ದ ಸಹಕಾರಿ ದಿನ



ಶಿವಲಿಂಗ ಪರ್ವತವು ಉತ್ತರ ಭಾರತದ ರಾಜ್ಯವಾದ ಉತ್ತರಾಖಂಡದ ಪಶ್ಚಿಮ ಗರ್ವಾಲ್ ಸೇರಿದ ಹಿಮಾಲಯದ ಗಂಗೋತ್ರಿ ಶಿಖರಗಳಲ್ಲಿರುವ ತಪೋವನದಲ್ಲಿದೆ. ಹಿಮಾಲಯದ ಅತಿದೊಡ್ಡ ಹಿಮನದಿಗಳಲ್ಲಿ ಒಂದಾದ ಗಂಗೋತ್ರಿ ಹಿಮನದಿಯ ಸಮೀಪದಲ್ಲಿ ಹಾಗೂ ಭಾಗೀರಥಿ ನದಿಯ ಮೂಲದ ದಕ್ಷಿಣಕ್ಕೆ 6 ಕಿ.ಮಿ. ದೂರದಲ್ಲಿದೆ. ಇದರ ದರ್ಶನಕ್ಕೆ ಅಸಂಖ್ಯಾತ ಯಾತ್ರಿಗಳು ಭೇಟಿ ನೀಡುತ್ತಾರೆ.



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಡಿಸೆಂಬರ್ 04 ರಿಂದ 15ರವರೆಗೆ ಚಳಿಗಾಲದ ಅಧಿವೇಶನ ನಡೆಯಲಿದೆ.



ಡಿಸೆಂಬರ್ 25
ಕ್ರಿಸ್ಮಸ್ ಹಬ್ಬ

ಸೌಹಾರ್ದ ಸಹಕಾರಿಗಳ ಸಂಖ್ಯೆ : 6082

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1605



ಜಿ. ನಂಜನಗೌಡ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕ್ರಿಸ್‌ಮಸ್ ಹಬ್ಬದ ಹಾಗೂ ಜನವರಿ 01 ಸೌಹಾರ್ದ ಸಹಕಾರಿ ದಿನದ ಶುಭಾಶಯಗಳು. ರಾಜ್ಯದ ಸಮಗ್ರ ಸಹಕಾರ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಎಲ್ಲ ಸಹಕಾರಿಗಳಿಗೆ ದೇವರು ಆಯುರಾರೋಗ್ಯ ಸುಖ ಶಾಂತಿ ಹಾಗೂ ನೆಮ್ಮದಿಯ ಜೀವನವನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

# ಪ್ರಸಕ್ತ ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ವಿಧಾನ ಮಂಡಳದ ಅಧಿವೇಶನ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ರಾಜ್ಯದ ಸುಸ್ಥಿರ ಅಭಿವೃದ್ಧಿಗೆ ದಿಕ್ಸೂಚಿಯಾಗಲಿ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕ್ರಿಸ್‌ಮಸ್ ಹಬ್ಬದ ಹಾಗೂ ಜನವರಿ 01 ಸೌಹಾರ್ದ ಸಹಕಾರಿ ದಿನದ ಶುಭಾಶಯಗಳು. ರಾಜ್ಯದ ಸಮಗ್ರ ಸಹಕಾರ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಎಲ್ಲ ಸಹಕಾರಿಗಳಿಗೆ ದೇವರು ಆಯುರಾರೋಗ್ಯ ಸುಖ ಶಾಂತಿ ಹಾಗೂ ನೆಮ್ಮದಿಯ ಜೀವನವನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

ಸ್ನೇಹಿತರೆ, ಕರ್ನಾಟಕ ರಾಜ್ಯ ವಿಧಾನ ಮಂಡಳದ ಅಧಿವೇಶನ ದಿನಾಂಕ 04.12.2023 ರಿಂದ 15.12.2023 ರವರೆಗೆ ಬೆಳಗಾವಿಯಲ್ಲಿ ನಡೆಯುತ್ತದೆ ಎಂಬುದು ತಮಗೆಲ್ಲ ತಿಳಿದಿದೆ ಎಂದು ಭಾವಿಸುತ್ತೇನೆ. ಪ್ರಸಕ್ತ ಅಧಿವೇಶನ ರಾಜ್ಯದ ಸುಸ್ಥಿರ ಅಭಿವೃದ್ಧಿಯ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಪಡೆದಿದೆ. ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಮಹತ್ವದ ನಿರ್ಣಯಗಳ ಬಗ್ಗೆ ಚರ್ಚೆಗಳಾಗುವ ನಿರೀಕ್ಷೆ ಇದೆ. ಶಾಸಕರು ಹಾಗೂ ವಿಧಾನ ಪರಿಷತ ಸದಸ್ಯರು ಹೆಚ್ಚಿನ ಆಸಕ್ತಿಯಿಂದ ವಿಧಾನ ಸಭೆ ಹಾಗೂ ವಿಧಾನ ಪರಿಷತ ಎರಡು ಮನೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ರಾಜ್ಯದ ಅಭಿವೃದ್ಧಿಯ ಪಾಲುದಾರರಾಗುವರೆಂದು ಆಶಿಸಲಾಗಿದೆ.

ಇದೇ ಸಮಯದಲ್ಲಿ ರಾಜ್ಯದ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ 1997 ಈ ಎರಡೂ ಕಾಯ್ದೆಗಳಿಗೆ ತಿದ್ದುಪಡಿಗಳನ್ನು ತರಲಾಗುವುದು ಎಂದು ಸಹಕಾರ ಸಚಿವರಾದ ಶ್ರೀ ಕೆ.ಎನ್.ರಾಜಣ್ಣನವರು ತಿಳಿಸಿರುವುದು ಮತ್ತು ಈ ಕಾಯ್ದೆಗಳ ತಿದ್ದುಪಡಿಗಾಗಿ ಮಾಜಿ ಸಹಕಾರ ಸಚಿವರಾದ ಹಾಲಿ ಶಾಸಕರಾದ ಶ್ರೀ ಲಕ್ಷ್ಮಣ ಸವದಿಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಹಿರಿಯ ಸಹಕಾರಿಗಳನ್ನೊಳಗೊಂಡ ಸಮಿತಿಯನ್ನು ನೇಮಿಸಿರುವುದು, ಈ ಸಮಿತಿಯವರು ಹಲವು ಬಾರಿ ಸಭೆ ನಡೆಸಿ ಸೂಚಿಸಬಹುದಾದ ತಿದ್ದುಪಡಿಗಳ ಕರಡು ವರದಿಯನ್ನು ಸಿದ್ಧಪಡಿಸಿದೆ. ಸರಕಾರಕ್ಕೆ ಈ ವರದಿಯನ್ನು ಸಲ್ಲಿಸಲಾಗುತ್ತಿದೆ.

ಬೆಳಗಾವಿಯಲ್ಲಿ ನಡೆಯುವ ವಿಧಾನ ಮಂಡಳದ ಅಧಿವೇಶನದಲ್ಲಿ ಈ ತಿದ್ದುಪಡಿಗಳನ್ನು ಅನುಮೋದನೆಗಾಗಿ ಮಂಡಿಸಲಾಗುವುದು ಎಂದು ತಿಳಿಯಲಾಗಿದೆ. ರಾಜ್ಯದ ಸಹಕಾರಿ ಕಾಯ್ದೆ 1959 ಕ್ಕೆ ಹಲವಾರು ತಿದ್ದುಪಡಿಗಳು ಬರಲಿವೆ. ಅದರಂತೆ ಸೌಹಾರ್ದ ಸಹಕಾರಿ ಕಾಯ್ದೆ 1997 ಕ್ಕೂ ಕೆಲವು ತಿದ್ದುಪಡಿಗಳು ಬರಲಿವೆ ಎಂದು ಭಾವಿಸಲಾಗಿದೆ. ಈ ಎಲ್ಲ ತಿದ್ದುಪಡಿಗಳ ಸಾಧಕ ಬಾಧಕಗಳ ಬಗ್ಗೆ ಮಾನ್ಯ ಸಚಿವರ ಜೊತೆಗೆ ಮಾನ್ಯ ಶಾಸಕರುಗಳು ಕೂಲಂಕುಷವಾಗಿ ಚರ್ಚಿಸಿ ಉತ್ತಮ ತಿದ್ದುಪಡಿಗಳು ಅಂಗೀಕಾರವಾಗಲಿ. ಸಹಕಾರಿ ಕ್ಷೇತ್ರದ ಯಾವ ವಿಭಾಗಕ್ಕೂ ಯಾವುದೇ ರೀತಿಯ ಅನಾನುಕೂಲವಾಗದಿರಲಿ ಮತ್ತು ಸಹಕಾರಿ ಚಳುವಳಿಯ ಬೆಳವಣಿಗೆಗೆ ಪ್ರೇರಣಾದಾಯಕವಾಗಿರಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......................................... 2
ಸಂಪಾದಕೀಯ.......................................... 3
ಜ್ಞಾನ ಜ್ಯೋತಿ.......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .................................................. 05–16
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .................................................. 17–22
ಲೇಖನಗಳು :
Sustainable Development Goals : Retrospective Prospective....... 23–25
ಸಹಕಾರ ಸಂಘ ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು ............................. 26–21
ಮಹಿಳೆಯರು, ಯುವಜನ ಮತ್ತು ಅಬಲವರ್ಗಕ್ಕೆ ಸಹಕಾರಿ ಸಂಘಗಳು ...................... 32–34

# ಸಂಪಾದಕೀಯ

## ಸಹಕಾರ ಸಪ್ತಾಹದ ಆಚರಣೆಯಿಂದ ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆ ಹಾಗೂ ದೇಶದ ಸುಸ್ಥಿರ ಅಭಿವೃದ್ಧಿ ದೇಶದಾದ್ಯಂತ ವಿವಿಧ ರಾಜ್ಯಗಳ ಸಹಕಾರ ಕಾನೂನುಗಳು ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುವ ವ್ಯವಸ್ಥೆ ಅಗತ್ಯ.

ರಾಜ್ಯದಾದ್ಯಂತ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ಅತ್ಯಂತ ಪರಿಣಾಮಕಾರಿಯಾಗಿ ಜರುಗಿದೆ. ಕೇಂದ್ರ ಸರಕಾರದಲ್ಲಿ, ರಾಜ್ಯ ಸರಕಾರಗಳಲ್ಲಿ ಪ್ರಮುಖರು, ದೇಶದ ರಾಜಕೀಯ ಮುಖಂಡರು ಪಕ್ಷಾತೀತವಾಗಿ ಭಾಗವಹಿಸಿದ್ದಾರೆ. ಸಹಕಾರಿ ತಜ್ಞರು, ಸಹಕಾರಿ ಇಲಾಖೆಯ ಎಲ್ಲ ಹಿರಿಯ ಹಾಗೂ ಕಿರಿಯ ಅಧಿಕಾರಿಗಳು ಈ ಆಚರಣೆಯಲ್ಲಿ ಸಕ್ರೀಯವಾಗಿ ಭಾಗವಹಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತ ಪಡಿಸಿದ್ದಾರೆ. ಸಾಧನೆ ಹಾಗೂ ವೈಫಲ್ಯಗಳನ್ನು ಪರಾಮರ್ಶೆ ಮಾಡಿ ಈ ಕ್ಷೇತ್ರ ಹೇಗಿರಬೇಕು ಎಂಬ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ ಸಹಕಾರಿಗಳಿಗೆ ಇದೊಂದು ಸಹಕಾರಿ ಹಬ್ಬ. ಸಹಕಾರಿ ಕ್ಷೇತ್ರದ ಅಸ್ತಿತ್ವದ ಬಗ್ಗೆ ಜನರ ಗಮನ ಸೆಳೆಯುವ ಸಾರ್ವಜನಿಕರಲ್ಲಿ ಈ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಕಾರ್ಯ ನಡೆದಿದೆ.

ಕಳೆದ 70 ವರ್ಷಗಳಲ್ಲಿ ಈ ಕ್ಷೇತ್ರದ ಬಗ್ಗೆ ಈ ಕಾರ್ಯ ನಿರಂತರವಾಗಿ ನಡೆಯುತ್ತಲೇ ಇದೆ. ರಾಜ್ಯಗಳಲ್ಲಿ ಸರಕಾರಗಳು ಬದಲಾದಾಗಲೆಲ್ಲ ಅವರುಗಳ ಆಶಯಕ್ಕೆ ತಕ್ಕಂತೆ ಸಹಕಾರಿ ಕಾನೂನುಗಳು ನಿಯಮಗಳು ತಿದ್ದುಪಡಿಗಳಾಗುತ್ತಲೇ ಬಂದಿದೆ. ಹೀಗಾಗಿ ಸಹಕಾರ ಕ್ಷೇತ್ರಕ್ಕೆ ರಾಜ್ಯದಲ್ಲಿ ಸ್ಥಿರವಾದ ಕಾನೂನು ನಿಯಮಗಳಾಗಲಿ ದೇಶದಾದ್ಯಂತ ಎಲ್ಲ ರಾಜ್ಯಗಳಿಗೆ ಒಂದೇ ಮಾದರಿ ಸಹಕಾರಿ ಕಾನೂನುಗಳಾಗಲಿ ಜಾರಿಯಲ್ಲಿ ಇಲ್ಲದಿರುವುದು ಸಹಕಾರ ಚಳುವಳಿಯ ಬೆಳವಣಿಗೆಯಲ್ಲಿ ವಿವಿಧ ರಾಜ್ಯಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ. ಈ ವ್ಯತ್ಯಾಸಗಳು ದೇಶದ ರೈತರ ಹಾಗೂ ಸಾಮಾನ್ಯ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಹಿನ್ನಡೆಯಾಗುವ ಸಾಧ್ಯತೆಗಳಿವೆ. ಆದ್ದರಿಂದ ಈ ವ್ಯತ್ಯಾಸಗಳನ್ನು ಸರಿಪಡಿಸುವುದಾದಲ್ಲಿ ಎಲ್ಲ ರಾಜ್ಯಗಳಲ್ಲಿ ಸಹಕಾರ ಕಾಯ್ದೆಗಳು ಒಂದಕ್ಕೊಂದು ಪೂರಕವಾಗಿರುವ ವ್ಯವಸ್ಥೆ ಅಗತ್ಯ.

ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭವಾದ ದಿನದಿಂದ ಕಾರ್ಯಚಟುವಟಿಕೆಗಳು ನಡೆಯುತ್ತಿರುವುದು ಸ್ವಾಗತಾರ್ಹ. ರಾಷ್ಟ್ರೀಯ ಸಹಕಾರ ನೀತಿ, ರಾಷ್ಟ್ರೀಯ ಸಹಕಾರ ವಿಶ್ವವಿದ್ಯಾಲಯ, ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕಂಪ್ಯೂಟರೀಕರಣ, ರಾಷ್ಟ್ರೀಯ ಸಹಕಾರಿ ಡಾಟಾ ನಿರ್ವಹಣೆ ವ್ಯವಸ್ಥೆ. ಹೊಸ ಹೊಸ ರೀತಿಯ ರಾಷ್ಟ್ರ ಮಟ್ಟದ ಸಹಕಾರ ಸಂಸ್ಥೆಗಳ ರಚನೆ ಹೀಗೆ ವಿವಿಧ ಕಾರ್ಯಕ್ರಮಗಳನ್ನು ಜಾರಿ ಮಾಡುವ ಬಗ್ಗೆ ಕ್ರಮವಿಡಲಾಗುತ್ತಿರುವುದು ದೇಶದಲ್ಲಿ ಸಹಕಾರಿ ಚಳುವಳಿಯ ಅಭಿವೃದ್ಧಿ ಪರ್ವ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಈ ಬಗ್ಗೆ ಸಹಕಾರಿಗಳೆಲ್ಲರೂ ಕೂಡಿ ಕಾರ್ಯನಿರ್ವಹಿಸುವ ಅಗತ್ಯತೆ ಇದೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಕ್ಷರ – ಅಕ್ಷರ"

ಯಾವುದು ಸತ್ಯ? ಇದು ಶಿಷ್ಯನ ಮೊದಲ ಪ್ರಶ್ನೆ. ಯಾವುದು ಯಾವಾಗಲೂ ಇದೆಯೋ?: ಯಾವುದು ಎಂದಿಗೂ ಎಲ್ಲವಾಗುವುದಿಲ್ಲವೋ? – ಅದು ಸತ್ಯ. ಅದುವೇ ಬ್ರಹ್ಮ. ಈ ಶಬ್ದದ ಅರ್ಥವನ್ನು ಪರಿಭಾವಿಸಿದರೆ ಮನಸ್ಸು ದೊಡ್ಡದಾಗುತ್ತದೆ. ವಸ್ತುಗಳ ಸೀಮೆಯನ್ನು ತೆಗೆದರೆ ಉಳಿಯುವುದೇ ಅಂತಃಬ್ರಹ್ಮ. ಜಗತ್ತಿನ ವಸ್ತುಗಳಿಗೆ ಸೀಮೆ ಇರುವುದ–ರಿಂದ ಅವು ಒಂದು ಇನ್ನೊಂದಕ್ಕಿಂತ ಭಿನ್ನವಾಗಿರುತ್ತದೆ. ಮೇರೆಗಳಿರುವ ತನಕ ವಸ್ತುಗಳು, ಮೇರೆ ತೆಗೆದುಹಾಕಿದರೆ ಉಳಿಯುವುದೇ ಅಖಂಡತೆ, ವರ್ತುಳ, ತ್ರಿಕೋನ, ಚೌಕೋನಗಳು ಬೇರೆ ಬೇರೆ ಆದರೆ ಆ ಮೇರೆಗಳನ್ನು ಅಳುಕಿಸಿದರೆ ಉಳಿಯುವುದೇ ಸತ್ಯ.

ಶಿಷ್ಯನ ಪ್ರಶ್ನೆ, "ಮೇರೆಯುಳ್ಳ ಈ ಜಗತ್ತು ಹೇಗಿದೆ? ಏಕೆಂದರೆ ನಾವು ಬದುಕಬೇಕಾಗಿರುವುದು ಇದರಲ್ಲಿಯೇ. ಇಲ್ಲಿ ಎಲ್ಲವನ್ನೂ ಅಳುಕಿಸಿ ಬದುಕಲಿಕ್ಕಾಗುವುದಿಲ್ಲ. ನಮಗೆ ಗಾಳಿ, ನೀರು, ಭೂಮಿ, ಸೂರ್ಯ, ಚಂದ್ರ, ಜನ – ಎಲ್ಲವೂ ಬೇಕು. ಆದ್ದರಿಂದ ಇವು ಸತ್ಯವಲ್ಲವೇ ?" ಇದಕ್ಕೆ ಗುರು ಉತ್ತರಿಸುತ್ತಾನೆ. "ಶಿಷ್ಯನೇ, ಮೊದಲು ನಿನ್ನ ಸುತ್ತಲಿನ ಜಗತ್ತನ್ನು ನೀನು ಅರಿತುಕೋ. ಅದು ಬದಲಾಗದೆ ಇದ್ದರೆ ಅದು ಸತ್ಯ. ಅದು ಎಲ್ಲರಿಗೂ ಒಂದೇ ರೀತಿ ಕಂಡರೆ ಅದು ಸತ್ಯ. ಆದರೆ ಎಲ್ಲರಿಗೂ ಅದು ಬೇರೆ ಬೇರೆ ಕಾಣುವುದರಿಂದ ಅದು ಪರಮಸತ್ಯ ಅಲ್ಲ. ಅದು ಸತ್ಯ ಇರಬಹುದು. ಆದರೆ ಪರಮಸತ್ಯ ಅಲ್ಲ. ಅದು ಸತ್ಯ ಇರಬಹುದು. ಏಕೆಂದರೆ ಎಲ್ಲರ ದೃಷ್ಟಿಕೋನಗಳು ಭಿನ್ನಭಿನ್ನವಾಗಿರುತ್ತವೆ. ಆದ್ದರಿಂದ ಯಾರ ದೃಷ್ಟಿ ಸರಿ ? ಎಲ್ಲರಿಗೂ ಅವರಿಗೆ ಕಂಡದ್ದೇ ಸರಿ, ಆದರೆ ಯಾವುದೂ ಪೂರ್ಣ ಸರಿಯಲ್ಲ. ಜಗತ್ತು ಎಲ್ಲರಿಗೂ ಭಿನ್ನವಾಗಿ ಕಾಣುವುದರಿಂದ ಹೋರಾಟ, ದ್ವೇಷಗಳು ಆರಂಭವಾಗುತ್ತವೆ. ಸ್ವಂತ ದೃಷ್ಟಿಕೋನವನ್ನು ಬಿಟ್ಟು ನೋಡಿದರೆ ಜಗತ್ತಿನ ನಿಜ ಅರ್ಥ ತಿಳಿಯುತ್ತದೆ."

ನಾವು ಭೂಮಿಗೆ ಸೀಮೆ ಹಾಕಿ ಅದು ನನ್ನದು, ಅದು ನಿನ್ನದು ಎನ್ನುತ್ತೇವೆ. ಆದರೆ ಭೂಮಿಗೆ ಸೀಮೆ ಹಾಕಿದ ಮಾತ್ರಕ್ಕೆ ಯಾರೂ ಅದರ ಮಾಲೀಕ ಆಗುವುದಿಲ್ಲ. ಏಕೆಂದರೆ ಈ ಭೂಮಿ ನಮ್ಮ ನಿಮ್ಮೆಲ್ಲರಿಗಿಂತ ಬಹಳ ದೊಡ್ಡದು : ಬಹಳ ಮೊದಲೇ ಬಂದಿರುವುದು. ಅದು ಶಾಶ್ವತವಾಗಿ ಇರುತ್ತದೆ, ಅದು ಸತ್ಯ, ನಾವು ಶಾಶ್ವತವಾಗಿ ಇರುವುದಿಲ್ಲ. ಆದ್ದರಿಂದ ಈ ಭೂಮಿ ವ್ಯವಹಾರಿಕವಾಗಿ ನಮ್ಮದು, ತಾತ್ವಿಕವಾಗಿ ಅಲ್ಲ ಎಂಬುದನ್ನು ಅರಿತರೆ ಆಗ ಜ್ಞಾನ ಉಂಟಾಗುತ್ತದೆ. ಈ ಜಗತ್ತಿಗೆ ಎರಡು ಲಕ್ಷಣಗಳು :

1. ಯಾರೂ ಹೇಗೆ ನೋಡುತ್ತಾರೋ ಹಾಗೆ ಕಾಣುತ್ತದೆ.
2. ಬದಲಾಗುತ್ತದೆ (ಕ್ಷರತಿ)

ವ್ಯಾಸಮಹರ್ಷಿ ಹೇಳುವಂತೆ, "ಅಧಿಭೂತಂ ಚ ಕ್ಷರೂ ಭಾವಃ" ಅಂದರೆ ಈ ಭೂಮಿ ಇದ್ದಂತೆಯೇ ಇರುವುದಿಲ್ಲ. ಸವೆಯುತ್ತದೆ. ಉದಾಹರಣೆಗೆ, ಒಂದು ಮಿಂಚು ಹೊಡೆದಾಗ ಎಲ್ಲ ಕಡೆ ಅದರ ಬೆಳಕು. ಕಣ್ಣು ಮುಚ್ಚಿ ತೆಗೆಯುವುದರೊಳಗೆ ಮಿಂಚಿ ಮರೆಯಾಗಿ ಹೋಗುತ್ತದೆ. ಸಾಗರದಲ್ಲಿ ಅಲೆಗಳು ಏರಿ ಇಳಿಯುತ್ತವೆ. ಆಕಾಶದಲ್ಲಿ ಮೇಘಗಳ ತುಂಬಿ ಸ್ವಲ್ಪ ಕಾಲಾಂತರದಲ್ಲಿ ಕರಗುತ್ತವೆ. ಇವೆಲ್ಲ ಇರುವಂತೆಯೇ ಜಗತ್ತು. ಅದು ಬದಲಾಗುತ್ತದೆ.

ಈಗ ನಾವು ಏನು ಕಾಣುತ್ತೇವೆಯೋ ಅದು ಇನ್ನೂ ಸ್ವಲ್ಪ ಸಮಯದ ನಂತರ ಇರುವುದಿಲ್ಲ. ಈ ಜಗತ್ತು ಕ್ಷಣದಿಂದ ಕ್ಷಣಕ್ಕೆ ಬದಲಾಗುತ್ತದೆ. 'ಸರ್ವಂ ಕ್ಷಣಿಕಂ' ಇದು ಬದಲಾಗುತ್ತ, ಚಲಿಸುತ್ತ ಇರುವುದರಿಂದ ಇದನ್ನು ಜಗತ್ತು ಎನ್ನುವರು, ಇದನ್ನು ತಿಳಿದರೆ ತಾಪ ಕಡಿಮೆಯಾಗುತ್ತದೆ. ಹೋಗುವುದಕ್ಕೆಂದೇ ಬರುವುದು: ಕೊಡುವುದಕ್ಕಾಗಿಯೇ ತೆಗೆದುಕೊಳ್ಳುವುದು: ಕೂಡಿಸುವುದಕ್ಕಾಗಿಯೇ ಕಳೆಯುವುದು ಎಂಬುದನ್ನು ತಿಳಿಯಬೇಕು. 'ಅಧಿಭೂತ' ಎಂದರೆ ಜಗತ್ತು, 'ಕ್ಷರೋ ಭಾವಃ ಎಂದರೆ ಬದಲಾಗುವುದು. ಋತುಗಳು ಬದಲಾಗುವಂತೆ ಜಗತ್ತಿನ ಸ್ವರೂಪ ಬದಲಾಗುತ್ತದೆ.

ಈ ಎರಡೂ ಲಕ್ಷಣಗಳನ್ನು ಅರಿತರೆ ಜೀವನದಲ್ಲಿ ಸಮಾಧಾನ ಉಂಟಾಗುತ್ತದೆ. ಎಲ್ಲವೂ ಬದಲಾಗುತ್ತದೆ ಎಂಬುದನ್ನು ಅರಿತರೆ ತಾಪ ಆಗುವುದಿಲ್ಲ. ನಾವು ಇದ್ದಲ್ಲಿಯೇ ಖಾಯಂ ಇರುತ್ತೇವೆಂಬ ಭ್ರಮೆಯಲ್ಲಿ ಇರಬಾರದು. ರಾಮಾಯಣ, ಮಹಾಭಾರತ, ಪುರಾಣಗಳನ್ನು ಓದಬೇಕು. ಇವುಗಳಲ್ಲಿ ಜೀವನದ ಸುಂದರ ಚಿತ್ರಗಳಿವೆ. ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದು ತಿಳಿಯುತ್ತದೆ. ಘಟನೆಗಳು ಹೇಗೆ ಜರುಗುತ್ತವೆ. ಎಂದು ತಿಳಿಯುತ್ತದೆ. ಜಗತ್ತಿನ ಬಗ್ಗೆ ಮನುಷ್ಯರಿಗಿರುವ ಭ್ರಮೆಯನ್ನು ಕಳೆಕುಕೊಳ್ಳಬೇಕಾದರೆ ಇವುಗಳನ್ನು ಓದಬೇಕು. ಜಗತ್ತು ಒಂದು ಕರ್ಮಕ್ಷೇತ್ರ ಅದು ಬದಲಾಗುತ್ತದೆ, ಏರಿಳಿತಗಳು ಆಗುತ್ತವೆ. ಕೆಲವೊಮ್ಮೆ ಅದು ಪ್ರಿಯವಾದರೆ ಕೆಲವೊಮ್ಮೆ ಅದು ಅಪ್ರಿಯವಾಗುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 31676 ಆಗಿರುತ್ತದೆ. ಇವುಗಳ ಪೈಕಿ 22478 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9198

**ನವೆಂಬರ್ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ 446 ಇತ್ಯರ್ಥಗೊಂಡ ಪ್ರಕರಣಗಳು 162

**ಅಮಲ್ಜಾರಿ ಪ್ರಕರಣಗಳು :** ಒಟ್ಟು 7870 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,551 ಪ್ರಕರಣಗಳು ಇತ್ಯರ್ಥಗೊಂಡಿದ್ದು, 6,319 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ನವೆಂಬರ್ ತಿಂಗಳಿನಲ್ಲಿ ಒಟ್ಟು 194 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

# ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ಸ್ಥಳೀಯ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಕಲಘಟಗಿ ಪಟ್ಟಣದ ಹನ್ನೆರಡೆತ್ತಿನ ಮಠದ ಹತ್ತಿರ, ಧಾರವಾಡ ಜಿಲ್ಲೆಯಲ್ಲಿ 70ನೇ ಸಹಕಾರಿ ಸಪ್ತಾಹದ ಸಂಭ್ರಮದ ಆಚರಣೆ



**ಕಲಘಟಗಿ :** 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 17 ನವೆಂಬರ್ 2023 ರಂದು ಕಲಘಟಗಿ ಪಟ್ಟಣದ ಹನ್ನೆರಡೆತ್ತಿನ ಮಠದ ಹತ್ತಿರ ಧಾರವಾಡ ಜಿಲ್ಲೆ ಇಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಕರ್ನಾಟಕ ರಾಜ್ಯ ಸಹಕಾರ ತೋಟಗಾ–ರಿಕಾ ಮಹಾಮಂಡಳ ನಿ., ಬೆಂಗಳೂರು ಕರ್ನಾಟಕ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ನಿ., ಧಾರವಾಡ, ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಧಾರವಾಡ, ಜಿಲ್ಲಾ ಸಹಕಾರ ಯೂನಿಯನ್ ನಿ., ಧಾರವಾಡ, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಹಾವೇರಿ, ಪಟ್ಟಣ ಸಹಕಾರ ಬ್ಯಾಂಕುಗಳು, ಪತ್ತಿನ ಸಹಕಾರ ಸಂಘಗಳು, ತಾಲ್ಲೂಕು ಮಾರಾಟ ಸಹಕಾರ ಸಂಘಗಳು, ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಸಂಸ್ಕರಣ ಸಹಕಾರ ಸಂಘಗಳು, ಮಹಿಳಾ ಸಹಕಾರ ಬ್ಯಾಂಕ್/ಸಂಘಗಳು, ಇತರೆ ಸಹಕಾರ ಸಂಘ–ಸಂಸ್ಥೆಗಳು ಸೌಹಾರ್ದ ಸಹಕಾರ ಸಂಘಗಳು ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಗಳು ಇವರುಗಳ ಸಹಯೋಗದೊಂದಿಗೆ ಕಲಘಟಗಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

**ಸುಗಮ ಸಂಗೀತ :** ಬೆಳಿಗ್ಗೆ 9.00 ರಿಂದ 10.00 ಗಂಟೆಯವರೆಗೆ ಸುಗಮ ಸಂಗೀತವನ್ನು ಹರ್ಲಾಪುರ ತಂಡದವರಿಂದ ವ್ಯವಸ್ಥೆ ಮಾಡಲಾಗಿತ್ತು.



## ಸಹಕಾರಿ ಜಾತಾ

ಸಪ್ತಾಹವನ್ನು ನಗರದ ಬಸ್ ನಿಲ್ದಾಣದ ಅರಳಿಕಟ್ಟೆಯಿಂದ ಹನ್ನೆರಡೆತ್ತಿನ ಮಠದ ವರೆಗೆ ಅತ್ಯಂತ ವೈಭವಪೂರ್ಣ ಸಹಕಾರಿಗಳ ಜಾತಾದೊಂದಿಗೆ ಪ್ರಾರಂಭಿಸಲಾಯಿತು. ಸಾವಿರಾರು ಸಹಕಾರಿಗಳು ಸ್ವಾಗತ ಸಮಿತಿ ಸದಸ್ಯರು ಹಾಗೂ ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಸಹಕಾರ ಧ್ವಜವನ್ನು ತೋರಿಸಿ ಹಾರಾಡಿಸುವ ಮೂಲಕ ಜಾತಾಗೆ ಚಾಲನೆ ನೀಡಿದರು. ಹಲವಾರು ಅಧಿಕಾರಿಗಳು ಮತ್ತು ಸಹಕಾರಿ ಮುಖಂಡರ ನೇತೃತ್ವದಲ್ಲಿ ವಿವಿಧ ವಾದ್ಯ ಹಾಗೂ ಜಾನಪದ ಕಲಾ ತಂಡಗಳೊಂದಿಗೆ ಸಹಕಾರಿ ಧ್ವಜಗಳ ಹಾಗೂ ಸಹಕಾರಿ ಕ್ಷೇತ್ರದ ಘೋಷಣೆಗಳೂಂದಿಗೆ ಬೆಳಿಗ್ಗೆ 10–00 ಘಂಟೆಗೆ ಪ್ರಾರಂಭವಾಯಿತು.

**ಉಪನ್ಯಾಸ :** ಬೆಳಿಗ್ಗೆ 10.00 ರಿಂದ 10.45 ರವರೆಗೆ ದಿನದ ವಿಷಯವಾದ "ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರೀಯೆ ಮತ್ತು ಉದಯೋನ್ಮುಖ ವಲಯಗಳು" ಈ ಬಗ್ಗೆ ಶ್ರೀಮತಿ ನಿರ್ಮಲಾ ಗುತ್ತಲ್, ಮಾನ್ಯ ಉಪನ್ಯಾಸಕರು, ಬೆಳಗಾವಿ ಇವರು ಉಪನ್ಯಾಸ ನೀಡಿದರು.

**ಗಣ್ಯರ ಹಾಗೂ ಸಹಕಾರಿಗಳಿಗೆ ಸ್ವಾಗತ :** ಮಾನ್ಯ ಕಾರ್ಮಿಕ ಸಚಿವರು ಹಾಗು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಹಾಗು ಸಹಕಾರಿ ಇಲಾಖೆಯ ಅಧಿಕಾರಿಗಳನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರನ್ನು ಸಹಕಾರಿಗಳನ್ನು ಪೂರ್ಣಕುಂಭದೊಂದಿಗೆ ಕಾರ್ಯಕ್ರಮಕ್ಕೆ ಸ್ವಾಗತಿಸಲಾಯಿತು.

## ಧ್ವಜಾರೋಹಣ:



ಸಪ್ತವರ್ಣದ ಸಹಕಾರಿ ಧ್ವಜಾರೋಹಣವನ್ನು ಬೆಳಿಗ್ಗೆ 10.45 ಗಂಟೆಗೆ ಎಲ್ಲಾ ಸಹಕಾರಿಗಳ ಸಹಯೋಗದೊಂದಿಗೆ ನೆರವೇರಿಸಲಾಯಿತು.

## ವಸ್ತುಪ್ರದರ್ಶನ ಉದ್ಘಾಟನೆ :



ವಸ್ತುಪ್ರದರ್ಶನ ಉದ್ಘಾಟನೆಯನ್ನು ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಸಂಯುಕ್ತ ಸಹಕಾರಿಯ ಮಳಿಗೆ ಉದ್ಘಾಟನೆಯನ್ನು ಮಾಡುವುದರ ಮೂಲಕ ನೆರವೇರಿಸಿದರು.

**ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ :** ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಭೋದಿಸಿದರು.

**ಪುಷ್ಪನಮನ :** ರಾಷ್ಟ್ರಪಿತ ಶ್ರೀ ಮಹಾತ್ಮಾ ಗಾಂಧೀಜಿ, ಸಹಕಾರ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್, ಪ್ರಥಮ ಪ್ರಧಾನಿ ಪಂಡಿತ ಜವಹರಲಾಲ್ ನೆಹರು ಹಾಗೂ ಭಾರತ ರತ್ನ ಸರ್ ಎಮ್ ವಿಶ್ವೇಶ್ವರಯ್ಯ ಇವರ ಭಾವಚಿತ್ರಗಳಿಗೆ ಗಣ್ಯರು ಪುಷ್ಪಾರ್ಚನೆಯನ್ನು ಮಾಡುವುದರ ಮೂಲಕ ನಮನ ಸಲ್ಲಿಸಿದರು.

## ಸಂದೇಶ ವಾಚನ :



70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಶುಭಾಷಯಗಳನ್ನು ಕೋರಿ ಮಾನ್ಯ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು, ಉಪರಾಷ್ಟ್ರಪತಿಗಳಾದ ಜಗದೀಪ್ ಧನಕರ್, ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್ ಡಿ ದೇವೇಗೌಡ, ಗೃಹ ಹಾಗು ಸಹಕಾರ ಸಚಿವರಾದ ಶ್ರೀ ಅಮಿತ್ ಷಾ, ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್, ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ದಿಲೀಪ್ ಸಂಘಾನಿ, ಸಭಾಪತಿಗಳಾದ ಬಸವರಾಜ ಹೊರಟ್ಟಿ, ಸಭಾಧ್ಯಕ್ಷರಾದ ಶ್ರೀ ಯು ಟಿ ಖಾದರ್ ಫರೀದ್, ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಗಳಾದ ಶ್ರೀ ಡಿ ಕೆ ಶಿವಕುಮಾರ್, ಗೃಹ ಸಚಿವರಾದ ಡಾ. ಜಿ. ಪರಮೇಶ್ವರ್, ಸಹಕಾರ ಸಚಿವರಾದ ಶ್ರೀ ಕೆ ಎನ್ ರಾಜಣ್ಣ ಹಾಗು ಮುಂತಾದ ಗಣ್ಯರು ನೀಡಿದ್ದ ಸಂದೇಶ ವಾಚನವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನಡೆಸಿಕೊಟ್ಟರು.



## ಸಭಾ ಕಾರ್ಯಕ್ರಮ

**ಸ್ವಾಗತ :** ಕಾರ್ಯಕ್ರಮವನ್ನು ಪ್ರಾರ್ಥನೆ, ಸಹಕಾರ ಗೀತೆ, ನಾಡಗೀತೆ, ರೈತಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿ ಗಣ್ಯರನ್ನು ಹಾಗೂ ಸಹಕಾರಿಗಳನ್ನು ಸ್ವಾಗತ ಸಮಿತಿ ಅಧ್ಯಕ್ಷರು ಹಾಗೂ ಧಾರವಾಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಂಜುನಾಥ ಮುರಳ್ಳಿ ಇವರು ಸ್ವಾಗತ ಮಾಡುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.



**ಪ್ರಾಸ್ತಾವಿಕ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತ, ಸಹಕಾರ ಸಪ್ತಾಹದ ಆಚರಣೆಯಿಂದಾಗಿ ಸಹಕಾರಿಗಳಲ್ಲಿ ಜಾಗೃತಿ ಮೂಡಿಸುವುದು, ಸಾರ್ವಜನಿಕರಿಗೆ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಪ್ರಚಾರಮಾಡುವುದು, ವೈಫಲ್ಯಗಳ ಬಗ್ಗೆ ಆತ್ಮಾವಲೋಕನ ಮಾಡುವುದು, ತನ್ಮೂಲಕ ಸಹಕಾರ ಕ್ಷೇತ್ರದ ಗುಣಾತ್ಮಕ ಅಭಿವೃದ್ಧಿಯ ಬಗ್ಗೆ ಚಿಂತನ ಮಂಥನ ಮಾಡುವುದಾಗಿದೆ. ಈ ಬಾರಿಯ ಸಪ್ತಾಹದ ಧ್ಯೇಯ "5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು" ಎಂಬುದಾಗಿದೆ. ಇಂದಿನ ದಿನದ ವಿಷಯ "ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರೀಯೆ ಮತ್ತು ಉದಯೋನ್ಮುಖ ವಲಯಗಳು" ಇವೆರಡು ವಿಷಯಗಳ ಬಗ್ಗೆ ಚಿಂತನ ಮಂಥನ ಮಾಡುವಂತಹ ಗುಣಾತ್ಮಕ ಕಾರ್ಯಕ್ರಮ ಇದಾಗಿದೆ ಎಂದು ತಿಳಿಸುತ್ತ ಸಹಕಾರ ಸಪ್ತಾಹದ ಆಚರಣೆ ಪ್ರತಿವರ್ಷ ರಾಷ್ಟ್ರದಾದ್ಯಂತ ಕಳೆದ 70 ವರ್ಷಗಳಿಂದ ಆಚರಿಸಲಾಗುತ್ತಿದೆ. ದೇಶದಲ್ಲಿ ಸಹಕಾರ ಚಳುವಳಿ ಪ್ರಾರಂಭವಾಗಿ 119 ವರ್ಷ ಕಳೆದಿವೆ. 1904ರಲ್ಲಿ ಪ್ರಾರಂಭವಾಗಿರುವ ಈ ಸಹಕಾರ ಕ್ಷೇತ್ರದಲ್ಲಿ 30ಕೋಟಿಗೂ ಹೆಚ್ಚು ಸದಸ್ಯತ್ವ ಹೊಂದಿರುವ 8 ಲಕ್ಷ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ. ದೇಶದ ಅರ್ಥವ್ಯವಸ್ಥೆಯಲ್ಲಿ ಸಹಕಾರ ಸಂಸ್ಥೆಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಈ ಕ್ಷೇತ್ರ ಬಲಿಷ್ಠವಾಗಿ ಕಾರ್ಯನಿರ್ವಹಿಸಬೇಕು, ಸಾರ್ವಜನಿಕರಿಗೆ, ಸಹಕಾರಿಗಳಿಗೆ ಈ ಕ್ಷೇತ್ರದ ಕಾರ್ಯನಿರ್ವಹಣೆಯ ಬಗ್ಗೆ ತಿಳುವಳಿಕೆ ಬೇಕು. ಸಹಕಾರಿ ಸಂಸ್ಥೆಗಳು ಸಮಾಜದ ಮುಖ್ಯ ವಾಹಿನಿಯಲ್ಲಿ ಕಾರ್ಯನಿರ್ವಹಿಸುವಂತಾಗಬೇಕಾದರೆ ಈ ಕ್ಷೇತ್ರಕ್ಕೆ ಹೆಚ್ಚಿನ ಪ್ರಚಾರ ಅಗತ್ಯ ಎಂಬ ಹಿನ್ನೆಲೆಯಲ್ಲಿ ಸಹಕಾರ ಸಪ್ತಾಹವನ್ನು ರಾಷ್ಟ್ರದಾದ್ಯಂತ ಹಳ್ಳಿಯಿಂದ ದೆಹಲಿಯವರೆಗೆ ಅತ್ಯಂತ ಪರಿಣಾಮಕಾರಿಯಾಗಿ ಆಚರಿಸಲಾಗುತ್ತದೆ.

ಸಪ್ತಾಹದ ಕಾರ್ಯಕ್ರಮದಲ್ಲಿ ಸಹಕಾರಿ ಧ್ವಜಾರೋಹಣ, ಸಹಕಾರಿ ಜಾತಾ, ಸಹಕಾರಿ ವಸ್ತು ಪ್ರದರ್ಶನ, ಸಹಕಾರ ಕ್ಷೇತ್ರದ ವಿಷಯಗಳ ಬಗ್ಗೆ ಉಪನ್ಯಾಸಗಳು, ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹನೀಯರುಗಳಿಗೆ ಸನ್ಮಾನ, ಹಿರಿಯ ಸಹಕಾರಿಗಳಿಂದ ಮಾರ್ಗದರ್ಶನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಹಕಾರಿಗಳಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

ರಾಜ್ಯದಲ್ಲಿ 40,000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು, 2.5 ಕೋಟಿಗೂ ಹೆಚ್ಚು ಸದಸ್ಯತ್ವ ಬಳಗವಿದೆ. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ದಿನಾಂಕ 01ನೇ ಜನವರಿ 2001ರಿಂದ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ಮೂಲಕ ಸ್ಥಾಪಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದಲ್ಲಿ 60 ಲಕ್ಷಕ್ಕೂ ಹೆಚ್ಚು ಸದಸ್ಯತ್ವವನ್ನು ಹೊಂದಿರುವ 6000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳನ್ನು ಹೊಂದಿದೆ. ರಾಜ್ಯದ ಸೌಹಾರ್ದ ಸಹಕಾರಿ ವ್ಯವಸ್ಥೆ ಇಡೀ ದೇಶಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ನಮ್ಮ ನಿಮ್ಮೆಲ್ಲರ ಹೆಮ್ಮೆಯ ವಿಷಯ ಎಂದು ತಿಳಿಸಿದರು.



**ಉದ್ಘಾಟನೆ :** ಎಲ್ಲಾ ಗಣ್ಯರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆಗೆ ಚಾಲನೆ ನೀಡಿದರು.

**ಅಧ್ಯಕ್ಷತೆ :** ಮಾನ್ಯ ಕಾರ್ಮಿಕ ಸಚಿವರು ಹಾಗು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮಾನ್ಯ ಕಾರ್ಮಿಕ ಸಚಿವರು ಹಾಗು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ರವರು ಸಹಕಾರಿ ಸಂಸ್ಥೆಗಳು ದಶಕಗಳಿಂದ ಭಾರತದ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಅವಿಭಾಜ್ಯ ಅಂಗವಾಗಿದೆ. ಭಾರತದ ಸಹಕಾರಿ ವ್ಯವಸ್ಥೆ ಇಡೀ ವಿಶ್ವದಲ್ಲಿಯೇ ದೊಡ್ಡದಾಗಿದೆ ಮತ್ತು ಕೃಷಿ ಸಂಬಂಧಿತ ವಲಯದ ಪ್ರಬಲ ಆಧಾರ ಸ್ತಂಭವಾಗಿದೆ. ಸಹಕಾರ ಸಂಘಕ್ಕೆ ಅವಿಭಾಜಿತ ಧಾರವಾಡ ಜಿಲ್ಲೆಯ ಸಹಕಾರಿ ರಂಗದ ಪಿತಾಮಹಾ ಸಿದ್ದನಗೌಡ ರಾಮನಗೌಡರ ಕೊಡುಗೆ ಅಪಾರವಾಗಿದೆ. ದೇಶದಲ್ಲಿ 8 ಲಕ್ಷ ಸಹಕಾರ ಸಂಸ್ಥೆಗಳಿವೆ. ಸಹಕಾರ ಸಂಸ್ಥೆಗಳು ಬಡತನವನ್ನು ನಿವಾರಿಸಲು, ಉದ್ಯೋಗವನ್ನು ಸೃಷ್ಟಿಸಲು ಮತ್ತು ಸಮಾನ ಆರ್ಥಿಕ ಬೆಳವಣಿಗೆ ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಹಕಾರಿ ಸಂಘಗಳಿಂದ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಿ ಉದ್ಯೋಗವನ್ನು ಹೆಚ್ಚಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.



ಮಾನ್ಯ ಸಚಿವರಾದ ಶ್ರೀ ಸಂತೋಷ್ ಎಸ್ ಲಾಡ್ ಇವರಿಗೆ ಸನ್ಮಾನ




ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಜಿ. ನಂಜನಗೌಡ ಇವರಿಗೆ ಸನ್ಮಾನ



## ಸ್ವಾಭಿಮಾನಿ ಸಹಕಾರ ಮಾಸ ಪತ್ರಿಕೆಯ ವಿಶೇಷ ಸಂಚಿಕೆ : ಸಹಕಾರ ವಾರಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ

ಸಂಯುಕ್ತ ಸಹಕಾರಿಯ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಯೆ ವಿಶೇಷ ಸಂಚಿಕೆಯನ್ನು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವಾರ ಪತ್ರಿಕೆಯಾದ ಸಹಕಾರ ವಾರ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ಬಿಡುಗಡೆ ಮಾಡಿದರು. 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಕಾರ್ಯಕ್ರಮದಲ್ಲಿ 5000 ಸಹಕಾರಿಗಳು ಭಾಗವಹಿಸಿದ್ದರು.

## ಉತ್ತಮ ಸಹಕಾರ ಸಂಸ್ಥೆಗಳಿಗೆ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ

70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಉತ್ತಮ ಸೌಹಾರ್ದ ಸಹಕಾರಿ ಹಾಗೂ ಶ್ರೇಷ್ಠ ಸಹಕಾರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.









ಭಾಗವಹಿಸಿದ ಸಹಕಾರಿಗಳು

### ಸನ್ಮಾನಿತ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳು. (ಸೌಹಾರ್ದ ಸಹಕಾರಿ ಕ್ಷೇತ್ರದ ರಾಜ್ಯಮಟ್ಟದ ಪ್ರಶಸ್ತಿ )

1. ಅಕ್ಷಯ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬಿ.ಹೆಚ್ ರಸ್ತೆ ಕ್ರಾಸ್, ಗೌರಿಬಿದನೂರು, ಚಿಕ್ಕಬಳ್ಳಾಪುರ
2. ಬಸವ ಸೌಹಾರ್ದ ಕ್ರೆಡಿಟ್ ಸಹಕಾರ ಸಂಘ ನಿ., ಬೆಳಗಾವಿ ರೋಡ್, ಬೈಲಹೊಂಗಲ, ಬೆಳಗಾವಿ
3. ರಡ್ಡೇರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಲಿಂಗಸೂಗೂರು, ರಾಯಚೂರು
4. ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಾಳೀಕೋಟೆ, ವಿಜಯಪುರ
5. ಸಹನಾ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಕೆಆರ್ ಪುರಂ, ಹಾಸನ

### ಸೌಹಾರ್ದ ಸಹಕಾರಿ ಕ್ಷೇತ್ರದ ಜಿಲ್ಲಾ ಮಟ್ಟದ ಪ್ರಶಸ್ತಿ

1. ಶಿವಸಂಗಮ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಶ್ರೀ ತೋಂಟದಾರ್ಯ ಕಾಂಪ್ಲೆಕ್ಸ್, ಭೂಮರೆಡ್ಡಿ ಸರ್ಕಲ್ ಹತ್ತಿರ, ಗದಗ
2. ಮಿಲ್ಲತ್ ಸೌಹಾರ್ದ ಸಹಕಾರಿ ನಿ., ಎನ್‌ಎಂ, ಗುಲೇದಕೊಪ್ಪ ಬಿಲ್ಡಿಂಗ್, ಆಝಾದ ರಸ್ತೆ, ಆಳ್ನಾವರ, ಧಾರವಾಡ
3. ಶ್ರೀ ಶ್ರೀ ಗಾಯತ್ರಿ ಸೌಹಾರ್ದ ಸಹಕಾರಿ ನಿ., ಎ ಬ್ಲಾಕ್, 1ನೇ ಕ್ರಾಸ್, ವಿದ್ಯಾನಗರ, ಹಾವೇರಿ.

### ಸನ್ಮಾನಿತ ಶ್ರೇಷ್ಠ ಸಹಕಾರಿಗಳು (ಸೌಹಾರ್ದ ಸಹಕಾರಿ ಕ್ಷೇತ್ರದ ರಾಜ್ಯಮಟ್ಟದ ಪ್ರಶಸ್ತಿ )

1. ಶ್ರೀ ಲಿಂಗೇಶ್ ಕುಮಾರ್, ಮಾನ್ಯ ಅಧ್ಯಕ್ಷರು, ನಂದಿನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಚರ್ಚ್ ರಸ್ತೆ, ಚನ್ನಪಟ್ಟಣ ಟೌನ್, ರಾಮನಗರ
2. ಶ್ರೀಮತಿ ಸುನೀತಾ ಅಶೋಕ ಹಲಗೇಕರ್, ಮಾನ್ಯ ಅಧ್ಯಕ್ಷರು, ವಿಮಲ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ
3. ಶ್ರೀ ಬಸವನಯ್ಯ ಗುರುಸಿದ್ದಯ್ಯ ಜವಳಿ, ಮಾನ್ಯ ಉಪಾಧ್ಯಕ್ಷರು, ಶ್ರೀ ಹೇಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ, ಧಾರವಾಡ
4. ಶ್ರೀ ಐಗೋಳ ಚಿದಾನಂದಾ, ಮಾನ್ಯ ನಿರ್ದೇಶಕರು, ಮಲ್ಲಿಗೆ ಸೌಹಾರ್ದ ಪತ್ತಿನ ಸಹಕಾರಿ ನಿ., ವಿಜಯನಗರ, ಹೂವಿನಡಗಲಿ
5. ಶ್ರೀ ಎಂ ಕೆ ಸೋಮಯ್ಯ, ಮಾನ್ಯ ನಿರ್ದೇಶಕರು, ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಪೊನ್ನಂಪೇಟೆ, ಕೊಡಗು.

### ಇತರೆ ಸಹಕಾರಿ ಸಂಸ್ಥೆಗಳಿಗೆ ಪ್ರಶಸ್ತಿ ಹಾಗೂ ಸನ್ಮಾನ ನೀಡಿದ ವಿವಿರ :

1. ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಪ್ರತಿ ತಾಲ್ಲೂಕಿಗೆ ಒಂದರಂತೆ ಒಟ್ಟು 17 ಕೃಷಿ ಪತ್ತಿನ ಸಹಕಾರ ಸಂಘಗಳಿಗೆ
2. ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಪ್ರತಿ ತಾಲೂಕಿನಿಂದ ಒಂದರಂತೆ 17 ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ
3. ರಾಜ್ಯದ 22 ಉತ್ತಮ ಪತ್ತಿನ ಸಹಕಾರ ಸಂಘಗಳಿಗೆ
4. ಧಾರವಾಡ, ಗದಗ, ಹಾವೇರಿ ಜಿಲ್ಲೆಗೊಂದರಂತೆ ಗ್ರಾಹಕರ, ಪಟ್ಟಣ ಬ್ಯಾಂಕು, ಟಿಎಪಿಸಿಎಂಎಸ್, ಮಹಿಳಾ ಹಾಗು ಪಿಕಾರ್ಡ್ ಬ್ಯಾಂಕುಗಳಿಗೆ ಸನ್ಮಾನಿಸಲಾಯಿತು.
5. ಶ್ರೀ ನಿಂಬಣ್ಣ ಕಲ್ಲಪ್ಪ ಕುಬ್ಯಾಳ, ನಿರ್ದೇಶಕರು, ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಇವರಿಗೆ ವಿಶೇಷ ಶ್ರೇಷ್ಠ ಸಹಕಾರ ಸನ್ಮಾನ ನೀಡಿ ಗೌರವಿಸಲಾಯಿತು.

ಎಲ್ಲ ಸನ್ಮಾನಿತರಿಗೆ ಶಾಲು, ಮೊಮೆಂಟೂ ಹಾಗೂ ಹಾರ ಹಾಕಿ ಸನ್ಮಾನಿಸಲಾಯಿತು. ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಜನವರಿ 01 ರಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಸೌಹಾರ್ದ ಸಹಕಾರಿಗಳಿಗೆ ಮನವಿ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 01, 2001 ರಂದು ಜಾರಿಗೆ ಬಂದ ಹಿನ್ನೆಲೆಯಲ್ಲಿ ಪ್ರತಿ ವರ್ಷ ಜನವರಿ 01ರಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನಾಚರಣೆಯನ್ನಾಗಿ ಆಚರಿಸುತ್ತಾ ಬರಲಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನದ ಜ್ಞಾಪಕಾರ್ಥ ಮತ್ತು ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಕಾರಣವಾದ ದಿನವೆಂದು ಆಚರಿಸಲಾಗುತ್ತಿದೆ. ಸೌಹಾರ್ದ ಸಹಕಾರಿ ದಿನವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ಸಹಕಾರಿ ಸಪ್ತ ವರ್ಣದ ಧ್ವಜಾರೋಹಣ ಮಾಡುವುದರ ಮೂಲಕ ಉತ್ತಮ ರೀತಿಯಲ್ಲಿ ಆಚರಿಸಲು ಕೋರಿದೆ.

ಸದರಿ ದಿನದಂದು ಸಭೆ, ಸಮಾರಂಭಗಳನ್ನು ಏರ್ಪಡಿಸಿ, ಹಿರಿಯ ಸಹಕಾರಿ ಗಣ್ಯರನ್ನು ಗೌರವಿಸುವುದು, ಸಹಕಾರಿಯ ವ್ಯಾಪ್ತಿಯ ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುವುದು, ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪರಿಣಿತರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಹಾಗೂ ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು, ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದು, ಸಹಕಾರ ಕುರಿತಾದ ಜಾಗೃತಿಯನ್ನು ಮೂಡಿಸುವ ಜಾಥಾ ನಡೆಸುವುದು, ಪರಿಸರ ಜಾಗೃತಿ ಮೂಡಿಸುವುದು, ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು, ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ರೋಗಿಗಳ ಆರೋಗ್ಯ ಸುಧಾರಣೆಗೆ ಹಣ್ಣು ಹಂಪಲುಗಳನ್ನು ವಿತರಿಸುವುದು, ಠೇವಣಿ ಸಂಗ್ರಹ ಯೋಜನೆ, ಸಾಲ ವಸೂಲಾತಿ ಕ್ರಮಗಳು, ಸೌಹಾರ್ದ ಸಹಕಾರಿ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವಂತಹ ಸಭೆ ಸಮಾರಂಭಗಳನ್ನು ಏರ್ಪಡಿಸುವುದು ಸೇರಿದಂತೆ ಇತ್ಯಾದಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಹಾಗೂ ವಿಶ್ವಾಸಾರ್ಹತೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮವಿಡಲು ತಿಳಿಸಿದೆ. ಸೌಹಾರ್ದ ಸಹಕಾರಿ ದಿನಾಚರಣೆಯ ವರದಿ ಹಾಗೂ ಛಾಯಾಚಿತ್ರಗಳನ್ನು ಸಂಯುಕ್ತ ಸಹಕಾರಿಗೆ ಪತ್ರದ / souharda@souharda.coop ಗೆ ಇ-ಮೇಲ್ ಮೂಲಕ ಕಳುಹಿಸಲು ಕೋರಿದೆ.

# ರಾಷ್ಟ್ರೀಯ ಸಹಕಾರ ನೀತಿ "ಕರಡು" ವಿಷಯಗಳ ಕುರಿತು ರಾಷ್ಟ್ರೀಯ ಸಹಕಾರ ನೀತಿ ಸಮಿತಿ ಕಾರ್ಯಾಗಾರ



**ಬೆಂಗಳೂರು :** ದಕ್ಷಿಣ ರಾಜ್ಯಗಳ ಸಹಕಾರಿಗಳೊಂದಿಗೆ ವಿಚಾರ ವಿನಿಮಯ ನಡೆಸುವುದಕ್ಕಾಗಿ ವೈಕುಂಠ ಮೆಹತಾ ಸಹಕಾರಿ ಆಡಳಿತ ತರಬೇತಿ ಕೇಂದ್ರ ಪುಣೆ ಹಾಗೂ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಬೆಂಗಳೂರು ಸಹಯೋಗದೊಂದಿಗೆ ಬೆಂಗಳೂರಿನ ಅಪೆಕ್ಸ್ ಬ್ಯಾಂಕ್ ಸಿಬ್ಬಂದಿ ತರಬೇತಿ ಸಭಾಂಗಣದಲ್ಲಿ ರಾಷ್ಟ್ರೀಯ ಸಹಕಾರ ನೀತಿಯ ಕರಡು ಪತ್ರದಲ್ಲಿರುವ ಪ್ರಮುಖ ಅಂಶಗಳ ಬಗ್ಗೆ ವಿಚಾರ ವಿನಿಮಯದ ಕಾರ್ಯಾಗಾರವನ್ನು ದಿನಾಂಕ 23 ನವೆಂಬರ್ 2023 ರಂದು ಏರ್ಪಡಿಸಲಾಗಿತ್ತು. ಶ್ರೀ ಸುರೇಶ ಪ್ರಭು, ಅಧ್ಯಕ್ಷರು, ರಾಷ್ಟ್ರೀಯ ಸಹಕಾರ ನೀತಿ ಸಮಿತಿ ಇವರು ಉದ್ಘಾಟಿಸಿದರು.

### ದೇಶದ ಅಭಿವೃದ್ಧಿಗೆ ಸಹಕಾರಿ ಕ್ಷೇತ್ರವೇ ಹೆದ್ದಾರಿ ಶ್ರೀ ಸುರೇಶ ಪ್ರಭು

ಕಾರ್ಯಕ್ರಮಮವನ್ನು ಉದ್ಘಾಟಿಸಿ ಮಾತನಾಡಿದ ರಾಷ್ಟ್ರೀಯ ಸಹಕಾರ ನೀತಿ ಸಮೀತಿಯ ಅಧ್ಯಕ್ಷರಾದ ಶ್ರೀ ಸುರೇಶ ಪ್ರಭುರವರು ಸಹಕಾರ ಕ್ಷೇತ್ರಕ್ಕೆ ಸಾಕಷ್ಟು ಅವಕಾಶಗಳಿವೆ. ಸ್ವಾಭಾವಿಕ ಹಾಗೂ ಮಾನವ ಸಂಪನ್ಮೂಲಗಳ ಕೊರತೆ ಇರುವುದಿಲ್ಲ. ನಾವು ಈ ಕ್ಷೇತ್ರದ ಸಂಪೂರ್ಣ ಪ್ರಯೋಜನಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಸಹಕಾರ ಕ್ಷೇತ್ರಕ್ಕೆ ಈ ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಿದೆ. ಸುಸ್ಥಿರ ಅಭಿವೃದ್ಧಿಯಲ್ಲಿ ಉತ್ತಮ ಕಾರ್ಯನಿರ್ವಹಿಸಬೇಕಿದೆ. ಸಹಕಾರ ಕ್ಷೇತ್ರವನ್ನು ಈ ದೇಶದ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಗುರುತಿಸುವ ಪ್ರಯತ್ನವಾಗಿಯೆ ಕೇಂದ್ರ ಸರಕಾರ ಸಹಕಾರ ಕ್ಷೇತ್ರಕ್ಕೆ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭಿಸಿದೆ. ಸಹಕಾರ ಕ್ಷೇತ್ರಕ್ಕೆ ತನ್ನದೇ ಆದ ರಾಷ್ಟ್ರೀಯ ಸಹಕಾರ ನೀತಿ ಇರಬೇಕು ಎಂಬ ಮಹತ್ವಾಂಕಾಕ್ಷೆಯ ಒಂದಿದೆ. ಅದಕ್ಕಾಗಿ ಸಮಿತಿ ರಚಿಸಿದೆ. ಸಮಿತಿಯು ದೇಶದ ಎಲ್ಲ ವಿಭಾಗಗಳಲ್ಲಿ ಈ ರೀತಿಯ ಕಾರ್ಯಾಗಾರಗಳನ್ನು ನಡೆಸಿ ಸಹಕಾರಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಈ ಕರಡು ಸಿದ್ಧಪಡಿಸಿದೆ ದೇಶವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಹಕಾರ ಕ್ಷೇತ್ರ ಹೆದ್ದಾರಿ ಎಂದು ತಿಳಿಸಿದರು.

ಸಭೆಯಲ್ಲಿ ಸಮಿತಿ ಸದಸ್ಯರಾದ ಶ್ರೀ ಸಿ. ಪಿಚೈ, ಡಾ. ಯಶವಂತ ಡೋಂಗ್ರೆ, ರಿಸರ್ವ ಬ್ಯಾಂಕ್ ನಿರ್ದೇಶಕರಾದ ಶ್ರೀ ಸತೀಶ ಮರಾಠೆ, ಶ್ರೀ ಕೃಷ್ಣ ಮಾಜಿ ವ್ಯವಸ್ಥಾಪಕ ನಿರ್ದೇಶಕರು, NAFCUB, ಸಹಕಾರ ಇಲಾಖೆಯ ಅಪರ ನಿಬಂಧಕರು, ಶ್ರೀ ಸತೀಶರವರು, ಸಹಕಾರ ಇಲಾಖೆಯ ನಿವೃತ್ತ ಹಿರಿಯ ಅಧಿಕಾರಿಗಳು ಡಾ. ಎಸ್.ಎ.ಸಿದ್ಧಾಂತಿ, ಶ್ರೀ ಕೆ.ಎಮ್.ಪ್ರಭು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಮುಂತಾದ 100ಕ್ಕೂ ಹೆಚ್ಚು ಸಹಕಾರಿ ಗಣ್ಯರು ಅಪೆಕ್ಸ್ ಬ್ಯಾಂಕ್ ಅಧಿಕಾರಿಗಳು ಮಹಾಮಂಡಳ ಅಧಿಕಾರಿಗಳು ಸಂಯುಕ್ತ ಸಹಕಾರಿ ಅಧಿಕಾರಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ವೈಕುಂಠ ಮೆಹತಾ ಸಹಕಾರ ತರಬೇತಿ ಸಂಸ್ಥೆಯ ಪುಣೆ ಇದರ ನಿರ್ದೇಶಕಿಯಾದ ಶ್ರೀಮತಿ ಹೇಮಾ ಯಾದವರವರು ಕರಡು ಸಹಕಾರ ನೀತಿಯ ಪ್ರಮುಖ ಅಂಶಗಳನ್ನು ವಿವರಿಸಿದರು. ವಿಶೇಷವಾಗಿ ರಾಷ್ಟ್ರೀಯ ಸಹಕಾರ ನೀತಿಯ ಅಗತ್ಯತೆ, ಸಹಕಾರ ಕ್ಷೇತ್ರದಲ್ಲಿ ಡಿಜಿಟಲೈಜೇಶನ್ ಅಗತ್ಯತೆ, ಆಧುನಿಕ ತಂತ್ರಜ್ಞಾನ ಅಳವಡಿಕೆಯ ಅಗತ್ಯತೆ, ಸಹಕಾರ ಶಿಕ್ಷಣ ಹಾಗೂ ತರಬೇತಿಯನ್ನು ಗ್ರಾಸರೂಟ್ ಹಂತಕ್ಕೆ ವಿಸ್ತರಿಸುವ ಅಗತ್ಯತೆ ಈ ಸಹಕಾರ ನೀತಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಒಂದು ಸುಗಮ ಹಾಗೂ ಸುಭದ್ರ ದಾರಿಯನ್ನು ಹಾಕಿಕೊಡುವ ನಿಟ್ಟಿನಲ್ಲಿ ಸಿದ್ಧಪಡಿಸಲಾಗಿದೆ ಮತ್ತು ಈ ಸಹಕಾರ ನೀತಿಯಲ್ಲಿ ಯೋಜನೆಗಳನ್ನು ಜಾರಿಮಾಡುವ ಬಗ್ಗೆ ಯೋಜನೆಗಳನ್ನು ಸಹ ಪ್ರಸ್ತುತ ಪಡಿಸಲಾಗಿದೆ ಎಂದು ತಿಳಿಸಿದರು.

### ಗ್ರಾಮೀಣ ಮಟ್ಟದಲ್ಲಿ ಉಳಿತಾಯ ಹಾಗೂ ಠೇವಣಿ ಸಂಗ್ರಹಕ್ಕೆ ಸರಳೀಕೃತ ಸಾಲ ಪಡೆಯುವ ವ್ಯವಸ್ಥೆ ಅಗತ್ಯ : ಶ್ರೀ ಸತೀಶ ಮರಾಠೆ.

ಶ್ರೀ ಸತೀಶ ಮರಾಠೆಯವರು ಮಾತನಾಡಿ ರಾಷ್ಟ್ರದ ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಡಿಸಿಸಿ ಬ್ಯಾಂಕ್ ಇರಬೇಕು. ಪ್ರತಿಯೊಂದು ಬ್ಯಾಂಕು ಸಹ ಕಂಪ್ಯೂಟರಿಕರಣವಾಗಬೇಕು ಹಾಲಿ ಇರುವ 1500 ಪಟ್ಟಣ ಸಹಕಾರ ಬ್ಯಾಂಕುಗಳನ್ನು ಗ್ರಾಮ ಮಟ್ಟದ ವರೆವಿಗೂ ವಿಸ್ತರಿಸುವ ಯೋಜನೆ ಇದೆ. ಉಳಿತಾಯ ಮನೋಭಾವವನ್ನು ಬೆಳೆಸುವುದು, ಠೇವಣಿಗಳನ್ನು ಹೆಚ್ಚಿಸುವುದು, ದೇಶದ 1.2 ಲಕ್ಷ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ವಿವಿಧೋದ್ದೇಶ ಸಹಕಾರಿ ಸಂಘಗಳನ್ನಾಗಿ ಪರಿವರ್ತಿಸುವುದು ಮುಂತಾದ ಪ್ರಗತಿಪರ ವಿಷಯಗಳನ್ನು ಈ ನೀತಿಯಿಂದ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

### ಸಹಕಾರಿ ನೀತಿ ಕೇವಲ ಆಶಯಗಳ ಜೊತೆಗೆ ಅಭಿವೃದ್ಧಿಯ ದಿಕ್ಸೂಚಿ : ಡಾ. ಯಶವಂತ ಡೋಂಗ್ರೆ

ಸಹಕಾರ ನೀತಿ ಸಮಿತಿಯ ಸದಸ್ಯರು ಹಾಗೂ ಚಾಣಕ್ಯ ವಿಶ್ವ ವಿದ್ಯಾಲಯದ ಉಪಕುಲಪತಿಗಳೂ ಆಗಿರುವ ಡಾ. ಯಶವಂತ ಡೋಂಗ್ರೆಯವರು ಮಾತನಾಡಿ ಈ ಸಮಿತಿಯು ಸಿದ್ಧಪಡಿಸಿರುವ ಕರಡು ನೀತಿಯಲ್ಲಿ ಕೇವಲ ಸಹಕಾರಿ ಕ್ಷೇತ್ರದ ಆಶಯಗಳಿಗೆ ಒತ್ತು ನೀಡಲಾಗಿಲ್ಲ. ಸಮಗ್ರ ಸಹಕಾರ ಕ್ಷೇತ್ರದ ಅಭಿವೃದ್ಧಿ ಮಾರ್ಗದರ್ಶಿಯಾಗಿದೆ. ದಿಕ್ಸೂಚಿ ಯಾಗಿದೆ. ಈ ಕ್ಷೇತ್ರ ಅಭಿವೃದ್ಧಿಯಲ್ಲಿ ಸಹಕಾರಿಗಳಲ್ಲಿ ಆಂತರಿಕ ಪರಸ್ಪರ ಸಹಕಾರ ವ್ಯವಸ್ಥೆಯನ್ನು ಭದ್ರಪಡಿಸುವುದು ಅಗತ್ಯ ಸಹಕಾರ ಸಂಸ್ಥೆಗಳನ್ನು ದೇಶದ ಅರ್ಥ ವ್ಯವಸ್ಥೆಯಲ್ಲಿ ಹಾಗೂ ಸಾರ್ವಜನಿಕ ವಲಯದಲ್ಲಿ ಮಹತ್ವದ ಅಂಗವಾಗಿ ಗುರುತಿಸುವ ವ್ಯವಸ್ಥೆಯಾಗುವಲ್ಲಿ ಈ ಸಹಕಾರ ನೀತಿಯನ್ನು ಸಿದ್ಧಪಡಿಸಲಾಗಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಹಕಾರ ಇಲಾಖೆಯ ಅಪರ ನಿಬಂಧಕರ ಹಾಗೂ ಸಹಕಾರ ಲೆಕ್ಕಪರಿಶೋಧನಾಖೆಯ ನಿರ್ದೇಶಕ ಶ್ರೀ ದಿವಾಕರ ರವರು ಎಲ್ಲ ಅತಿಥಿ ಗಣ್ಯರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು. ಸಭೆಯಲ್ಲಿ ಅನೇಕ ಸಹಕಾರಿ ಗಣ್ಯರು ತಮ್ಮ ಸಲಹೆಗಳನ್ನು ನೀಡಿದರು. ಶ್ರೀ ಷಡಕ್ಷರಿ, ಉಪನಿರ್ದೇಶಕರು ವ್ಯಾಮ್ನಿಕಾಮ್ ಇವರು ಕಾರ್ಯಕ್ರಮ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು ಮಾಡಿದರು.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಶ್ರೀ ಸುರೇಶ ಪ್ರಭು ಭೇಟಿ



**ಬೆಂಗಳೂರು :** ರಾಷ್ಟ್ರೀಯ ಸಹಕಾರ ನೀತಿ ಸಮಿತಿಯ ಅಧ್ಯಕ್ಷರಾದ ಶ್ರೀ ಸುರೇಶ ಪ್ರಭುರವರು ದಿನಾಂಕ 23.11.2023 ರಂದು ಸಂಯುಕ್ತ ಸಹಕಾರಿ ಕೇಂದ್ರ ಕಛೇರಿಗೆ ಭೇಟಿ ನೀಡಿ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚೆ ಮಾಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಸಿಬ್ಬಂದಿ ವರ್ಗದವರು ಶ್ರೀಯುತರನ್ನು ಸ್ವಾಗತಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ದೇಶದ ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ ಮರು ಹಣಕಾಸು ಯೋಜನೆಯನ್ನು ರೂಪಿಸಲು ಸಹಕಾರ ನೀತಿಯಲ್ಲಿ ಅವಕಾಶವಿರಬೇಕು ಮತ್ತು ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ ಅಪೆಕ್ಸ್ ಬ್ಯಾಂಕ್ ಮಾದರಿಯಲ್ಲಿ ಪ್ರತಿ ರಾಜ್ಯದಲ್ಲಿ ಒಂದು ಬ್ಯಾಂಕ್ ಸ್ಥಾಪನೆಗೆ ಅವಕಾಶವಿರಬೇಕು ಮತ್ತು ಗ್ರಾಹಕರ ನ್ಯಾಯಾಲಯದ ಮಾದರಿಯಲ್ಲಿ ಜಿಲ್ಲಾ, ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿ ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸುವ ಅವಕಾಶವಾಗುವಂತೆ ಈ ಸಹಕಾರ ನೀತಿ ಒಳಗೊಂಡಿರಬೇಕು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಮೈಸೂರು :** ದಿನಾಂಕ 28.11.2023 ರಂದು ಮಂಗಳವಾರ, ಬೆಳಿಗ್ಗೆ 10.30 ಗಂಟೆಗೆ, ಮೈಸೂರು ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ರೋಟರಿ ಕ್ಲಬ್, ಜೆ.ಎಲ್.ಬಿ ರಸ್ತೆ ಮೈಸೂರು, ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿಕಟಪೂರ್ವ ಮಾನ್ಯ ನಿರ್ದೇಶಕರು ಮತ್ತು ಶಿಕ್ಷಣ ಹಾಗೂ ಸಲಹಾ ಸಮಿತಿ ಸದಸ್ಯರಾದ ಡಾ. ಎಚ್. ವಿ. ರಾಜೀವ್ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು, ಕೊಡಗು ಹಾಗೂ ಮಂಡ್ಯ ಜಿಲ್ಲೆ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್. ಆರ್. ನಾರಾಯಣರಾವ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಮಾನ್ಯ ಜಂಟಿ ನಿರ್ದೇಶಕರಾದ ಶ್ರೀ ರವಿ ರವರು, ಒಕ್ಕೂಟದ ನಿರ್ದೇಶಕರಾದ ಶ್ರೀ ನವೀನ ಹೆಚ್.ಎನ್ ರವರು, ಸಪ್ತರ್ಷಿ ಪತ್ತಿನ ಸೌಹಾರ್ದ ಸಹಕಾರಿ ನಿ., ಮೈಸೂರು ಅಧ್ಯಕ್ಷರಾದ ಶ್ರೀ ನಾಗಚಂದ್ರ ರವರು, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುಭಾಷ ಹೆಗ್ಡೆ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ ರವರು ನೆರವೇರಿಸಿದರು. ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಜವಾಹರ ಮುಗ್ಗನವರ ರವರು, ನಿರೂಪಣೆಯನ್ನು ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಭಗೀರಥ ಎಸ್.ಸಿ ಹಾಗೂ ವಂದನಾರ್ಪಣೆಯನ್ನು ಒಕ್ಕೂಟದ ನಿರ್ದೇಶಕರಾದ ಶ್ರೀ ಗಿರೀಶ್ ಎನ್.ಜಿ ರವರು ನೆರವೇರಿಸಿದರು.

ಮೊದಲನೇ ಅವಧಿಯಲ್ಲಿ ನಿರ್ದೇಶಕರಲ್ಲಿ ಇರಬೇಕಾದ ನಾಯಕತ್ವ ಗುಣಗಳು ಮತ್ತು ಆಡಳಿತ ನಿರ್ವಹಣೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುಭಾಷ ಹೆಗ್ಡೆ ರವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ಶ್ರೀಧರ ಮಾಟೊಳ್ಳಿ, ದಾವಾ ಪಂಚಾಯತಿ ನ್ಯಾಯಾಲಯ, ಬೆಂಗಳೂರು ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು ಮತ್ತು ಕೊಡಗು ಜಿಲ್ಲೆಗಳ 56 ಸಹಕಾರಿಗಳಿಂದ 82 ಜನ ಪ್ರತಿನಿಧಿಗಳು ಹಾಜರಾಗಿದ್ದರು.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮಗಳು




**ಉತ್ತರ ಕನ್ನಡ:** ದಿನಾಂಕ 27 ನವೆಂಬರ್ 2023 ರಂದು ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ, ಇಲ್ಲಿ ಹೊನ್ನಾವರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು.

ಭಾಗವಹಿಸಿದ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಪ್ರಸ್ತುತ ಸಹಕಾರಿ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ 18 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 27 ನವೆಂಬರ್ 2023 ರಂದು ಭಟ್ಕಳ ಸೌಹಾರ್ದ ಸಹಕಾರಿ ಸಂಘ ನಿ., ಭಟ್ಕಳ, ಇಲ್ಲಿ ಭಟ್ಕಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು.

ನಂತರದಲ್ಲಿ ಸಹಕಾರಿಯ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸಿ ಪ್ರಸ್ಥುತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ಒದಗಿಸಲಾಯಿತು. ತರಬೇತಿಯಲ್ಲಿ 19 ಸೌಹಾರ್ದ ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 28 ನವೆಂಬರ್ 2023 ರಂದು ಮಿಸ್ಪ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಕಾರವಾರ ಇಲ್ಲಿ ಕಾರವಾರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ಮಾಹಿತಿ ನೀಡಲಾಯಿತು. ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು.

ತರಬೇತಿಯಲ್ಲಿ ಭಾಗವಹಿಸಿದ ಸಹಕಾರಿಗಳೊಂದಿಗೆ ಮಾನ್ಯ ನಿರ್ದೇಶಕರು ಚರ್ಚಿಸುತ್ತ ಪ್ರಸ್ತುತ ಸಹಕಾರಿಗಳಿಗೆ ಅನ್ವಯಿಸುವ ವಿದ್ಯಮಾನಗಳ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ 21 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 28 ನವೆಂಬರ್ 2023 ರಂದು ಜಿಲ್ಲಾ ಸಹಕಾರ ಯೂನಿಯನ್ ನಿ., ಕಛೇರಿ, ಕುಮುಟಾದಲ್ಲಿ ಕುಮುಟಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು.

ಭಾಗವಹಿಸಿದ ಸಹಕಾರಿಯ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು

ಪ್ರಸ್ತುತ ಸಹಕಾರಿ ಕ್ಷೇತ್ರದ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿಯನ್ನು ಸಹಕಾರಿಗಳಿಗೆ ನೀಡಿದರು. ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 38 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 29 ನವೆಂಬರ್ 2023 ರಂದು ಹೋಟೆಲ್ ಅಂಕೋಲಾ ಇಂಟರ್‌ನ್ಯಾಷಿನಲ್, ಅಂಕೋಲಾ ಇಲ್ಲಿ ಅಂಕೋಲಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು.

ತರಬೇತಿಯಲ್ಲಿ ಭಾಗವಹಿಸಿದ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸಿ ಪ್ರಸ್ತುತ ಸಹಕಾರಿ ಕ್ಷೇತ್ರದ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ಒದಗಿಸಲಾಯಿತು. ತರಬೇತಿಯಲ್ಲಿ 21 ಸೌಹಾರ್ದ ಸಹಕಾರಿಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 29 ನವೆಂಬರ್ 2023 ರಂದು ಹೋಟೆಲ್ ಅಂಕೋಲಾ ಇಂಟರ್‌ನ್ಯಾಷಿನಲ್, ಅಂಕೋಲಾ ಇಲ್ಲಿ ಅಂಕೋಲಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕ'ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು.

ಕೊನೆಯಲ್ಲಿ ಭಾಗವಹಿಸಿದ ಸಹಕಾರಿಯ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸುತ್ತಾ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ನೀಡಿದರು. ತರಬೇತಿಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಳಗಾವಿ** : ದಿನಾಂಕ 29 ನವೆಂಬರ್ 2023ರಂದು ಶ್ರೀ ಹರಿಪ್ರಿಯಾ ಸೇವಾ ಪತ್ತಿನ ಸೌಹಾರ್ದ ಸಹಕಾರಿ ನಿ., ಖಾನಾಪೂರ, ಇಲ್ಲಿ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಸೌಹಾರ್ದ ಸಹಕಾರಿ ಸಂಘಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜನೆ ಮಾಡಲಾಗಿತ್ತು. ತರಬೇತಿಯ ಯಲ್ಲಿ ಕಲಂ 34ರ ಮಾಹಿತಿ, 2023-24ರ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ ವಿವರ, ವಾರ್ಷಿಕ ಶುಲ್ಕ ಶಿಕ್ಷಣ ನಿಧಿ ಸಲ್ಲಿಕೆ, ಆಡಳಿತ ಮಂಡಳಿ ಸಭೆ ಜರುಗಿಸುವ ರೀತಿ, ಅರ್ಧ ವಾರ್ಷಿಕ ಮಾಹಿತಿ ಸಲ್ಲಿಕೆ, ಸಹಕಾರಿಯ ಚುನಾವಣೆ, ಸಹಕಾರಿ ಲೆಕ್ಕ ಪರಿಶೋಧನೆ ವರದಿ ಸಲ್ಲಿಕೆ ಕುರಿತಂತೆ ಸಹಕಾರಿಗಳಿಗೆ ಮಾರ್ಗದರ್ಶನ ನೀಡಲಾಯಿತು. ತರಬೇತಿಯಲ್ಲಿ 20 ಸಹಕಾರಿಗಳಿಂದ 31 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟ** : ದಿನಾಂಕ 06 ನವೆಂಬರ್ 2023ರಂದು ಶ್ರೀ ಸಾಯಿ ಮಂದಿರ, ವಿದ್ಯಾಗಿರಿ, ಜಿ: ಬಾಗಲಕೋಟ ಇಲ್ಲಿ ಬಾಗಲಕೋಟೆ ಜಿಲ್ಲೆಯ ಬಾಗಲಕೋಟ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರ ಮಾಹಿತಿ, ಸಹಕಾರಿಗಳು ಸಾಮಾನ್ಯ ಸಭೆಯ ಜರುಗಿಸಿದ ತರುವಾಯ ನಿರ್ವಹಿಸಬೇಕಾದ ಕೆಲಸ ಕಾರ್ಯಗಳು, ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳು, ಅರ್ಧವಾರ್ಷಿಕ ಮಾಹಿತಿ ಸಲ್ಲಿಕೆ ಹಾಗೂ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಮಾಹಿತಿಗಳನ್ನು ನೀಡಲಾಯಿತು. ಈ ತರಬೇತಿಯಲ್ಲಿ 18 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಳಗಾವಿ** : ದಿನಾಂಕ 24 ನವೆಂಬರ್ 2023ರಂದು ಸಂಯುಕ್ತ ಸಹಕಾರಿ, ಬೆಳಗಾವಿ ಪ್ರಾಂತೀಯ ಕಛೇರಿ, ತರಬೇತಿ ಸಭಾಂಗಣ, ಬೆಳಗಾವಿ, ಇಲ್ಲಿ ಬೆಳಗಾವಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಚುನಾವಣಾ ಮಾಹಿತಿ, ಕಲಂ 34ರ ಮಾಹಿತಿ, ಲೆಕ್ಕಪ-ರಿಶೋಧನಾ ವರದಿ ಸಲ್ಲಿಕೆ ಕುರಿತು, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಕೆ, ಆಡಳಿತ ಮಂಡಳಿ ಸಭೆಗಳನ್ನು ಜರುಗಿಸುವ ಕುರಿತು, ಸುಸ್ಥಿ ಸಾಲಗಳ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು, ಅರ್ಧ ವಾರ್ಷಿಕ ಮಾಹಿತಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಕುರಿತು ಮಾಹಿತಿಗಳನ್ನು ನೀಡಲಾಯಿತು. ಈ ತರಬೇತಿಯಲ್ಲಿ 36 ಸೌಹಾರ್ದ ಸಹಕಾರಿಗಳಿಂದ 45 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಕ್ಷಿಣ ಕನ್ನಡ** : ದಿನಾಂಕ 24.11.2023 ರಂದು ಪುತ್ತೂರು ಮತ್ತು ಸುಳ್ಯ ತಾಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕ-ರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜನೆ ಮಾಡಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಶ್ರೀ ಎಸ್ ಆರ್ ಸತೀಶ್ಚಂದ್ರ ಇವರು ಉದ್ಘಾಟಿಸಿದರು. ಸದರಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಸಹಕಾರಿಯ ದೈನಂದಿನ ಆಡಳಿತ ನಿರ್ವಹಣೆ ಕುರಿತು ಮಾಹಿತಿಯನ್ನು ನೀಡಲಾಯಿತು. ಸದರಿ ಸಭೆಗೆ 28 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಹಕಾರ ಹಾಗೂ ಬ್ಯಾಂಕಿಂಗ ಡಿಪ್ಲೋಮಾ (ಡಿ.ಸಿ.ಬಿ.ಎಮ್) ಮಾಹಿತಿ

ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಜಂಟಿ ಆಶ್ರಯದಲ್ಲಿ ನಡೆಸುತ್ತಿರುವ ಡಿ.ಸಿ.ಬಿ.ಎಮ್ ಕೋರ್ಸಿನ ಮಾಹಿತಿ.

**2ನೇ ಸೆಮಿಸ್ಟರ್ ಸಂಪರ್ಕ ವರ್ಗಗಳು (ಕಂಟ್ಯಾಕ್ಟ ಕ್ಲಾಸಗಳು)**

1. **ದಿನಾಂಕ : ಡಿಸೆಂಬರ 9 ಹಾಗೂ 10**
2. ಕೇಂದ್ರಗಳು 11 ಬೆಂಗಳೂರು, ಶಿವಮೊಗ್ಗ, ಉಡುಪಿ, ಬಾಗಲಕೋಟ, ಜಮಖಂಡಿ, ಹುಬ್ಬಳ್ಳಿ, ಶಿರಸಿ, ಹೊಸಪೇಟೆ, ಬಳ್ಳಾರಿ, ಸಿಂಧನೂರು, ಬೆಲ್ಲದ ಬಾಗೇವಾಡಿ,
3. **2ನೇ ಸೆಮಿಸ್ಟರ ಪರೀಕ್ಷೆಗಳು : ದಿನಾಂಕ ಡಿಸೆಂಬರ್ 30, 31**
4. (ಇಂಟರ್ನಲ್‌ಶಿಪ್) ಸಾಂಸ್ಥಿಕ ಅಧ್ಯಯನ ವರದಿಗಳನ್ನು ಸರಿಯಾಗಿ ಸಲಿಸ್ಲಿರುವುದಿಲ್ಲವಾದ ಕಾರಣ ಕೆಲವು ಫಲಿತಾಂಶಗಳನ್ನು ತಡೆಹಿಡಿಯಲಾಗಿದೆ ಎಂದು ವಿಶ್ವವಿದ್ಯಾಲಯದವರು ತಿಳಿಸಿದ್ದಾರೆ. ಸದರಿ ಅಭ್ಯರ್ಥಿಗಳು ಮತ್ತೊಮ್ಮೆ ಸರಿಯಾಗಿ ಸಾಂಸ್ಥಿಕ ಅಧ್ಯಯನ ವರದಿಗಳನ್ನು ಸಲ್ಲಿಸಿದ ನಂತರ ಅವರ ಫಲಿತಾಂಶವನ್ನು ಬಿಡುಗಡೆಮಾಡಲಾಗುವುದು ಎಂದು ವಿಶ್ವವಿದ್ಯಾಲಯದವರು ತಿಳಿಸಿದ್ದಾರೆ.
5. ಪರೀಕ್ಷೆಯಲ್ಲಿ ಅನೂತ್ತೀರ್ಣರಾದ ಅಭ್ಯರ್ಥಿಗಳು ಮತ್ತು ಗೈರ ಹಾಜರಾಗಿರುವ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶವನ್ನು ನೀಡಲಾಗುವುದು ಪುನ: (ಸಪ್ಲಿಮೆಂಟರಿ) ಪೂರಕ ಪರೀಕ್ಷೆ ಮಾಡಲಾಗುವುದು. ಒಂದು ಪೇಪರಿಗೆ 1500 ರೂಗಳ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕಾಗುತ್ತದೆ ಈ ಬಗ್ಗೆ ವಿಶ್ವವಿದ್ಯಾಲಯದವರು ಶೀಘ್ರದಲ್ಲಿ ನೋಟಿಫಿಕೇಶನ್ ಹೊರಡಿಸಲಾಗುವುದೆಂದು ತಿಳಿಸಲಾಗಿದೆ. ಡಿ.ಸಿ.ಬಿ.ಎಮ್ ಅಭ್ಯರ್ಥಿಗಳು ಈ ವಿಷಯಗಳನ್ನು ಗಮನಿಸಲು ಕೋರಿದೆ.

## 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ನಿಮಿತ್ತ ಪ್ರಬಂಧ ಸ್ಪರ್ಧೆ ಫಲಿತಾಂಶ ಪಟ್ಟಿ

| ಕ್ರ.ಸಂ. | ಹೆಸರು | ಸ್ಥಳ | ಸಹಕಾರಿ ಹೆಸರು | ಪಡೆದ ಸ್ಥಾನ |
|---|---|---|---|---|
| 1 | ಶ್ರೀಮತಿ ದಿವ್ಯ ಟಿ. | ಬೆಂಗಳೂರು | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., | ಪ್ರಥಮ |
| 2 | ಶ್ರೀಮತಿ ಸುನೀತಾ ದೀಪಕ | ಬೆಳಗಾವಿ | ಶ್ರೀ ತಿರುಪತಿ ವಿವಿದೋದ್ದೇಶ ಸೌಹಾರ್ದ ನಿ., | ದ್ವಿತೀಯ |
| 3 | ಶ್ರೀಮತಿ ಕವಿತ ಆರ್ | ಬೆಂಗಳೂರು | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., | ದ್ವಿತೀಯ |
| 4 | ಶ್ರೀ ಯಶವಂತ ಕುಮಾರ್ ಬಿ. | ಪುತ್ತೂರು | ರೋಯಲ್ ಸೌಹಾರ್ದ ಸಹಕಾರಿ ನಿ., | ತೃತೀಯ |
| 5 | ಶ್ರೀ ಬಲರಾಮ್ ಎನ್ | ಬೆಂಗಳೂರು | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., | ತೃತೀಯ |
| 6 | ಶ್ರೀ ಸತ್ಯಂ ಭಟ್ | ಕಾರವಾರ | ಕದಂಬ ಸೌಹಾರ್ದ ಸಹಕಾರಿ ಸಂಘ ನಿಯಮಿತ | ಸಮಾಧಾನಕರ |
| 7 | ಶ್ರೀ ಎಂ ನಾಗರಾಜ | ಮಾನವಿ | ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ | ಸಮಾಧಾನಕರ |
| 8 | ಜ್ಯೋತಿ | ಹೊಸಪೇಟೆ | ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ | ಸಮಾಧಾನಕರ |
| 9 | ಸೂರ್ಯಕಾಂತ ರ‍್ಯಾಕಲೆ | ಕಲಬುರಗಿ | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., | ಸಮಾಧಾನಕರ |
| 10 | ಜಗತ್ ವಿ. ಗೌಡ | ಚಿಕ್ಕಮಗಳೂರು | ಸುಭದ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಸಮಾಧಾನಕರ |
| 11 | ಭುವನೇಶ್ ಪ್ರಭಯ | ಮಣಿಪಾಲ | ಸಾರಸ್ವತ ಸೌಹಾರ್ದ ಸಹಕಾರಿ ನಿ., | ಸಮಾಧಾನಕರ |
| 12 | ಕಾಮಾಕ್ಷಿ ಎಂ ಕಂಚಗಾರ | ಬಾಗಲಕೋಟೆ | ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಸಮಾಧಾನಕರ |
| 13 | ಹೆಚ್. ಎಂ. ಬಸವರಾಜು | ಮಂಡ್ಯ | ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., | ಸಮಾಧಾನಕರ |

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರ ಸೌಹಾರ್ದ ಸಹಕಾರಿಗಳ ಭೇಟಿ



**ಕಲಬುರಗಿ :** ಲಕ್ಷ್ಮೀ ವಿಕಾಸ ಸೌಹಾರ್ದ ಸಹಕಾರಿ ನಿ., ತಡಕಲ್ ಸಹಕಾರಿಯು ಆಳಂದ ಶಾಖೆಯ ಪತ್ತಿನ ಸೇವೆಗಳ ಕಾರ್ಯರಂಭದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ನೆರವೇರಿಸಿದರು. ದಿವ್ಯ ಸಾನಿಧ್ಯ ಶ್ರೀ ಷ. ಬ್ರ. ಸಿದ್ದೇಶ್ವರ ಶಿವಾಚಾರ್ಯರು ಹಾಗೂ ಶ್ರೀ ಷ.ಬ್ರ ಸಿದ್ದಮಲ್ಲ ಶಿವಾಚಾರ್ಯರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಆಳಂದ ಮಾಜಿ ಶಾಸಕರಾದ ಶ್ರೀ ಸುಭಾಷ ಗುತ್ತೇದಾರ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ರವರು ವಹಿಸಿದ್ದರು. ಕಲಬುರಗಿ ಜಿಲ್ಲಾ ಒಕ್ಕೂಟದ ನಿರ್ದೇಶಕರುಗಳು, ಪ್ರಾಂತೀಯ ವ್ಯವಸ್ಥಾಪಕರು, ಸಹಕಾರಿಯ ಆಡಳಿತ ಮಂಡಳಿ ಸದಸ್ಯರುಗಳು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು



**ಕೋಲಾರ :** ದಿನಾಂಕ 29.11.2023ರಂದು ಗೋಲ್ಡ್ ಫೀಲ್ಡ್ ಸೌಹಾರ್ದ ಸಹಕಾರಿ ನಿ, ಕೋಲಾರ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಸಲಹೆ ಮಾರ್ಗದರ್ಶನ ನೀಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಬಿ. ಗೋಪಾಲಕೃಷ್ಣರವರು, ಉಪಾಧ್ಯಕ್ಷರಾದ ಶ್ರೀ ಶ್ರೀರಾಮಯ್ಯ ರವರು ಹಾಗೂ ಆಡಳಿತ ಮಂಡಲಿ ಸದಸ್ಯರು, ಮುಖ್ಯಕಾರ್ಯನಿರ್ವಾಹಕರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.



**ಕಲಬುರಗಿ :** ಶ್ರೀ ಶುಭಧನಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಸರಸಂಬಾ ಸಹಕಾರಿಯ ಮಾದನ ಹಿಪ್ಪರ್ಗಾದಲ್ಲಿರುವ ಶಾಖೆಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರವರು ಭೆಟಿ ನೀಡಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರುಗಳಿಗೆ, ಮುಖ್ಯ ಕಾರ್ಯನಿರ್ವಾಹಕರು ಇವರಿಗೆ ದ್ರವ್ಯಾಸ್ಥಿ ನಿರ್ವಹಣೆ, ಭದ್ರತಾ ಸಾಲಗಳನ್ನು ನೀಡುವಂತೆ ಸಲಹೆಗಳನ್ನು ನೀಡಿದರು.

ಆಳಂದ ಸೌಹಾರ್ದ ಸಹಕಾರಿ ನಿ., ಆಳಂದ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರು, ಕಲಬುರಗಿ ಜಿಲ್ಲಾ ಒಕ್ಕೂಟದ ನಿರ್ದೇಶಕರುಗಳು, ಸಹಕಾರಿಯ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ಗದಗ :** ದಿನಾಂಕ 27 ನವೆಂಬರ್ 2023 ರಂದು ಶ್ರೀ ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ನಿ., ಕರ್ನಾಟಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮೃಡಗಿರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮುಂಡರಗಿ ಶ್ರೀ ಕಾಳಿದಾಸ ಜನಸೇವಾ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಗಜೇಂದ್ರಗಡ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಇವರು ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ತರಬೇತಿ ಅಧಿಕಾರಿಗಳಾದ ಶ್ರೀ ವಿ.ಜೆ. ಕಾರಕೂನ್‌ರವರು ಉಪಸ್ಥಿತರಿದ್ದರು.

**ಕಲಬುರಗಿ :** ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., ಸಹಕಾರಿಯಲ್ಲಿ ದಿನಾಂಕ 14.11.2023 ರಂದು 70ನೇ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆಯ ಧ್ವಜಾರೋಹಣೆವನ್ನು ಆಚರಿಸಲಾಯಿತು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ
ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055
www.souharda.coop, Ph: 080–23378375–80, Email:souharda@souharda.coop

ಸಂಖ್ಯೆ 1: ಸಂಸ/ಶಿ.ವಿ –1/2023–24 ದಿನಾಂಕ : 02.12.2023

## ಸುತ್ತೋಲೆ

**ವಿಷಯ : ಪತ್ತಿನ ಸಹಕಾರ ಸಂಘಗಳ ಅಂಕಿ ಅಂಶಗಳ ಸಂಗ್ರಹ ಕುರಿತು.**
**ಉಲ್ಲೇಖ : ನ್ಯಾಫ್‌ಕಬ್ ಇವರ ಪತ್ರದ ಸಂಖ್ಯೆ 1002, ದಿನಾಂಕ 17.10.2023**

ನ್ಯಾಷನಲ್ ಫೆಡೆರೇಷನ್ ಆಫ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ಸ್ ಅಂಡ್ ಕ್ರೆಡಿಟ್ ಸೊಸೈಟಿ ಲಿ., ನವದೆಹಲಿ ಇವರು ಕ್ರೆಡಿಟ್ ಕೋ–ಆಪರೇಟಿವ್ ಸೋಸೈಟಿಗಳ ಅಂಕಿ ಆಂಶಗಳನ್ನು ಕೇಳಿ ದಿನಾಂಕ 17ನೇ ಅಕ್ಟೋಬರ್ 2023ರಂದು ಪತ್ರ ಬರೆದಿದ್ದಾರೆ. ಈ ಮಾಹಿತಿಯು ಕೇಂದ್ರ ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ರವರು ನ್ಯಾಷನಲ್ ಫೆಡೆರೇಷನ್ ಆಫ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ಸ್ ಅಂಡ್ ಕ್ರೆಡಿಟ್ ಸೊಸೈಟಿ ಲಿ., ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ತಿಳಿಸಿದ್ದಾರೆ.

ರಾಷ್ಟ್ರದ ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಕ್ರೆಡಿಟ್ ಸಹಕಾರ ಸಂಘಗಳ ಅಂಕಿ ಅಂಶಗಳನ್ನು ಗಮನಿಸಿದ ಸಚಿವರು ದೇಶದ ಪ್ರತಿ ತಾಲ್ಲೂಕಿನಲ್ಲಿಯೂ ಒಂದು ಪಟ್ಟಣ ಸಹಕಾರ ಬ್ಯಾಂಕನ್ನು ಪ್ರಾರಂಭಿಸುವುದು ಅಗತ್ಯ ಈ ಹಿನ್ನೆಲೆಯಲ್ಲಿ ದೊಡ್ಡದಾಗಿ ಬೆಳೆದಿರುವ, ಬೆಳೆಯುತ್ತಿರುವ ಕ್ರೆಡಿಟ್ ಸಹಕಾರ ಸಂಘಗಳನ್ನು ಪಟ್ಣ ಸಹಕಾರ ಬ್ಯಾಂಕುಗಳನ್ನಾಗಿ ಪರಿವರ್ತಿಸುವ ಕ್ರಮವಿಡಲಾಗುವುದು ಎಂದು ತಿಳಿಸಿದ್ದಾರೆ.

ಎರಡನೇಯದಾಗಿ ಕ್ರೆಡಿಟ್ ಸಹಕಾರ ಸಂಘಗಳ ಠೇವಣಿದಾರರು “ನ್ಯಾಷನಲ್ ಡೆಪಾಸಿಟ್ ಇನ್ಸ್ಯೂರೆನ್ಸ್” ಅಡಿಯಲ್ಲಿ ಬರುವ ಹಾಗೆ ಯೋಜನೆಯನ್ನು ಸಿದ್ದಪಡಿಸಲಾಗುವುದು ಎಂದು ತಿಳಿಸಿದ್ದಾರೆ. ಆದ್ದರಿಂದ ರಾಜ್ಯದ ಎಲ್ಲಾ ಕ್ರೆಡಿಟ್ ಸಹಕಾರ ಸಂಘಗಳು ಲಗತ್ತಿಸಿದ ಮಾಹಿತಿಯನ್ನು ಭರ್ತಿ ಮಾಡಿ ದಿನಾಂಕ 16.12.2023ರೊಳಗಾಗಿ kssfcltrg@souharda.coop ಇ ಮೇಲ್ ಐಡಿಗೆ ಕಳುಹಿಸಲು ಕೋರಿದೆ.

| | | | |
|---|---|---|---|
| 1. | Society name | 2. | Jurisdiction |
| 3. | Started date | 4. | Registration number |
| 5. | Number of branches | 6. | Number of members |
| 7. | Share capital | 8. | Deposits |
| 9. | Reserves | 10. | Investments |
| 11. | Loans | 12. | Loans recovery |
| 13. | Profit | 14. | Number of staffs |
| 15. | % of dividend | 16. | Dividend decleared in last year |
| 17. | Activities | 18. | Other information |

ಸಹಿ
ಮುಖ್ಯಕಾರ್ಯನಿರ್ವಹಣಾಧಿಕಾರಿ

ದಿನಾಂಕ :
ಸ್ಥಳ :

## ರಜತ ಮಹೋತ್ಸವ



**ದಾವಣಗೆರೆ** : ದಿನಾಂಕ 27.11.2023ರಂದು ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ಸಂಘ ನಿ, ಕುಕ್ಕುವಾಡ ಗ್ರಾಮ, ದಾವಣಗೆರೆ ಸಹಕಾರಿಯ 25ನೇ ವರ್ಷಗಳ ರಜತ ಮಹೋತ್ಸವವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಷ.ಬ್ರಾ. ಓಂಕಾರ ಶಿವಾಚಾರ್ಯ ಸ್ವಾಮೀಜಿಗಳು, ಪುರವರ್ಗ ಹಿರೇಮಠ ಕ್ಷೇತ್ರ, ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಪುಷ್ಪಗಿರಿ ಇವರು ನೆರವೇರಿಸಿದರು. ದಾವಣಗೆರೆ ಜಿಲ್ಲೆ ಸಂಸದರಾದ ಶ್ರೀ ಜಿ.ಎಮ್. ಸಿದ್ದೇಶ್ವರ ಇವರು ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ಜಿ. ರವರು ಹಾಗೂ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಭಾಗವಹಿಸಿದ್ದರು.

**ಚಿಕ್ಕಮಗಳೂರು** : ದಿನಾಂಕ 19.11.2023 ರಂದು ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿ ಸಹಕಾರ ಮಹಾಮಂಡಳ, ಡಿಸಿಸಿ ಬ್ಯಾಂಕ್, ಸಹಕಾರ ಯೂನಿಯನ್ ಮತ್ತು ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಸಹಯೋಗದೊಂದಿಗೆ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಜರುಗಿತು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ್ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಬಾಳೆಹೊನ್ನೂರು ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ವೆಂಕಟೇಶರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

**ಬೈಂದೂರು** : ಶ್ರೀ ರಾಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸಹಕಾರಿಯ ವತಿಯಿಂದ ನಡೆದ ಆರೋಗ್ಯ ಮತ್ತು ಕಂದಾಯ ಮಾಹಿತಿ ಶಿಬಿರವನ್ನು ಬೈಂದೂರು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಮಕ್ಕಳ ತಜ್ಞೆ ಡಾ॥ ನಂದಿನಿ ಇವರು ಉದ್ಘಾಟಿಸಿ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ರಾಜುಪೂಜಾರಿ ಇವರು ವಹಿಸಿದರು. ಈ ಸಂದರ್ಭದಲ್ಲಿ ಉದ್ಯಮಿ ಜಗನ್ನಾಥ ಶೆಟ್ಟಿ, ಉಪಾಧ್ಯಕ್ಷ ಎಂ. ವಿನಾಯಕ ರಾವ್ ಮರವಂತೆ, ನಿರ್ದೇಶಕರಾದ ಸೀತರಾಮ ಮಡಿವಾಲ, ಸಿ.ಇ.ಓ ಕಿಟ್ಟಪ್ಪ ರೈ ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

- ದಿನಾಂಕ 07.12.2023 ರಿಂದ 16.12.2023 ರವರೆಗೆ ಸೌಹಾರ್ದ ಸಹಕಾರಿ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ, ಒಡಿಯೂರು ಶ್ರೀ ದತ್ತಾಂಜನೇಯ ಕ್ಷೇತ್ರ ದಕ್ಷಿಣ ಗಾಣಗಾಪುರ, ಒಡಿಯೂರು, ದಕ್ಷಿಣ ಕನ್ನಡ.
- ದಿನಾಂಕ 09.12.2023 ರಿಂದ 10.12.2023 ರವರೆಗೆ 2ನೇ ಸಮಿಸ್ಟರ್‌ನ ಡಿ.ಸಿ.ಬಿ.ಎಂ ಸಂಪರ್ಕ ವರ್ಗ ತರಗತಿ.
- ಡಿಸೆಂಬರ್ ಹಾಗೂ ಜನವರಿ ಮಾಹೆಯಲ್ಲಿ ರಾಜ್ಯಾದಾದ್ಯಂತ ಮುಖ್ಯ ಕಾರ್ಯನಿರ್ವಾಹಕರ ಸಭೆಗಳ ಆಯೋಜನೆ
- ಡಿಸೆಂಬರ್ ಮಾಹೆಯಲ್ಲಿ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಅಧಿಕಾರಿ ಹಾಗೂ ಸಿಬ್ಬಂದಿಯವರಿಗಾಗಿ ವಿಶೇಷ ತರಬೇತಿ ಆಯೋಜನೆ.

## ನವೆಂಬರ್ – 2023 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿಯನ್ನು ನೇಮಕ ಆದೇಶದ ಕುರಿತು.**

ದಿನಾಂಕ 01.11.2023 ರಿಂದ 30.11.2023ರವರೆಗೆ ಆಡಳಿತ ಮಂಡಲಿಯ ಅಧಿಕಾರ ಅವಧಿ ಮುಕ್ತಾಯವಾದ, ಆಡಳಿತ ಮಂಡಲಿಯ ಕೋರಂ ಕೊರತೆ ಉಂಟಾದ ಒಟ್ಟು 14 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ವಿಶೇಷಾಧಿಕಾರಿಯನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿತ್ತದೆ.

**2. ಶ್ರೀ ಗುರುರಾಘವೇಂದ್ರ ಸಹಕಾರಿ ಬ್ಯಾಂಕ ನಿ., ಬೆಂಗಳೂರು ಆಡಳಿತಾಧಿಕಾರಿ ಬದಲಾವಣೆ ಕುರಿತು.**

ಶ್ರೀ ಗುರುರಾಘವೇಂದ್ರ ಸಹಕಾರಿ ಬ್ಯಾಂಕ ನಿ., ಬೆಂಗಳೂರು ಈ ಸಹಕಾರಿ ಬ್ಯಾಂಕ್‌ನ ಆಡಳಿತಾಧಿಕಾರಿಯಾಗಿದ್ದ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಅಶೋಕನ್, ನಿವೃತ್ತ ಜನರಲ್ ಮ್ಯಾನೇಜರ್, ಕೆನರಾ ಬ್ಯಾಂಕ್ ಇವರ ಬದಲಾಗಿ ಸದರಿ ಸಹಕಾರಿ ಬ್ಯಾಂಕ್ ಆಡಳಿತಾಧಿಕಾರಿಯಾಗಿ ಶ್ರೀ ಭಾಸ್ಕರ್ ಹಂಡೆ, ನಿವೃತ್ತ ಪ್ರಧಾನ ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್ ಇವರನ್ನು ದಿನಾಂಕ 26.10.2023 ರಿಂದ ದಿನಾಂಕ 17.02.2024ರ ಅವದಿಗೆ 'ಹಕಾರಿ ಬ್ಯಾಂಕ್ ಆಡಳಿತಾಧಿಕಾರಿಯಾಗಿ ನೇಮಕ ಮಾಡಿ ಮಾನ್ಯ ವಿಶೇಷ ಕರ್ತವ್ಯಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ ಸಹಕಾರ ಇಲಾಖೆ ಇವರು ನೇಮಕ ಮಾಡಿ ದಿನಾಂಕ 27.10.2023 ರಂದು ಆದೇಶ ಹೊಡಿಸಿರುತ್ತಾರೆ.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 19ನೇ ಶಾಖೆ ಮುಡಿಪುನಲ್ಲಿ ಶುಭಾರಂಭ.




**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿ ರಾಜ್ಯ ವ್ಯಾಪಿ ಕಾರ್ಯಕ್ಷೇತ್ರವನ್ನು ಹೊಂದಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 19ನೇಯ ಶಾಖೆಯು ಉಳ್ಳಾಲ ತಾಲೂಕಿನ ಕುರ್ನಾಡು ಗ್ರಾಮದ ಮುಡಿಪುನ ಶ್ರುತಿ ಟವರ್ಸ್ನ 2ನೇ ಮಹಡಿಯಲ್ಲಿ ದಿನಾಂಕ 10–11–2023ರಂದು ಶುಭಾರಂಭಗೊಂಡಿತು.

ನೂತನ ಶಾಖೆಯನ್ನು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ಯು.ಟಿ ಖಾದರ ಇವರು ದೀಪ ಬೆಳಗಿಸಿ ಉದ್ಘಾಟಿಸಿ ಕಾಣದ ಕೈಗಳ ರೀತಿಯಲ್ಲಿ ದೇಶದ ಆರ್ಥಿಕ ಕ್ಷೇತ್ರಕ್ಕೆ ಸಹಕಾರ ಕ್ಷೇತ್ರವು ತನ್ನ ಕೊಡುಗೆಯನ್ನು ನೀಡುತ್ತಿದೆ. ಮುಡಿಪುನಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿದೆ ಎಂಬುದನ್ನು ಗಮನಿಸಿ ಎಲ್ಲಾ ಆರ್ಥಿಕ ಸಂಸ್ಥೆಗಳು ಇಲ್ಲಿ ಶಾಖೆಗಳನ್ನು ತೆರೆಯುತ್ತಿದೆ, ಸೌಹಾರ್ದಮಯ ವಾತಾವರಣ ಇದ್ದಾಗ ಆರ್ಥಿಕ ಚಟುವಟಿಕೆಗಳು ನಿರಂತರವಾಗಿ ಅಭಿವೃದ್ಧಿಯಾಗಲು ಸಾಧ್ಯ, ವಿಧಾನ ಪರಿಷತ್ ನಲ್ಲಿ ಸಹಕಾರ ಕ್ಷೇತ್ರಕ್ಕೆ ಪ್ರಾತಿನಿಧ್ಯವನ್ನು ನೀಡುವಲ್ಲಿ ಪಯತ್ನಿಸಲಾಗುವುದು ಎಂದು ಹೇಳುತ್ತಾ ಸಹಕಾರಿಯು ಮುಂದಿನ 10 ವರ್ಷಗಳಲ್ಲಿ 50ಕ್ಕೂ ಹೆಚ್ಚು ಶಾಖೆಗಳನ್ನು ತೆರೆಯುವಂತಾಗಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಎಸ್ ಸಿ ಡಿ ಸಿ ಸಿ ಬ್ಯಾಂಕ್ ಲಿ. ಮಂಗಳೂರು ಇದರ ನಿರ್ದೇಶಕರಾದ ಶ್ರೀ ಟಿ ಜಿ ರಾಜರಾಮ್ ಭಟ್ ಕ್ಯಾಂಪ್ಕೋ ಲಿ. ಮಂಗಳೂರಿನ ನಿರ್ದೇಶಕರಾದ ಶ್ರೀ ಮಹೇಶ್ ಚೌಟ, ದ.ಕ ಜಿಲ್ಲಾ ಪಂಚಾಯತ್ನ ಮಾಜಿ ಸದಸ್ಯರಾದ ಶ್ರೀ ಸಂತೋಷ್ ಕುಮಾರ್ ಬೋಳಿಯಾರ್. ICAI ಮಂಗಳೂರಿನ ಮಾಜಿ ಅಧ್ಯಕ್ಷರಾದ ಶ್ರೀ. ಖ ಖ ನಾಯಕ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರಿನ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್, ಕುರ್ನಾಡು ಗ್ರಾಮ ಪಂಚಾಯತ್ ನ ಅಧ್ಯಕ್ಷರಾದ ಶ್ರೀಮತಿ ಲೋಲಾಕ್ಷಿ ಶೆಟ್ಟಿ, ಶ್ರೀ ಗೋಪಾಲ ಕೃಷ್ಣ ದೇವರ ಟ್ರಸ್ಟ್ ಅಮ್ಮೆಂಬಳ ಇದರ ಟ್ರಸ್ಟಿಗಳಾದ ಶ್ರೀ ನಾಗೇಶ್ ಕಾಮತ್ ಅಮ್ಮೆಂಬಳ ಇವರು ಭಾಗವಹಿಸಿ ನೂತನ ಶಾಖೆಗೆ ಶುಭ ಹಾರೈಸಿದರು.

ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ ನಾಯಕ್ ಎ, ಹಾಗೂ ಆಡಳಿತ ಮಂಡಲಿಯ ಹಾಲಿ ಹಾಗೂ ಮಾಜಿ ಸದಸ್ಯರು ಸಿಬ್ಬಂದಿವರ್ಗದವರು ಸಹಕಾರಿ ಗ್ರಾಹಕರು ಉಪಸ್ಥಿತ–ರಿದ್ದರು. 2024ರ ಸಹಕಾರಿ ಸಂಘದ ಕ್ಯಾಲೆಂಡರ್ ನ್ನು ಈ ಸಂದರ್ಭದಲ್ಲಿ ಶ್ರೀ ಯು ಟಿ ಖಾದರ್ರವರು ನೆರವೇರಿಸಿದರು. ಶ್ರೀ ರಂಜಿತಾ ಪ್ರಾರ್ಥಿಸಿದರು, ಮುಡಿಪು ಶಾಖೆಯ ವ್ಯವಸ್ಥಾಪಕರಾದ ಶ್ರೀ ಪ್ರಶಾಂತ್ ಕೆ ವಂದನಾರ್ಪಣೆಗೈದರು ಶಿವಪ್ರಸಾದ್ ಟಿ ನಿರೂಪಿಸಿದರು.

ನೂತನ ಶಾಖೆಯ ಶುಭಾರಂಭದ ಪ್ರಯುಕ್ತ 1000ದಿನಗಳ ವಿಶೇಷ ಠೇವಣಿಗೆ 9.10% ಹಾಗೂ 1 ವರ್ಷ ಅವಧಿ ಠೇವಣಿಗೆ 8.80%, ಹಿರಿಯ ನಾಗರಿಕರಿಗೆ, ವಿಶೇಷ ಚೇತನರಿಗೆ ವಿಧವೆಯರಿಗೆ ಮತ್ತು ಯೋಧರಿಗೆ ಮತ್ತು ನೋಂದಾಯಿತ ಸಂಘ ಸಂಸ್ಥಗಳಿಗೆ 1000 ದಿನಗಳಿಗೆ 9.50% ಹಾಗೂ 1 ವರ್ಷ ಅವಧಿ ಠೇವಣಿಗೆ 9.20% ಬಡ್ಡಿದರವನ್ನು ನಿಗದಿಪಡಿಸಲಾಗಿದೆ. ಕಡಿಮೆ ಬಡ್ಡಿದರದಲ್ಲಿ ಚಿನ್ನಾಭರಣ ಸಾಲ, ವಾಹನ ಸಾಲ, ಅಟೋ ಸಾಲ, ಗೃಹ ಸಾಲ, ಭೂ ಅಡಮಾನ ಸಾಲ ಸೌಲಭ್ಯವನ್ನು ಸದಸ್ಯರಿಗೆ ನೀಡಲಾಗುತ್ತದೆ

---



**ಸದಲಗಾ :** ಸದಲಗಾ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ ಸದಲಗಾ ಇದರ ನೂತನ 9ನೇ ಶಾಖೆಯನ್ನು ದಿನಾಂಕ 01.11.2023 ರಂದು ಚಿಕ್ಕೋಡಿ ಪಟ್ಟಣದ ಪ್ರಭಾಕರ ಕೋರೆ ನಗರದಲ್ಲಿ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು ಶ್ರೀ ದುರದುಂಡೀಶ್ವರ ಸಿದ್ದಸಂಸ್ಥಾನಮಠ, ನಿಡಸೋಸಿ ಮತ್ತು ಪ.ಪೂ.ಶ್ರೀ ಧರ್ಮಸೇನ ಭಟ್ಟಾರಕ ಮಹಾಸ್ವಾಮಿಗಳು, ನವಗೃಹತೀರ್ಥ, ವರೂರ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು.

ಈ ಸಮಾರಂಭದಲ್ಲಿ ಶ್ರೀ ಮ.ನೀ.ಪ್ರ.ಜಃ ಸಂಪಾದನಾ ಮಹಾಸ್ವಾಮಿಗಳು ಜಃ ಸಂಪಾದನಾ ಚರಮೂರ್ತಿಮಠ, ಚಿಕ್ಕೋಡಿ, ಹಾಗೂ ಸಿದ್ಧಾಂತಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಆರತಿಪೂರ ರವರು ಭಾಗವಹಿಸಿದರು.

ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಪ್ರಕಾಶ ಜಿನಗೌಡಾ ಪಾಟೀಲ ವಹಿಸಿದರು. ಮತ್ತು ಬ್ಯಾಂಕಿನ ಎಲ್ಲ ನಿರ್ದೇಶಕರು, ಚಿಕ್ಕೋಡಿ ಶಾಖೆಯ ಸಲಹಾ ಸಮಿತಿ ಸದಸ್ಯರು, ಪಟ್ಟಣದ ಗಣ್ಯಮಾನ್ಯರು ಹಾಗೂ ಬ್ಯಾಂಕಿನ ಎಲ್ಲ ಸಿಬ್ಬಂದಿ ವರ್ಗದವರು ಭಾಗವಹಿಸಿದರು.



**ಚಿಂತಾಮಣಿ :** ದಿನಾಂಕ 09–11–2023 ರಂದು ಜೈ ಮಾರುತಿ ಸೌಹಾರ್ದ ಸಹಕಾರಿ ಸಂಘ ನಿ., ಚಿಂತಾಮಣಿ ಇದರ ವತಿಯಿಂದ ದೀಪಾವಳಿ ಹಬ್ಬದ ಪ್ರಯುಕ್ತ ಚಿಂತಾಮಣಿ ನಗರದ ಪೌರಕಾರ್ಮಿಕರಿಗೆ ಉಚಿತವಾಗಿ ಬಟ್ಟೆ ವಿತರಿಸಿದರು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು, ಚಿಕ್ಕಬಳ್ಳಾಪುರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಮರ್ ಆರ್ ರವರು ಅತಿಥಿಗಳಾಗಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣಸ್ವಾಮಿ ರವರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಚಿನ್ನಾಭರಣ ಸಾಲ, ವಾಹನ ಸಾಲ, ಆಟೋ ಸಾಲ, ಗೃಹ ಸಾಲ, ಭೂ ಅಡಮಾನ ಸಾಲ ಸೌಲಭ್ಯವನ್ನು ಸದಸ್ಯರಿಗೆ ನೀಡಲಾಗುತ್ತದೆ



**ತುಮಕೂರು :** ಶಿವಶ್ರೀ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಹಾಗೂ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ .ಆರ್ ರವರು ಭೇಟಿ ನೀಡಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರೊಂದಿಗೆ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು. ಸಹಕಾರಿಯ ಕಾನೂನು ಸಮಸ್ಯೆಗಳಿಗೆ ಸಲಹೆ ಹಾಗೂ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಚ್.ಎಸ್ ಬಾಸ್ಮಾಂಗಿ ರುದ್ರಯ್ಯ, ಉಪಾಧ್ಯಕ್ಷರು, ಸಹಕಾರಿಯ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.




**ಕೋಲಾರ :** ದಿನಾಂಕ 29.11.2023ರಂದು ಸ್ವರ್ಣವಿಲಾಸ್ ಸೌಹಾರ್ದ ಪತ್ತಿನ ಸಹಕಾರಿ ನಿ, ಕೆ.ಜಿ.ಎಫ್, ಸಹಕಾರಿಯ ಬಂಗಾರಪೇಟೆ ಶಾಖೆಯ ಪ್ರಾರಂಭೋತ್ಸವ ಸಮಾರಂಭವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಶ್ರೀ ಶ್ರೀ ಶ್ರೀ ಪಟ್ಟದ ಶ್ರೀ ತೇಜೇಶಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ನಾಗಾಲಾಪುರ ಸಂಸ್ಥಾನ ಮಠ, ಕೋಲಾರ ಇವರು ವಹಿಸಿದ್ದರು. ಉದ್ಘಾಟನೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜೀ ಪಾಟೀಲ ರವರು ಹಾಗೂ ನಿವೃತ್ತ ಜಿಲ್ಲಾಧಿಕಾರಿಗಳಾದ ಶ್ರೀ ಡಾ. ಡಿ. ಎಸ್. ವಿಶ್ವನಾಥ್ ರವರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಹರ್ಷಜಿತ್ ಎಸ್. ಇವರು ಉಪಸ್ಥಿತರಿದ್ದರು. ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎಸ್. ಇವರು ಭಾಗವಹಿಸಿದ್ದರು.



**ರಾಣೇಬೆನ್ನೂರ :** ದಿನಾಂಕ 24.10.2023 ರಂದು ಶಿವ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ರಾಣೇಬೆನ್ನೂರ ಸಂಘದ 10ನೇ ವರ್ಷದ ದಶಮಾನೋತ್ಸವದ ಕಾರ್ಯಕ್ರಮವನ್ನು ವಿಜಯದಶಮಿ ಹಬ್ಬದ ವಿಶೇಷ ಪೂಜೆಯೊಂದಿಗೆ ಸಂಘದ ಅಧ್ಯಕ್ಷರಾದ ಶ್ರೀ ಜಟ್ಟೆಪ್ಪ ಎಸ್. ಕರೇಗೌಡ್ರ ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮಕ್ಕೆ ಸಂಘದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿ.ಇ.ಒ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಬೀದರ ಒಕ್ಕೂಟದಿಂದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



## ಸಹಕಾರ ಕ್ಷೇತ್ರದಿಂದ ಮಾತ್ರ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ – ಜ್ಯಾಂತಿಕರ್

**ಬೀದರ :** ದೇಶದ ಆರ್ಥಿಕ ಕ್ಷೇತ್ರಕ್ಕೆ ಸಹಕಾರಿ ರಂಗವು ತನ್ನದೇಯಾದ ಕೊಡುಗೆ ನೀಡಿದೆ. ಸಹಕಾರ ಕ್ಷೇತ್ರದ ಮೂಲಕ ಮಾತ್ರ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂದು ಸಂಯುಕ್ತ ಸಹಕಾರಿ ನಿರ್ದೇಶಕ ಗುರುನಾಥ ಜ್ಯಾಂತಿಕರ್ ತಿಳಿಸಿದರು.

ಬೀದರ ನಗರದ ಡಿಸಿಸಿ ಬ್ಯಾಂಕ್‌ನ ಶಾರದಾ ರುಡ್ ಸೆಟ ತರಬೇತಿ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಬೀದರ ಜಿಲ್ಲಾ ಸಹಕಾರ ಯೂನಿಯನ್ ನಿ., ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಮತ್ತು ಸಹಕಾರ ಇಲಾಖೆ, ಬೀದರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ–2023 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಕೇಂದ್ರ ಸಹಕಾರ ಯುನಿಯನ್ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು" ಎಂಬ ಧ್ಯೇಯ ಎಂಬ ವಾಕ್ಯಗಳೊಂದಿಗೆ ಇಂದು ಸಾಲೇತರ ಸಹಕಾರ ಸಂಘಗಳ ಪುನಃಶ್ಚೇತನ ಹಾಗೂ ಆರ್ಥಿಕ ಸೇರ್ಪಡೆ ಎಂಬ ವಿಷಯವನ್ನು ಒಳಗೊಂಡಿದೆ. ಕೇವಲ ಪತ್ತಿನ ಚಟುವಟಿಕೆ ಕೈಗೊಳ್ಳದೆ ವಿವಿಧ ಕ್ಷೇತ್ರಗಳಾದ ಹಾಲು ಉತ್ಪಾದಕರ ಸಹಕಾರ ಸಂಘಗಳು, ವಸತಿ ಸಹಕಾರ ಗ್ರಾಹಕರ ಸಹಕಾರ ಸಂಘಗಳು ಇತರೆ ಸಹಕಾರ ಸಂಘಗಳು ಗುಣಮಟ್ಟದಿಂದ ಪರಿಣಾಮಕಾರಿಯಾಗಿ ಕಾರ್ಯನಿರ್ವಾಹಿಸಿದಾಗ ಮಾತ್ರ ಸಹಕಾರ ಚಳವಳಿ ಯಶಸ್ವಿಯಾಗಲು ಸಾಧ್ಯವೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರಾದ ಅಭಿಷೇಕ ಆರ್ ಪಾಟೀಲ್ ಮಾತನಾಡಿ, ಸಹಕಾರಿಗಳಾದ ನಾವು ಸತತ ಪ್ರಯತ್ನ ಪಟ್ಟಾಗ ಮಾತ್ರ ಸಹಕಾರಿ ನಾಯಕರಾಗಲು ಸಾಧ್ಯ. ಡಿಸಿಸಿ ಬ್ಯಾಂಕ್ ಸೇವೆಗಳನ್ನು ಜನರ ಬಳಿಗೆ ಕೊಂಡೊಯ್ಯಲಾಗುವುದು ಎಂದು ಅವರು ಹೇಳಿದರು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕರಾದ ವಿಜಯಕುಮಾರ ಪಾಟೀಲ ಗಾದಗಿ ಮಾತನಾಡಿ ಸಪ್ತಾಹ ಕಾರ್ಯಕ್ರಮಗಳನ್ನು ಏಳು ದಿನಗಳ ಕಾಲ ಆಚರಿಸಲಾಗುತ್ತಿದೆ. ಸಹಕಾರ ಕ್ಷೇತ್ರವು ಅತಿ ವಿಶಾಲವಾಗಿದೆ. ಸಹಕಾರ ವಲಯದಿಂದ ಅನೇಕ ಕ್ಷೇತ್ರಗಳಲ್ಲಿ ಸೇವೆ ಮಾಡಲು ಸಾಧ್ಯ ಎಂದರು.

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ ನಿ ಬೆಂಗಳೂರಿನ ನಿರ್ದೇಶಕರಾದ ಮಲ್ಲಿಕಾರ್ಜುನ ಮಾಶೆಟ್ಟಿ ಮಾತಾಡಿ ಪ್ರತಿ ವರ್ಷದಂತೆ ಸಹಕಾರ ಸಪ್ತಾಹ ಜಿಲ್ಲೆಯಲ್ಲೇ ಆಚರಿಸದೆ ತಾಲೂಕು–ಗ್ರಾಮ ಮಟ್ಟದಲ್ಲೂ ಆಚರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಹಕಾರ ಯೂನಿಯನ ಅಧ್ಯಕ್ಷರಾದ ಪರಮೇಶ್ವರ ಮುಗಟೆ ವಹಿಸಿದ್ದರು. ಯೂನಿಯನ್‌ನ ನಿರ್ದೇಶಕ ಗುಂಡಪ್ಪ ಹಣಮಂತಪ್ಪ, ಸಂಪನ್ಮೂಲ ವ್ಯಕ್ತಿ ಸೂರ್ಯಕಾಂತ ರಾಖಲೆ, ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಉಪನ್ಯಾಸಕ ಡಾ. ಶಿವಕುಮಾರ ವಿ. ಉಪ್ಪೆ ಇದ್ದರು.

ಇತಿಹಾಸ ವಿಭಾಗದಲ್ಲಿ ಪ್ರೊಫೇಸರ್ ಆಗಿ ಬಡ್ತಿ ಹೊಂದಿರು ಹಿನ್ನಲೆಯಲ್ಲಿ ಡಾ॥ ಶಿವಕುಮಾರ ಉಪ್ಪೆ ಅವರಿಗೆ ಸಹಕಾರಿಗಳಿಂದ ವಿಶೇಷ ಸನ್ಮಾನ ಮಾಡಲಾಯಿತ್ತು. ಅದೇ ರೀತಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗೆ ಚುನಾವಣೆಯಲ್ಲಿ ಆಯ್ಕೆಯಾದ ಅಭೀಷೇಕ ಪಾಟೀಲ್, ವಿಜಕುಮಾರ ಪಾಟೀಲ್ ಗಾದಗಿ, ಪರಮೇಶ್ವರ ಮುಗಟೆ ಇವರುಗಳಿಗೆ ಸನ್ಮಾನಿಸಲಾಯಿತ್ತು.

ಯೂನಿಯನ್ ಸಿಬ್ಬಂದಿ ಎಚ್.ಆರ್. ಮಲ್ಲಮ್ಮ, ಮಲ್ಲಿಕಾರ್ಜುನ, ಮಾರುತಿ, ಒಕ್ಕೂಟದ ಸಿಇಒ ಅಮೃತ ಹೊಸಮನಿ, ಒಕ್ಕೂಟದ ನಿರ್ದೇಶಕರಾದ ಸಂಜಯ ಕ್ಯಾಸಾ, ಬಸವರಾಜ ಹುಡ್ಗೆ,ರಾಜಶೇಖರ ನಾಗಮೂರ್ತಿ,ಕ್ರಾಂತಿಕುಮಾರ ಕುಲಾಲ ಮಾಯಾದೇವಿ ಸಿಂದನಕೇರಾ ಸಹಕಾರ ಸಂಘಗಳ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ಇದ್ದರು. ಒಕ್ಕೂಟದ ಉಪಾಧ್ಯಕ್ಷ ಸಂಜೀವಕುಮಾರ ಪಾಟೀಲ ಸ್ವಾಗತಿಸಿದರು. ವೀರಶೆಟ್ಟಿ ಕಾಮಣ್ಣ ನಿರೂಪಿಸಿದರು. ಓಂಕಾರ ಧರಣೆ ವಂದಿಸಿದರು.

---




**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಗ್ಯಾರೇಜ್ ಮಾಲಕರ ಸೌಹಾರ್ದ ಸಹಕಾರಿ ಸಂಘ ನಿ. ಕಡೆಮೊಗರು, ಮಂಗಳೂರು ಇದರ ಕಚೇರಿಯಲ್ಲಿ ಅಧ್ಯಕ್ಷರಾದ ಶ್ರೀ ಜನಾರ್ಧನ ಅತ್ತಾವರ ಇವರ ಅಧ್ಯಕ್ಷತೆಯಲ್ಲಿ, ಉಪಾಧ್ಯಕ್ಷರಾದ ಶ್ರೀ ಮಾಧವ ಬಂಗೇರ ಹಾಗೂ ಶ್ರೀ ಸದಸ್ಯರಾದ ಶ್ರೀ ಪುರುಷೋತ್ತಮ ಕೆ ಇವರ ಉಪಸ್ಥಿತಿಯಲ್ಲಿ ಸಹಕಾರಿ ಧ್ವಜಾರೋಹಣ ಮಾಡಲಾಯಿತು.



**ದಕ್ಷಿಣ ಕನ್ನಡ :** ನಾಗರಿಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಗುರುವಾಯನ ಇದರ ಕಛೇರಿ ಆವರಣದಲ್ಲಿ ದಿನಾಂಕ 17.11.2023 ರಂದು 70ನೇ ವರ್ಷದ ಅಖಿಲ ಭಾರತ ಸಹಕಾರಿ ಸಪ್ತಾಹದ ಆಚರಣೆ ಪ್ರಯುಕ್ತ ಸಹಕಾರಿ ಧ್ವಜಕ್ಕೆ ಗೌರವ ಸೂಚಿಸುವ ಮೂಲಕ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಸಿಬ್ಬಂದಿ ವರ್ಗದವರು ಹಾಗೂ ಸದಸ್ಯರು ಭಾಗವಹಿಸಿದ್ದರು.



**ಬಳ್ಳಾರಿ :** ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಯ 70ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು.

**ಉಡುಪಿ :** ಜಲದುರ್ಗಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ ಕಾರ್ಕಳ ಉಡುಪಿ ಸಹಕಾರಿಯ 70ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು.



**ಬಳ್ಳಾರಿ :** ದಿನಾಂಕ 27.11.2023ರಂದು ಭೈರವ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇದರ ಪ್ರಥಮ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರು ಭಾಗವಹಿಸಿ ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ನಾಗರಾಜು, ಶ್ರೀಮತಿ ಸರಿತಾ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆ, ಮಂಡ್ಯ ಮತ್ತು ಸಹಕಾರಿಯ ನಿರ್ದೇಶಕರು ಉಪಸ್ಥಿತರಿದ್ದರು.




**ಉಡುಪಿ :** ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಉಡುಪಿ ಸಹಕಾರಿಯು 70ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು.



**ಮಂಡ್ಯ :** ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿಯಮಿತ ಮಂಡ್ಯ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಮಂಡ್ಯ :** ದಿನಾಂಕ 10.10.2023 ರಂದು ಸಕ್ಕರೆನಾಡು ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಸಹಕಾರಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ಸಹಕಾರಿಯ ಅಧ್ಯಕ್ಷರಾಗಿ ಶ್ರೀಮತಿ ಪಲ್ಲವಿ ಆರ್ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಮೋಹನ್ ಕುಮಾರ್ ವೈ.ಆರ್ ಇವರು ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ



**ಉಡುಪಿ :** ದಿನಾಂಕ 02.12.2023 ರಂದು ಚೇತನಾ ಪ್ರೌಢ ಶಾಲೆ, ಹಂಗಾರಕಟ್ಟೆ, ಬ್ರಹ್ಮಾವರದಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಹಭಾಗಿತ್ವದಲ್ಲಿ ನಡೆದ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವದ ಕ್ರೀಡಾ ಜ್ಯೋತಿ ಪ್ರಜ್ವಲನೆಯನ್ನು ಸನ್ಮಾನ್ಯ ಶ್ರೀ ಡಾ. ಎಮ್.ಎನ್.ರಾಜೇಂದ್ರ ಕುಮಾರ್, ಮಾನ್ಯ ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮಂಗಳೂರು, ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಯಶಪಾಲ್ ಸುವರ್ಣ, ಮಾನ್ಯ ಅಧ್ಯಕ್ಷರು, ಮಹಾಲಕ್ಷ್ಮಿ ಕೋ ಆಪರೇಟಿವ್ ಬ್ಯಾಂಕ್ ಲಿ. ಹಾಗೂ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ ಎಸ್.ಕೆ., ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಮುಖ್ಯ ಅತಿಥಿಗಳಾಗಿ ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಶ್ರೀ ಗುರುರಾಜ ಗಂಟಿಹೊಳೆ, ಮಾನ್ಯ ಶಾಸಕರು, ಬೈಂದೂರು ವಿಧಾನ ಸಭಾ ಕ್ಷೇತ್ರ, ಬೈಂದೂರು, ಶ್ರೀಮತಿ ಭಾರತಿ ಭಟ್, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಶ್ರೀ ಅಂಪಾರು ಜಗನ್ನಾಥ ಶೆಟ್ಟಿ, ಮಾನ್ಯ ಅಧ್ಯಕ್ಷರು, ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಮತ್ತು ಶ್ರೀ ಶರಣಗೌಡ ಜಿ.ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ. ಶ್ರೀ ಸೂರ್ಯಕಾಂತ ಆರ್, ಜಿಲ್ಲಾ ಸಂಯೋಜಕರಾದ ಶ್ರೀ ಪ್ರಭಯ್ಯ ಹಿರೇಮಠ ಭಾಗವಹಿಸಿದ್ದರು. ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳು ಹಾಗೂ ಸದರಿ ಕ್ರೀಡೋತ್ಸವವನ್ನು ವೀಕ್ಷಣೆ ಮಾಡಲು ವಿವಿಧ ಜಿಲ್ಲೆಗಳಿಂದ ಸೌಹಾರ್ದ ಸಹಕಾರಿಗಳು ಭಾಗವಹಿಸಿದ್ದರು.



**ಚಿಕ್ಕಮಗಳೂರು :** ದಿನಾಂಕ : 28.11.2023ರಂದು ಗಾಯಿತ್ರಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ ಇದರ ಜಯಪುರ ಶಾಖೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ್ ಇವರು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಪ್ರಗತಿಪರ ಕೃಷಿಕರಾದ ಶ್ರೀಯುತ ಕೆ.ವಿ.ವಿಜಯರಂಗ ಇವರು ಮುಖ್ಯ ಅಥಿತಿಗಳಾಗಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಪ್ರವೀಣ್ ಕೆ.ವಿ. ಇವರು ವಹಿಸಿದ್ದರು.



### ಸಹಕಾರದಿಂದ ಸಾಧನೆ ಸಾಕಾರಗೊಳ್ಳಲು ಸಾಧ್ಯ : ಮುನವಳ್ಳಿ

**ಗದಗ :** ಸಹಕಾರ ಇದ್ದರೆ ಸಾಧನೆ ಸಾಕಾರಗೊಳ್ಳಲು ಸಾಧ್ಯ. ಸಹಕಾರ ರಂಗಕ್ಕೆ ದೇಶಕ್ಕೆ ಬಹು ದೊಡ್ಡ ಕೊಡುಗೆ ನೀಡಿರುವ ಗದಗ ಪರಿಸರದಲ್ಲಿ ಸಹಕಾರ ಸಂಘಗಳು, ಬ್ಯಾಂಕುಗಳು ಪ್ರಗತಿಯಲ್ಲಿ ಮುಂಚೂಣಿಯಲ್ಲಿವೆ ಎಂದು ಗದಗ ಜಿಲ್ಲಾ ಚೇಂಬರ್ ಆಫ್ ಕಾಮರ್ಸ ಅಧ್ಯಕ್ಷ ಈಶ್ವರಪ್ಪ ಮುನವಳ್ಳಿ ಅಭಿಪ್ರಾಯಪಟ್ಟರು.

ದಿನಾಂಕ 15.11.2023 ರಂದು ಗದುಗಿನ ಶಿವಸಂಗಮ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಗದಗ ಜಿಲ್ಲಾ ಸಹಕಾರ ಯೂನಿಯನ್, ಗದಗ ಸಹಕಾರ ಇಲಾಖೆ, ಗದಗ ಕೆ.ಸಿ.ಸಿ.ಬ್ಯಾಂಕ್ ಲಿ., ಕೆ.ಎಂ.ಎಫ್ ಧಾರವಾಡ, ಗದಗ ಉಪವಿಭಾಗ, ಶಿವಸಂಗಮ ವಿವಿದ್ದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘದ ಆಶ್ರಯದಲ್ಲಿ 70 ನೇ ಅಖಿಲ ಭಾರತ ಸಹಕಾರ ಸಪ್ತಾಹ ಹಾಗೂ "ಸಾಲ ಮತ್ತು ಸಾಲೇತರ ಸಹಕಾರ ಸಂಘಗಳ ಪುನಃಶ್ಚೇತನ ಹಾಗೂ ಆರ್ಥಿಕ ಸೇರ್ಪಡೆ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸೇವೆ ಮತ್ತು ಸಾಮಾಜಿಕ ಕಳಕಳಿಯ ಹಿರಿದಾದ ಉದ್ದೇಶದೊಂದಿಗೆ ಸ್ಥಾಪನೆಗೊಂಡ ಸಹಕಾರ ಸಂಸ್ಥೆಗಳು ಇಂದು ದೇಶದ ಆರ್ಥಿಕ ಸುಸ್ಥಿರತೆಗೆ ತನ್ನದೇ ಆದ ಕೊಡುಗೆ ನೀಡುತ್ತಿವೆ. ಸಹಕಾರ ಸಂಘಗಳ ಪುನಃಶ್ಚೇತನ ಮತ್ತು ಆರ್ಥಿಕ ಸೇರ್ಪಡೆ ಅಂಶಗಳ ಮೂಲಕ ಸಹಕಾರ ರಂಗದಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತಿದೆ ಎಂದರು.

70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ "5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು" ಅಂಗವಾಗಿ ನಡೆಯುತ್ತಿರುವ ಈ ಕಾರ್ಯಕ್ರಮ ಮಾಲಿಕೆ ಯಶಸ್ವಿಯಾಗಲಿ ಎಂದರು.

# Sustainable Development Goals : Retrospective – Prospective

- Shri SharanaGouda G. Patil, Managing Director, KSSFCL, Bengaluru.

ದಿನಾಂಕ 6 ಮತ್ತು 7 ಅಕ್ಟೋಬರ್ 2023 ರಂದು ಇಂಡಿಯನ್ ಸೊಸೈಯಿಟಿಯ 38ನೇ ರಾಷ್ಟ್ರೀಯ ಸಂಶೋಧನಾ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಪ್ರಸ್ತುತ ಪಡಿಸಿದ ವಿಷಯದ ಲೇಖನವನ್ನು ಸಹಕಾರಿಗಳ ಮಾಹಿತಿಗಾಗಿ 2 ಭಾಗಗಳನ್ನಾಗಿ ಪ್ರಕಟಿಸಲಾಗುತ್ತಿದೆ. ಈ ಸಂಚಿಕೆಯಲ್ಲಿ ಎರಡನೇ ಭಾಗವನ್ನು ಪ್ರಕಟಿಸಲಾಗಿದೆ.

ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ.

**Employment generation through Souharda movement**

It may be seeing from the chart of growth of KSSFCL movement in Karnataka as the number of societies increased in every year the number of youths employed the souharda movement is also growing simultaneously. Presently 6000 all socities have provides 62,000 employment in Karnataka.

**8. Employment Creation Livelihood and Equitable Growth.**

Cooperatives play a significant role in employment creation and income generation activities.

Cooperative Enterprises Impact on Employment

They employ people directly.

Indirectly they promote employment and self employment through creating marketing opportunities and improving marketing conditions; and

As spillover effect to non-members whose professional activities are closely related to transactions with cooperative (such as tradesmen or input suppliers)

**Employment in Cooperatives Selected Counties**

| Country | Number of Jobs |
|---|---|
| United States | 2 million |
| France | 1 million |
| Italy | 1.1 million |
| Brazil | 274.000 |
| Argentina | 290.000 |
| Kenya | 250.000 |
| Indonesia | 300.00 |
| India (Direct employment) | 13.30% |
| (self employment) | 10.90% |
| Colombia | |
| (Direct employment workers cooperators) | 7.00.000 |

**Source : The Cooperator magazine.**

**Some reasons for the success:**

- In the short term, cooperatives are member based so rather than shedding labour they think of new activities (productive, export restricting).
- Members are aware of an imminent crisis and can prepare for it due to democratic structure and information sharing in real time
- Since decision marking is rest with members it is easy to decided any issues which arises.
- Safety and support funds guard against shocks and common reserves that cannot be withdrawn guarantee financial stability.
- In the long term, cooperatives build pension and education mechanisum for member and target community needs with a long term vision.
- Restructing and entering new activities are standard practice for cooperatives. other contributions to livelihoods and equitable growth documented for cooperative include income security, job for rural communities, strengthening farmers position in the value chain, employment in diverse sectors of the economy, spillover efforts on employment provision of infrastructure and other services & social inclusion. Evidence from around the world shows the contribution cooperatives have role in promoting decent work and providing income, security, especially among those previously excluded. Some of the best example in India, is dairy Industry, agricultural sectors, fertilizer sectors shows providing employment opportunity income generating and livelihood.

### 9. Sustainable Natural Resource Management :

Cooperatives contribute to the sustainable management of natural resource in a various of ways;

A. Cooperatives can ensure that natural resources are not depleted where cooperative have provided a forum for local people to find solutions to environmental change by defining their properly and user rights.

B. Managing natural resource

C. and diversifying their economic activity to embrace green economic venture Sustainable agricultural cooperatives diversity their activities to include water management, tourism, production of quality regional foods and organic farming. As like in other countries of the world, in India, cooperatives can adopt “social cooperatives” (as in principles) which provide maintenance of public Green Spaces, Urban waste collection, urban sanitation installation of solar panels and waste prevention & recuse. At national level NCDC can take lead role in this Direction.

### 10. Good Governance :

Cooperatives have an important role to play in the process of good governance. Firstly, one of the principles of cooperation is democratic member control. The equal voting rights of cooperative enterprises, on the basis of our member, one vote impact the necessary and legitimate representativeness to make them key actors in the social dialogue process especially in rural and informal economy settings Good governance characteristics such as transparency, responsibility, accountability participation(TRAP), responsiveness to the people’s needs, and respect for the rule of law, are also features of the cooperative identity. Cooperatives can empower people by enabling even the poorest segments of the population to participate in economic progress, Further cooperatives can bring together a range of community Institution to faster opportunities for decent work and social inclusion.

Secondly, cooperatives and cooperative members in their dual role as state holders and owners or controller can provide an important voice in the global debates on governance and transparency. Strong and legitimate governance Institution including social enterprise like cooperatives and needed to ensure that the benefits of development are equally shared and sustainable overtime.

At the national level GOI set up an separate MOC to bring good governance by trans -forming the changes in governance and setup an example how cooperatives can make vibrate India. Similarity cooperatives are acting as bridge between center & state bring uniformity in the governance.

### 11. Promotion of Stable and Peaceful Societies:

Cooperative have often emerged as sources of positive social capital, fostering a strong sense of community participations, empowerment and inclusive among member and restoring interpersonal relationship and peace. They can have trans- formative potential in revitalizing struggling sectors, recovery of crises for local economics, increasing returns. producers and service providers across, value chains, formalizing informal employment and generating employment for woman & youth in rural and urban areas across times.

There are also new forms of cooperatives that are being formed, are responding to different crises, for instance social care cooperative that are being formed in responding to the care needs of ageing population, or care cooperative formed to take care of orphans’ after earthquake, care needs during Covid-19 epidemic etc.

The Participation of women’s cooperatives have been especially active during the peace and development. Souharda Federation is also making concerted efforts in promotion of stable & peaceful societies in this direction.

### Cooperatives and Global Enabling Environment and Long Term Finance:

Cooperatives are contributing to the creation of a global enabling environment to chaperone sustainable development by bridging the trading divide between the developed and developing counties’ of the world, by stabilizing financial system during crises; and by providing the base for financial deepening around the world. Creating link between the countries to support social economic and

cultural is essential factor. These is a wide and growing range of fair trade products exported by cooperative including coffee, tea, handicrafts, cocoa, sugar, bananas, honey, wine and flowers etc.

Financial cooperatives are some of the best means for financial deepening and provide the financial base for other kinds of development activities many parts of the world. In many cases they are the only formal financial organization available, particularly in remote rural areas, where members can save and borrow money to develop their own business.

In India cooperatives also provide micro insurance in different forms. These roles initiates contributes to financial stability. Creation of National Cooperative Fund may be the future goal for financial stability.

**Conclusion :**

Cooperatives have long been champions of economic inclusivity offering opportunities for self employment fair wages and shared prosperity to individuals from diverse backgrounds. They empower marginalized communities, Support local economics and contribute to provery reduction. By prioritizing cooperation over competition, cooperatives demonstrate that economic success can go hand in hand with social and environmental responsibility.

Cooperative education and training plays a vital role in promoting social entrepreneurship, critical thinking and cooperative mindset from early age is the time factor. It equips involves with the knowledge, skills and values necessary to actively engage in cooperative enterprises and contribute to the development of more inclusive and sustainable societies. By promoting sustainable practices renewable energy initiatives and responsible consumption, cooperative contributes to mitigate environmental degradation and building more sustainable in future continiously. Cooperative governance sets cooperatives apart form traditional hierar chical structure. Through democratic decision-making processes, cooperatives prioritize, inclusivity transparency and member participation. By upholding principles of equitable representation, transparency and accountability cooperatives foster a sense of ownership, community and shared responsibility

By leveraging digital tools and platform such as block chain technology, digital cooperatives and online platforms cooperatives can enhance thier efficiency expand their vision foster innovation and create new opportunity for collaboration and value creation.

As a federal cooperatives, it is planning to establish state level souharda apex bank to bring member cooperative to re fiancé opportunity and help them to re invest their surplus funds for betterment. Further setting up of joint venture business formation of cooperative unions encouraging to super markets for financial products etc. are the new future vision to sustain its objectives.

**Centre of Excellence by KSSFCL A New Project :**

KSSFCL is keenly interested to start Centre of Excellence for the healthy growth of souharda movement in Karnataka. KSSFCL is getting ready to submit a proposal for Ministry of Skill Development and Entrepreneurship of India.

Skills and knowledge are the driving forces of economic growth and social development for any country. Countries with higher levels and better standards of skills adjust more effectively to the challenges and opportunities in domestic and international job markets. Center of Excellence (CoE) is a body that provides leadership, best practices, research, support, training of trainers and skill training for a specific sector/s. The literal meaning of a Center of Excellence is – 'A place where the highest standards are maintained.'

KSSFCL will have a Centre of Excellence for souharda cooperatives in Karnataka.

The cooperative movement is a powerful and transformative force for posting changes by festering inclusivity, sustainability and democratic governance, cooperatives provides a pathway towards a more equitable and resilient world. It is crucial that we recognize and support the growth and impact of the cooperative movement as it holds the potential to address the pressing challenges we face and create a more just and sustainable future for all.

70ನೇ ಅಖಿಲ ಭಾರತ ಸಹಕಾರ ಸಪ್ತಾಹ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಲೇಖನ

# ಸಹಕಾರ ಸಂಘ ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು (Recent Developments in Cooperatives)

– ಶ್ರೀಮತಿ ದಿವ್ಯ ಟಿ., ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು

2023ರ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯವು "ಭಾರತದ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" (Role of Cooperatives in Making India a $5 Trillion Economy and SDGs) ಎಂಬುದಾಗಿದೆ. ಈ ಸಹಕಾರ ಸಪ್ತಾಹ ಆಚರಣೆಯ 7 ದಿನಗಳ ಅವಧಿಯಲ್ಲಿ ಒಂದೊಂದು ದಿನವನ್ನು ಒಂದೊಂದು ವಿಷಯದೊಂದಿಗೆ ಆಚರಿಸಲಾಗುತ್ತಿದ್ದು, ದಿನಾಂಕ 14 ನವೆಂಬರ್ 2023ರಂದು "ಸಹಕಾರಿ ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು (Recent Developments in Cooperatives)" ಕುರಿತು ದಿನವನ್ನಾಗಿ ಆಚರಿಸುವುದರ ಮೂಲಕ ಸಹಕಾರಿ ಸಂಸ್ಥೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ಪ್ರಚುರಪಡಿಸಲಾಗುತ್ತಿದೆ.

**ಪೀಠಿಕೆ :**

ಭಾರತದ ಸಹಕಾರ ಕ್ಷೇತ್ರವು ಪ್ರಪಂಚದ ಅತಿ ದೊಡ್ಡ ಸಹಕಾರ ಕ್ಷೇತ್ರ ಎಂಬ ಹೆಗ್ಗಳಿಕೆಯನ್ನು ಹೊಂದಿದ್ದು, ಶತಮಾನಗಳ ಇತಿಹಾಸವನ್ನು ಹೊಂದಿದೆ. ಪಂಚ ವಾರ್ಷಿಕ ಯೋಜನೆಗಳ ಮೂಲಕ ಹಾಗೂ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳನ್ನು ರಚಿಸಿ, ಶಿಫಾರಸ್ಸುಗಳನ್ನು ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಒತ್ತು ನೀಡಿ, ಸಹಕಾರಿ ಸಂಸ್ಥೆಗಳ ಬೆಳವಣಿಗೆಗಳಿಗೆ ಕೊಡುಗೆಯನ್ನು ನೀಡುತ್ತಾ ಬರಲಾಗಿದ್ದರೂ ಸಹ ಈವರೆಗೂ ಕೃಷಿ ಇಲಾಖೆಯೊಂದಿಗೆ ಸಹಕಾರ ಕ್ಷೇತ್ರದ ಉದ್ದೇಶಗಳನ್ನು ನಿರ್ವಹಿಸಲಾಗುತ್ತಿದ್ದ ಹಿನ್ನೆಲೆಯಲ್ಲಿ ಈ ಕುರಿತಂತೆ ಸಂಪೂರ್ಣವಾಗಿ ಗಮನಹರಿಸಲು ಸಾಧ್ಯವಾಗಿರಲಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಿಸಿ, ಜುಲೈ 2021ರಂದು ಕೃಷಿ ಇಲಾಖೆಯಿಂದ ಸಹಕಾರ ಕ್ಷೇತ್ರವನ್ನು ಪ್ರತ್ಯೇಕಗೊಳಿಸಲಾಯಿತು. ದಿನಾಂಕ 06 ಜುಲೈ 2021ರಂದು "ಸಹಕಾರ್ ಸೇ ಸಮೃದ್ಧಿ" ಎಂಬ ಘೋಷ ವಾಕ್ಯದೊಂದಿಗೆ ಪತ್ಯೇಕ ಸಹಕಾರ ಸಚಿವಾಲಯವನ್ನು ರಚಿಸಲಾಯಿತು. ಈ ಮೂಲಕ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಮತ್ತಷ್ಟು ಹುಂಬುಗೊಂಡಿತು. ಸಹಕಾರ ಸಚಿವಾಲಯ ರಚನೆಯಾದ ನಂತರ ಮಂಡನೆಯಾದ ಮೊದಲ ಬಜೆಟ್‌ನಲ್ಲಿ ಸಹಕಾರ ಕ್ಷೇತ್ರಕ್ಕೆ ರೂ.900 ಕೋಟಿಗಳ ಬಜೆಟ್ ಅನ್ನು ಮೀಸಲಿರಿಸಲಾಯಿತು. ಸಹಕಾರಿ ಸಂಸ್ಥೆಗಳು ಭಾರತದ ಸಾಮಾಜಿಕ, ಆರ್ಥಿಕ ಚಟುವಟಿಕೆಗಳು ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ತ್ವರಿತ ಪ್ರಗತಿಯನ್ನು ಸಾಧಿಸುತ್ತಿದ್ದು, ಕ್ಷಿಪ್ರಗತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಹಕಾರ ಕ್ಷೇತ್ರದ ಪುನಶ್ಚೇತನವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ಈ ಅಂಶವು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಮತ್ತು ಅದರ ಪ್ರಸ್ತುತ ಸ್ಥಿತಿಯ ಉನ್ನತಿಗಾಗಿ ಉತ್ಸುಕವಾಗಿದೆ.

**ವಸ್ತು ವಿಷಯ ವಿವರಣೆ :**

ಇತ್ತೀಚಿನ ದಿನಗಳಲ್ಲಿ ಕೈಗೊಂಡಿರುವ ಹಲವಾರು ಕ್ರಮಗಳಿಂದಾಗಿ ಸಹಕಾರಿ ಸಂಸ್ಥೆಗಳಲ್ಲಿ ಆಗಿರುವ ಬೆಳವಣಿಗೆಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ:

- **ಸಹಕಾರ ಸಚಿವಾಲಯ ರಚನೆ :** ದೇಶದಲ್ಲಿ ಸಹಕಾರ ಚಳುವಳಿಯನ್ನು ಬಲಪಡಿಸಲು ಪ್ರತ್ಯೇಕ ಆಡಳಿತಾತ್ಮಕ, ಕಾನೂನು ಮತ್ತು ನೀತಿ ಚೌಕಟ್ಟನ್ನು ಒದಗಿಸಲು ಸರ್ಕಾರವು ಹೊಸ ಸಹಕಾರ ಸಚಿವಾಲಯವನ್ನು ರಚಿಸಿದೆ. ಸಹಕಾರ ಸಚಿವಾಲಯದ ಮೂಲಕ ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳನ್ನು ಬಲಪಡಿಸಲು ಕಾರ್ಯನಿರ್ವಹಿಸುತ್ತಿದೆ. ಸಹಕಾರಿ ಸಂಸ್ಥೆಗಳಿಗೆ 'ಸರಳ ವ್ಯಾಪಾರ' ಪ್ರಕ್ರಿಯೆಗಳನ್ನು ಸುಗಮಗೊಳಿಸುತ್ತಿದೆ. ಪ್ರತ್ಯೇಕ ಸಹಕಾರ ಸಚಿವಾಲಯ ರಚನೆಯಾಗಿ ಸಹಕಾರಿ ಸಂಸ್ಥೆಗಳಿಗೆ ಪ್ರತ್ಯೇಕ ಬಜೆಟ್ ಮೀಸಲಿಟ್ಟಿದ್ದು, ಇದರ ಫಲವಾಗಿ ಕಾರ್ಪೋರೇಟ್ ವಲಯದಂತೆಯೇ ಸಹಕಾರಿ ಸಂಸ್ಥೆಗಳಿಗೂ ಸಹ ವೇದಿಕೆ ಕಲ್ಪಿಸಲಾಗುತ್ತಿದೆ. 2023-24ನೇ ಸಾಲಿನ ಬಜೆಟ್‌ನಲ್ಲಿ ಒಟ್ಟು ರೂ.1,150.38 ಕೋಟಿಗಳ ಅನುದಾನವನ್ನು ಮೀಸಲಿಟ್ಟಿದೆ.

- **ಸಹಕಾರ್ ಸೇ ಸಮೃದ್ಧಿ :** 'ಸಹಕಾರದಿಂದ ಸಮೃದ್ಧಿ' (ಸಹಕಾರ್ ಸೇ ಸಮೃದ್ಧಿ')ಯ ದೃಷ್ಟಿಕೋನದ ಮೂಲಕ ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳನ್ನು ಬಲಪಡಿಸಲು ಮತ್ತು ಸಹಕಾರ ಚಳುವಳಿಯ ಅಭಿವೃದ್ಧಿಗಾಗಿ ಸಹಕಾರ್ ಸೇ ಸಮೃದ್ಧಿಯ ಘೋಷ ವಾಕ್ಯದೊಂದಿಗೆ ರಚನೆಯಾದ ಸಹಕಾರ ಕ್ಷೇತ್ರದ ಪ್ರತ್ಯೇಕ ಸಚಿವಾಲಯದ ಮೂಲಕ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಮೂಲಕ ಸಹಕಾರಿ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಹಾಗೂ ಸಹಕಾರಿ ಸಂಸ್ಥೆಗಳಲ್ಲಿ ಪಾರದರ್ಶಕತೆ, ಆಧುನೀಕರಣ, ಗಣಕೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತಿದೆ.

• **GeM ಪೋರ್ಟಲ್‌ನಲ್ಲಿ ಸಹಕಾರಿ ಸಂಸ್ಥೆಗಳ ನೋಂದಣಿಗೆ ಅವಕಾಶ :** ದಿನಾಂಕ 01 ಜೂನ್ 2022ರಂದು ಸರ್ಕಾರಿ ಇ–ಮಾರ್ಕೆಟಿಂಗ್ (GeM) ಪ್ಲಾಟ್‌ಫಾರ್ಮ್‌ನಲ್ಲಿ ಸಹಕಾರಿ ಸಂಸ್ಥೆಗಳನ್ನು 'ಖರೀದಿದಾರರಾಗಿ' ನೋಂದಾಯಿಸಲು ಅವಕಾಶ ಮಾಡಿಕೊಟ್ಟಿದೆ. ಉಜಒ ಪೋರ್ಟಲ್‌ನಲ್ಲಿ ದೇಶದಾದ್ಯಂತ ನೋಂದಾಯಿಸಲಾದ ಸುಮಾರು 40 ಲಕ್ಷ ಮಾರಾಟಗಾರರಿಂದ ಸರಕು ಮತ್ತು ಸೇವೆಗಳನ್ನು ಖರೀದಿಸಲು ಅನುವು ಮಾಡಿಕೊಟ್ಟಿದ್ದು, ಇದರಿಂದ ಸಹಕಾರಿ ಸಂಸ್ಥೆಗಳಿಗೆ ಹಣದ ಉಳಿತಾಯ ಮಾಡಲು ಮತ್ತು ತಮ್ಮ ಸಂಗ್ರಹಣೆ/ ಖರೀದಿ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಸುಧಾರಿಸಲು ಸಹಾಯಕವಾಗುತ್ತಿದೆ.

• **ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ (PACS) ಗಣಕೀಕರಣ** : "ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ (PACS) ಗಣಕೀಕರಣ" ಯೋಜನೆಯನ್ನು ದಿನಾಂಕ 29 ಜೂನ್ 2022ರಂದು ರೂ.2,516 ಕೋಟಿಗಳ ಬಜೆಟ್‌ನೊಂದಿಗೆ ಮೂರು ಹಂತದೊಂದಿಗೆ 63,000 ಕಾರ್ಯನಿರತ ಪ್ಯಾಕ್ಸ್‌ಗಳ ಡಿಜಿಟಲೀಕರಣ ಯೋಜನೆಯನ್ನು ಜಾರಿಗೊಳಿಸಿದೆ. ಇದರಿಂದಾಗಿ ಪ್ಯಾಕ್ಸ್‌ಗಳಲ್ಲಿ ದಾಖಲೆಗಳ ನಿರ್ವಹಣೆಯಲ್ಲಿ ಏಕ ರೂಪತೆಯನ್ನು ತರಲು ಹಾಗೂ ಪಾರದರ್ಶಕತೆಯನ್ನು ಹೊಂದಲು ಸಾಧ್ಯವಾಗುತ್ತಿದೆ. ಹಾಗೆಯೇ, ಕಾರ್ಯಸ್ಥಗಿತಗೊಂಡಿರುವ ಪ್ಯಾಕ್ಸ್‌ಗಳನ್ನು ಪುನರುಜ್ಜೀವನಗೊಳಿಸಲು ಸಾಧ್ಯವಾಗುತ್ತಿದೆ.

• **ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಸಾಲ :** ದೇಶದ ಎಲ್ಲಾ ಘಟಕಗಳು ನೀಡುವ ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಸಾಲಗಳಲ್ಲಿ ಶೇ.41ರಷ್ಟು (3.01 ಕೋಟಿ ರೈತರು) ಪ್ಯಾಕ್ಸ್‌ನಲ್ಲಿ ಖಾತೆಯನ್ನು ಹೊಂದಿವೆ ಮತ್ತು ಈ ಕೆಸಿಸಿ ಸಾಲಗಳನ್ನು ಪ್ಯಾಕ್ಸ್ ಮೂಲಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ.95ರಷ್ಟು (2.95 ಕೋಟಿ ರೈತರು) ನೀಡಿದೆ. ಸಹಕಾರಿ ಸಂಸ್ಥೆಗಳ ಮೂಲಕ ಕೋಟ್ಯಂತರ ಸಣ್ಣ ರೈತರು ಕಿಸಾನ್ ಯೋಜನೆಯ ಪ್ರಯೋಜನಗಳನ್ನು ಪಡೆಯುವುದರ ಮೂಲಕ ಕೃಷಿಗೆ ಸಂಬಂಧಿಸಿದ ತಮ್ಮ ಆರ್ಥಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ.

• **PACS ಗಳಿಗಾಗಿ ಮಾದರಿ ಉಪವಿಧಿಗಳ ರಚನೆ :** ರಾಜ್ಯ ಸರ್ಕಾರಗಳು, ರಾಷ್ಟ್ರೀಯ ಸಹಕಾರ ಫೆಡರೇಷನ್‌ಗಳು ಮತ್ತು ಎಲ್ಲಾ ಇತರ ಮಧ್ಯಸ್ಥಗಾರರೊಂದಿಗೆ ಸಮಾಲೋಚಿಸಿ ಪ್ಯಾಕ್ಸ್‌ಗಳಿಗಾಗಿ ಮಾದರಿ ಉಪವಿಧಿಗಳನ್ನು ರಚಿಸುತ್ತಿದ್ದು, ಇದರಿಂದಾಗಿ ಪ್ಯಾಕ್ಸ್‌ಗಳು ವೈವಿಧ್ಯಮಯ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಗ್ರಾಮ ಮಟ್ಟದಲ್ಲಿ ವಿವಿಧೋದ್ದೇಶ ಆರ್ಥಿಕ ಘಟಕಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿದೆ.

• **PACS ಮೂಲಕ ರೈತ ಉತ್ಪಾದಕರ ಸಂಸ್ಥೆಗಳ (FPOs) ರಚನೆ :** ರೈತ ಉತ್ಪಾದಕ ಸಂಸ್ಥೆಗಳ (ಎಫ್.ಪಿ.ಒ.) ಮೂಲಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು (ಪಿ.ಎ.ಸಿ.ಎಸ್.) ಬಲಪಡಿಸುವುದಕ್ಕೆ ಸಂಬಂಧಿಸಿದಂತೆ ರೈತ ಉತ್ಪಾದಕ ಸಂಸ್ಥೆ ಯೋಜನೆಯಡಿ ಪ್ರತಿ ರೈತ ಉತ್ಪಾದಕ ಸಂಸ್ಥೆಗಳಿಗೆ ರೂ.33 ಲಕ್ಷಗಳ ಆರ್ಥಿಕ ನೆರವು ಹಾಗೂ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸಲು ಮತ್ತು ಕ್ಲಸ್ಟರ್ ಆಧಾರಿತ ವ್ಯಾಪಾರ ಸಂಸ್ಥೆಗಳಿಗೆ (ಸಿ.ಬಿ.ಬಿ.ಒ.) ಪ್ರಾರಂಭಿಕ ಹಂತದ ತಯಾರಿ ಮಾಡಲು ಪ್ರತಿ ರೈತ ಉತ್ಪಾದಕ ಸಂಸ್ಥೆಗಳಿಗೆ ರೂ.5 ಲಕ್ಷಗಳನ್ನು ನೀಡಲಾಗುತ್ತಿದ್ದು, ಈ ಮೂಲಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಬಲಪಡಿಸುವುದಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

• **PACS ಗಳ ಮೂಲಕ ಎಲ್‌ಪಿಜಿ ವಿತರಣೆ :** ಪ್ಯಾಕ್ಸ್‌ಗಳ ಮೂಲಕ ಎಲ್‌ಪಿಜಿ ವಿತರಣೆ ಕಾರ್ಯವನ್ನು ನಿರ್ವಹಿಸಲು ಅನುವು ಮಾಡಿಕೊಡುವುದರ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿನ ಸಹಕಾರಿ ಸಂಸ್ಥೆಗಳು ಹೊಸ ಆರ್ಥಿಕ ಚಟುವಟಿಕೆಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಟ್ಟಿದೆ ಮತ್ತು ಉದ್ಯೋಗವಕಾಶಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತಿದೆ.

• **PACS ಗಳ ಮೂಲಕ ರಸಗೊಬ್ಬರ ವಿತರಣೆ :** ಪ್ಯಾಕ್ಸ್‌ಗಳು ಗ್ರಾಮೀಣ ಭಾಗಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ರೈತರಿಗೆ ಅಗತ್ಯವಿರುವ ರಸಗೊಬ್ಬರಗಳ ವಿತರಣೆಯನ್ನು ಮಾಡುವುದರ ಮೂಲಕ ಪ್ಯಾಕ್ಸ್‌ಗಳು ವೈವಿಧ್ಯಮಯ ಕಾರ್ಯಗಳನ್ನು ನಿರ್ವಹಿಸಲು ಅನುವು ಮಾಡಿಕೊಟ್ಟು, ರೈತರ ಬದುಕಿಗೆ ಬೆಂಬಲವಾಗಿ ನಿಂತಿದೆ.

• **ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಜನೌಷಧಿ ಕೇಂದ್ರಗಳ ಪ್ರಾರಂಭ :** ಜನೌಷಧಿ ಕೇಂದ್ರಗಳನ್ನು ಸಹಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಪ್ರಾರಂಭಿಸಲಾಗುತ್ತಿದ್ದು, ಇದನ್ನು ಪ್ರಾರಂಭಿಸಿರುವ ಮೊದಲ ರಾಜ್ಯ ಉತ್ತರಾಖಂಡವಾಗಿದೆ. ಪ್ರಧಾನ ಮಂತ್ರಿ ಜನೌಷಧಿ ಯೋಜನೆಯ ಮೂಲಕ ಸಹಕಾರಿ ಸಂಘಗಳಿಗೆ ಜನೌಷಧಿ ಮಳಿಗೆಯನ್ನು ತೆರೆಯಲು ಮತ್ತು ಕಡಿಮೆ ದರದಲ್ಲಿ ಔಷಧಿಗಳನ್ನು ಒದಗಿಸಲು ಹಣಕಾಸಿನ ನೆರವನ್ನು ಒದಗಿಸುತ್ತಿದೆ. ಸಹಕಾರಿ ಸಂಸ್ಥೆಗಳ ಮೂಲಕ ಜನೌಷಧಿ ಕೇಂದ್ರಗಳ ಸ್ಥಾಪನೆಯ ಮೂಲಕ ಸಾಮಾಜಿಕ ಕಳಕಳಿಯ ಉದ್ದೇಶದೊಂದಿಗೆ ಸಮಾಜಕ್ಕೆ ಕೊಡುಗೆಯನ್ನು ನೀಡುತ್ತಿದೆ.

• **ಸಹಕಾರಿ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಆಧುನೀಕರಣ ಮತ್ತು ವೃತ್ತಿಪರತೆ :** ದೇಶದಾದ್ಯಂತ ಸಹಕಾರಿ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು ಆಧುನೀಕರಣಗೊಳಿಸುವ ಮತ್ತು ವೃತ್ತಿಪರಗೊಳಿಸುವ ಯೋಜನೆಯು ಸಹ ಜಾರಿಯಲ್ಲಿದ್ದು, ಆ ಮೂಲಕ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ವೃತ್ತಿಪರತೆಯನ್ನು ತರಲು ಸಾಧ್ಯವಾಗುತ್ತಿದೆ. ಸಹಕಾರ ಸಚಿವಾಲಯದ ಮೂಲಕ ಶಿಕ್ಷಣ, ತರಬೇತಿ, ಸಮಾಲೋಚನೆ, ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ವಿಶ್ವದ ಅತಿದೊಡ್ಡ ಸಹಕಾರಿ

ವಿಶ್ವವಿದ್ಯಾನಿಲಯದ ಸ್ಥಾಪನೆಯನ್ನು ಪ್ರಸ್ತಾಪಿಸಿದ್ದು, VAMNICOM, NCCT ಮತ್ತು JCTಅಯ ಅಧ್ಯಾಪಕರ ಸಾಮರ್ಥ್ಯವನ್ನು ವೃದ್ಧಿಸುವ ಯೋಜನೆಗಳು ಸಹ ಜಾರಿಯಲ್ಲಿದೆ.

- **ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ರಚನೆ :** ವಿವಿಧ ವಲಯಗಳ ಸಹಕಾರಿ ಸಂಸ್ಥೆಗಳ ಮಾಹಿತಿಗೆ ಒಂದೇ ಪ್ರವೇಶವನ್ನು ಒದಗಿಸಲು ರಾಷ್ಟ್ರೀಯ ಸಹಕಾರಿ ಯೂನಿಯನ್ ಆಫ್ ಇಂಡಿಯಾ (NCUI) ದೊಂದಿಗೆ ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ರಚನೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಹಂತ ಹಂತವಾಗಿ ಪೂರ್ಣಗೊಳ್ಳಲಿದೆ. ಹಂತ–1ರ ಅಡಿಯಲ್ಲಿ, ಮೂರು ವಲಯಗಳಲ್ಲಿ ಅಂದರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು (ಪ್ಯಾಕ್ಸ್), ಡೈರಿ ಮತ್ತು ಮೀನುಗಾರಿಕೆ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 2.63 ಲಕ್ಷ ಪ್ರಾಥಮಿಕ ಸಹಕಾರ ಸಂಘಗಳ ಮ್ಯಾಪಿಂಗ್ ಪೂರ್ಣಗೊಂಡಿದೆ, ಹಂತ–2ರ ಅಡಿಯಲ್ಲಿ, ರಾಷ್ಟ್ರೀಯ ಸಹಕಾರಿ ಸಂಘಗಳು/ ಫೆಡರೇಷನ್‌ಗಳ ಮ್ಯಾಪಿಂಗ್ ಪೂರ್ಣಗೊಂಡಿವೆ. ಹಂತ–3ರ ಅಡಿಯಲ್ಲಿ, ಇತರ ಎಲ್ಲಾ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಳಿದ ಸಹಕಾರಿ ಸಂಸ್ಥೆಗಳಿಗೆ ಡೇಟಾಬೇಸ್ ಅನ್ನು ವಿಸ್ತರಿಸಲಾಗುತ್ತಿದೆ. ಡೇಟಾಬೇಸ್ ರಚನೆಯ ಮೂಲಕ ಸಹಕಾರಿ ಸಂಸ್ಥೆಗಳಲ್ಲಿ ಸೂಕ್ತವಾದ ನೀತಿಗಳ ಯೋಜನೆ, ರಚನೆ ಮತ್ತು ಅನುಷ್ಠಾನದಲ್ಲಿ ಬಾಧ್ಯಸ್ಥಗಾರರಿಗೆ ಅನುಕೂಲವಾಗಲಿದೆ.

- **ರಾಷ್ಟ್ರೀಯ ಸಹಕಾರಿ ನೀತಿ ರಚನೆಗೆ ಚಾಲನೆ :** ರಾಷ್ಟ್ರೀಯ ಸಹಕಾರ ನೀತಿಯ ರಚನೆಗಾಗಿ ರಾಷ್ಟ್ರ ಮಟ್ಟದ ಸಮಿತಿಯನ್ನು ರಚಿಸಿ ಕ್ರಮವಿಡಲಾಗಿದ್ದು, ರಾಷ್ಟ್ರೀಯ ಸಹಕಾರ ನೀತಿಯ ರಚನೆ ಪೂರ್ಣಗೊಳ್ಳುವ ಹಂತ ತಲುಪಿದೆ. ಸಹಕಾರಿ ಸಂಸ್ಥೆಗಳನ್ನು ಉತ್ತೇಜನಕಾರಿ ಆರ್ಥಿಕ ಘಟಕಗಳಾಗಿ, ಸಹಕಾರಿ ಸಂಸ್ಥೆಗಳಿಗೆ ಸಮಾನವಾದ ಕ್ಷೇತ್ರ, ಬಂಡವಾಳ ಮತ್ತು ನಿಧಿಗಳ ಮೂಲಗಳು, ಆದ್ಯತೆಯ ವಿಭಾಗಗಳ ಸೇರ್ಪಡೆ, ತಂತ್ರಜ್ಞಾನದ ಬಳಕೆ, ಕೌಶಲ್ಯ ಮತ್ತು ತರಬೇತಿ, ಸುಸ್ಥಿರ ಮತ್ತು ಅನುಷ್ಠಾನ ಯೋಜನೆ ಇವುಗಳ ಕುರಿತಂತೆ ಅಂಶಗಳನ್ನು ಸೇರ್ಪಡೆ ಮಾಡಲಾಗುತ್ತಿದೆ. ರಾಷ್ಟ್ರೀಯ ಸಹಕಾರ ನೀತಿಯ ರಚನೆಯ ಮೂಲಕ ದೇಶದ ಆರ್ಥಿಕತೆಯನ್ನು ಮುಂಚೂಣಿಗೆ ತರುವಲ್ಲಿ ಸಹಕಾರಿ ಸಂಸ್ಥೆಗಳನ್ನು ಮುನ್ನಲೆಗೆ ತರುತ್ತದೆ. ರಾಷ್ಟ್ರೀಯ ಸಹಕಾರಿ ನೀತಿಯು ಮುಂದಿನ 25 ವರ್ಷಗಳವರೆಗೆ ಅಂದರೆ 2024–2047ರವರೆಗೆ ಸಹಕಾರಿ ಸಂಸ್ಥೆಗಳಿಗೆ ಮಾರ್ಗಸೂಚಿಯನ್ನು ಒದಗಿಸುವ, 2024–2030ರ ಅವಧಿಯ ನಡುವೆ 50,000 ಹೊಸ ಪ್ಯಾಕ್ಸ್, ಡೈರಿ ಮತ್ತು ಇತರ ಸಹಕಾರಿಗಳ ಸ್ಥಾಪನೆಯನ್ನು ಮತ್ತು ನಬಾರ್ಡ್‌ನಂತೆಯೇ ರಾಷ್ಟ್ರೀಯ ಸಹಕಾರಿ ಬ್ಯಾಂಕ್ ಆಫ್ ಇಂಡಿಯಾದ ಸ್ಥಾಪನೆಯನ್ನು ಉಲ್ಲೇಖಿಸುತ್ತದೆ.

- **ಹೈನುಗಾರಿಕೆ ಸಹಕಾರಿ ಸಂಘಗಳಿಗೆ ಉತ್ತೇಜನ :** 2033–34ರ ವೇಳೆಗೆ ಭಾರತವು 330 ಮಿಲಿಯನ್ ಮೆಟ್ರಿಕ್ ಟನ್ (ಎಂಎಂಟಿ) ಅಥವಾ ಜಾಗತಿಕ ಹಾಲಿನ ಉತ್ಪಾದನೆಯಲ್ಲಿ ಶೇ.33ರಷ್ಟು ಕೊಡುಗೆಯನ್ನು ನೀಡುವ ಗುರಿಯನ್ನು ತಲುಪಲು ಕರೆ ನೀಡುವುದರ ಮೂಲಕ ಹೈನುಗಾರಿಕೆ ಸಹಕಾರಿ ಸಂಘಗಳಿಗೆ ಉತ್ತೇಜನ ದೊರೆತಿದೆ.

- **ಮತ್ಸ್ಯ ಸಂಪದ ಯೋಜನೆ :** ಮೀನುಗಾರಿಕೆ ಕ್ಷೇತ್ರದಲ್ಲಿ 25 ಸಾವಿರಕ್ಕೂ ಹೆಚ್ಚು ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಮೀನು ಸಂಸ್ಕರಣೆ, ಮೀನು ಒಣಗಿಸುವುದು, ಮೀನು ಕ್ಯೂರಿಂಗ್, ಮೀನು ಸಂಗ್ರಹಣೆ, ಮೀನು ಡಬ್ಬಿಯಲ್ಲಿ ಹಾಕುವುದು, ಮೀನು ಸಾಗಣೆ ಮುಂತಾದ ಕೈಗಾರಿಕಾ ಚಟುವಟಿಕೆಗಳನ್ನು ನಡೆಸುತ್ತಿರುವ ಸಹಕಾರಿ ಸಂಸ್ಥೆಗಳನ್ನು ಮತ್ಸ್ಯ ಸಂಪದ ಯೋಜನೆಯಡಿ ಬಲಪಡಿಸಲಾಗುತ್ತಿದೆ. ಮೀನು ಸಾಕಣೆಯಂತಹ ಅನೇಕ ಹೊಸ ಕ್ಷೇತ್ರಗಳಲ್ಲಿ ಪ್ಯಾಕ್ಸ್‌ನ ಪಾತ್ರವು ವಿಸ್ತರಿಸುತ್ತಿದೆ ಮತ್ತು ದೇಶದಾದ್ಯಂತ 2 ಲಕ್ಷ ಹೊಸ ವಿವಿಧೋದ್ದೇಶ ಸಂಘಗಳನ್ನು ರಚಿಸುವ ಗುರಿಯಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ.

- **ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ ತಿದ್ದುಪಡಿ :** ಬಹು ರಾಜ್ಯ ಸಹಕಾರಿ ಸಂಘಗಳ (MSCS) ಕಾಯ್ದೆ 2002ಕ್ಕೆ 97ನೇ ಸಂವಿಧಾನ ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಮಾಡುವುದರ ಮೂಲಕ ಸಹಕಾರಿ ಸಂಸ್ಥೆಗಳಲ್ಲಿ ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿಯನ್ನು ಬಲಪಡಿಸಲು ಹಾಗೂ ಸದಸ್ಯರ ಹಿತಾಸಕ್ತಿಗಳ ರಕ್ಷಣೆ, ಆಡಳಿತ ಸುಧಾರಣೆ ಮತ್ತು ಪಾರದರ್ಶಕತೆಯನ್ನು ತರುತ್ತಿದೆ. ಬಹು–ರಾಜ್ಯ ಸಹಕಾರಿ ಸಂಘಗಳ ಮೇಲ್ವಿಚಾರಣೆಯನ್ನು ಬಲಪಡಿಸಲು ಕೇಂದ್ರೀಯ ರಿಜಿಸ್ಟ್ರಾರ್ ಕಛೇರಿಯನ್ನು ಗಣಕೀಕರಣಗೊಳಿಸಲಾಗುತ್ತಿದೆ. ತಿದ್ದುಪಡಿಯ ಮೂಲಕ "ಸಹಕಾರಿ ಚುನಾವಣಾ ಪ್ರಾಧಿಕಾರ" ಎಂದು ಕರೆಯಲಾಗುವ ಪ್ರಾಧಿಕಾರವನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ, ಅಲ್ಲದೇ, ಸಹಕಾರಿ ಸಂಘದ ಆಡಳಿತ ಮಂಡಳಿಯಲ್ಲಿ ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ತಲಾ ಒಂದೊಂದು ಸ್ಥಾನಗಳನ್ನು ಮೀಸಲಿಡುವ ಅವಕಾಶವನ್ನು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಕಾರ್ಯನಿರ್ವಹಿಸುವ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವ ಸಮಿತಿಯು ಮಸೂದೆಯಲ್ಲಿದೆ. ಬಹು–ರಾಜ್ಯ ಸಹಕಾರಿ ಬ್ಯಾಂಕ್‌ಗಳು, ಐದು ನೂರು ಕೋಟಿ ರೂಪಾಯಿಗಿಂತ ಹೆಚ್ಚಿನ ಠೇವಣಿ ಹೊಂದಿರುವ ಬಹು–ರಾಜ್ಯ ಕ್ರೆಡಿಟ್ ಸೊಸೈಟಿಗಳು ಮತ್ತು ಐದು ನೂರು ಕೋಟಿ ರೂಪಾಯಿಗಿಂತ ಹೆಚ್ಚಿನ ವಹಿವಾಟು ಹೊಂದಿರುವ ಬಹು–ರಾಜ್ಯ ಪತ್ತೇತರ ಸಂಘಗಳ ಸಂದರ್ಭದಲ್ಲಿ, ಲೆಕ್ಕಪರಿಶೋಧಕರನ್ನು ಕೇಂದ್ರ ರಿಜಿಸ್ಟ್ರಾರ್‌ನಿಂದ ಅಂತಹ ಸೊಸೈಟಿಗಳ ಲೆಕ್ಕಪರಿಶೋಧನೆಗಾಗಿ ಅನುಮೋದಿಸಲಾದ ಲೆಕ್ಕಪರಿಶೋಧಕರ ಪಟ್ಟಿಯಿಂದ ನೇಮಿಸಲಾಗುತ್ತದೆ.

- **ಕ್ರೆಡಿಟ್ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ವಿನಾಯಿತಿ :** ಕ್ರೆಡಿಟ್ ಸಹಕಾರಿ ಸಂಸ್ಥೆಗಳು, ತನ್ನ ಸದಸ್ಯರೊಡನೆ ಉಳಿತಾಯ ಮನೋಭಾವ

ಬೆಳೆಸುವ ದೃಷ್ಟಿಯಿಂದ ಠೇವಣಿ ಸಂಗ್ರಹ ಹಾಗೂ ಸಾಲ ವಿತರಣೆ ಕಾರ್ಯಗಳನ್ನು ನಿರ್ವಹಿಸುತ್ತಿರುವುದರಿಂದ ಮತ್ತು ಸೇವಾ ಮನೋಭಾವದಿಂದ ಸೇವೆ ಮಾಡುವ ಸಂಸ್ಥೆಗಳಾಗಿರುವುದರಿಂದ ಕ್ರೆಡಿಟ್ ಸಹಕಾರಿ ಸಂಸ್ಥೆಗಳು ಆದಾಯ ತೆರಿಗೆ ಕಾಯ್ದೆ 80ಪಿ (2)ರ ಅಡಿಯಲ್ಲಿ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಇದರಿಂದಾಗಿ ಬಹಳ ವರ್ಷಗಳಿಂದ ಕ್ರೆಡಿಟ್ ಸಹಕಾರಿ ಸಂಸ್ಥೆಗಳು ಎದುರಿಸುತ್ತಿದ್ದ ಆದಾಯ ತೆರಿಗೆ ಪಾವತಿ ಸಮಸ್ಯೆಗೆ ಪರಿಹಾರ ದೊರಕಿದೆ.

- **ಆದಾಯ ತೆರಿಗೆಗೆ ಸಂಬಂಧಿಸಿದಂತೆ ಸಹಕಾರಿ ಸಂಸ್ಥೆಗಳು ಎದುರಿಸುತ್ತಿದ್ದ ಸಮಸ್ಯೆಗಳಿಗೆ ಪರಿಹಾರ :** ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿಂದ ನಗದು ಠೇವಣಿ ಮತ್ತು ನಗದು ರೂಪದಲ್ಲಿ ಸಾಲ ಹಿಂಪಾವತಿಯ ಮಿತಿಯನ್ನು ರೂ.2 ಲಕ್ಷಕ್ಕೆ ವಿಸ್ತರಿಸಲಾಗಿದೆ. ಆದಾಯ ತೆರಿಗೆ ಕಾಯ್ದೆ ಕಲಂ 269ಎಸ್‌ಎಸ್ ಹಾಗೂ ಕಲಂ 269ಟಿ ಅನ್ವಯ 1984ರಲ್ಲಿ ರೂ.10,000/-ಗಳೊಂದಿಗೆ ಈ ಮಿತಿ ಆರಂಭವಾಗಿದ್ದು, ನಂತರ ಈ ಮಿತಿಯನ್ನು ರೂ.20,000/-ಕ್ಕೆ ವಿಸ್ತರಿಸಲಾಗಿತ್ತು. ಸಹಕಾರಿ ಸಂಸ್ಥೆಗಳಿಗೆ ನಗದು ಹಿಂಪಡೆಯುವಿಕೆಯ ಮೇಲಿನ ಟಿಡಿಎಸ್ ಮಿತಿಯನ್ನು ರೂ.3 ಕೋಟಿಗೆ ವಿಸ್ತರಿಸಲಾಗಿದೆ. ಸಹಕಾರಿ ಸಂಸ್ಥೆಗಳಲ್ಲಿ ಆದಾಯ ತೆರಿಗೆ ಕಾಯ್ದೆ 269ಎಸ್‌ಟಿ ನಗದು ವಹಿವಾಟುಗಳಿಗೆ ಪರಿಹಾರ ಒದಗಿಸಿದೆ.

- **ಕೃತಕ ಬುದ್ಧಿಮತ್ತೆಯು (Artificial intelligence) ಸಹಕಾರಿ ಸಂಸ್ಥೆ/ ಬ್ಯಾಂಕುಗಳ ಭಾಗ :** ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಕ್ರಾಂತಿಯ ನಡುವೆ ಕೃತಕ ಬುದ್ಧಿಮತ್ತೆಯನ್ನು ಸಹಕಾರಿ ಸಂಸ್ಥೆಗಳು ಮತ್ತು ಸಹಕಾರಿ ಬ್ಯಾಂಕುಗಳು ಅಳವಡಿಸಿಕೊಳ್ಳುವುದರ ಮೂಲಕ 24x7 ಬ್ಯಾಂಕಿಂಗ್ ಸೇವಾ ಸೌಲಭ್ಯಗಳನ್ನು ಒದಗಿಸಲು, ಆರ್ಥಿಕ ಸೇವಾ ಸೌಲಭ್ಯಗಳ ವಿಸ್ತರಣೆ, ಸೇವೆಯಲ್ಲಿನ ಜಟಿಲತೆಗಳನ್ನು ತೊಡೆದು ಹಾಕಲು, ಅಪಾಯ ನಿರ್ವಹಣೆ ಮತ್ತು ವಂಚನೆಗಳನ್ನು ತಡೆಗಟ್ಟಲು, ಸುವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗುತ್ತದೆ. ಸಹಕಾರಿ ಸಂಸ್ಥೆಗಳಲ್ಲಿ ಸುಧಾರಿತ ಡಿಜಿಟಲ್ ಉಪಕರಣಗಳು ಮತ್ತು ಕೃತಕ ಬುದ್ಧಿಮತ್ತೆಯನ್ನು ಸಹಯೋಗಕ್ಕಾಗಿ, ಸಂವಹನ ಮತ್ತು ದಾಖಲೆಗಳ ನಿರ್ವಹಣೆಗಾಗಿ ಹಂತಹಂತವಾಗಿ ಸಂಯೋಜಿಸಲಾಗುತ್ತಿದೆ.

- **ಉದ್ಯಮ ಶಕ್ತಿ ಯೋಜನೆ :** ಕರ್ನಾಟಕ ರಾಜ್ಯದ 2023ರ ಬಜೆಟ್‌ನಲ್ಲಿ ಸರ್ಕಾರಿ ಸ್ವಾಮ್ಯದ ಪೆಟ್ರೋಲಿಯಂ ಕಂಪನಿಗಳ ಸಹಯೋಗದೊಂದಿಗೆ ರಾಜ್ಯ ಸರ್ಕಾರವು "ಉದ್ಯಮ ಶಕ್ತಿ" ಎಂಬ ಯೋಜನೆಯಡಿ 100 ಸ್ಥಳಗಳಲ್ಲಿ ಪೆಟ್ರೋಲ್ ಬಂಕ್‌ಗಳನ್ನು ಸ್ಥಾಪಿಸಿ, ಅವುಗಳನ್ನು ಮಹಿಳಾ ಸಹಕಾರಿ ಸ್ವಸಹಾಯ ಸಂಘಗಳ ಮೂಲಕ ಸಂಪೂರ್ಣ ನಿರ್ವಹಣೆ ಮಾಡಲು ಕ್ರಮ ವಹಿಸಲಿದ್ದು, ಪೆಟ್ರೋಲಿಯಂ ಕಂಪನಿಗಳು ಇದರ ನಿರ್ಮಾಣಕ್ಕೆ ಬಂಡವಾಳ ಹೂಡಲಿದೆ. ರಾಜ್ಯ ಸರ್ಕಾರವು ಪೆಟ್ರೋಲ್ ಬಂಕ್ ಸ್ಥಾಪನೆಗೆ ಭೂಮಿ ಒದಗಿಸುವುದರೊಂದಿಗೆ ತರಬೇತಿ, ಪರವಾನಗಿ, ಮತ್ತಿತರ ಬೆಂಬಲ ನೀಡುವ ಮೂಲಕ ಮಹಿಳಾ ಸಹಕಾರಿ ಸ್ವಸಹಾಯ ಸಂಘಗಳ ಮತ್ತಷ್ಟು ಸಬಲೀಕರಣದ ಯೋಜನೆಯನ್ನು ಹೊಂದಿದೆ.

ಈ ಮೇಲ್ಕಂಡ ಅಂಶಗಳೊಂದಿಗೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಹಕಾರಿ ಸಂಸ್ಥೆಗಳಲ್ಲಿ ಆಗಿರುವ ಇತ್ತೀಚಿನ ಬೆಳವಣಿಗೆಗಳು ಈ ರೀತಿ ಇದೆ :

- ಮೂರು ಹಂತದ ಅಲ್ಪಾವಧಿಯ ಸಹಕಾರಿ ಸಾಲ ರಚನೆ (STCS) ಪ್ರಸ್ತುತತೆ, ಅನ್ವಯಿಸುವಿಕೆ ಕುರಿತು ಅಧ್ಯಯನ ನಡೆಸಲು ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಬಹುಪಾಲು ಸಹಕಾರಿ ಸಂಸ್ಥೆಗಳು ಮೂರು ಹಂತದ ರಚನೆಗೆ ಒಲವು ತೋರಿದ್ದು, ಅದರಂತೆ, ಮುಂದಿನ ದಿನಗಳಲ್ಲಿ ಅನುಷ್ಠಾನವಾಗಲಿದೆ.

- ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP) ಅಥವಾ ರಾಜ್ಯ ಬೆಂಬಲ ಬೆಲೆ (SAP) ಸಂದರ್ಭದಲ್ಲಿ ರೈತರಿಗೆ ಕಬ್ಬಿಗೆ ಹೆಚ್ಚಿನ ಬೆಲೆ ನೀಡುತ್ತಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸ್ಪಷ್ಟಪಡಿಸುವುದರ ಮೂಲಕ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಪ್ರಮುಖ ಪರಿಹಾರವನ್ನು ಒದಗಿಸಿದೆ.

- 2016-17ರ ಮೌಲ್ಯಮಾಪನ ವರ್ಷದ ಹಿಂದಿನ ಅವಧಿಗೆ ಕಬ್ಬು ಬೆಳಗಾರ ರೈತರಿಗೆ ನೀಡಲಾದ ಪಾವತಿಗಳನ್ನು ವೆಚ್ಚವಾಗಿ ಕ್ಲೈಮ್ ಮಾಡಲು ಸಕ್ಕರೆ ಸಹಕಾರಿ ಸಂಘಗಳಿಗೆ ಅವಕಾಶವನ್ನು ಒದಗಿಸಲಾಗಿದೆ. ಇದರಿಂದ ಸುಮಾರು ರೂ.10,000 ಕೋಟಿಯವರೆಗೆ ಪರಿಹಾರ ದೊರೆಯಲಿದೆ.

- ಯಾವ ಸಹಕಾರಿ ಸಂಸ್ಥೆಗಳಲ್ಲಿ ರೂ.1 ಕೋಟಿಗಿಂತ ಹೆಚ್ಚಿನ ಒಟ್ಟು ಆದಾಯವನ್ನು ಹೊಂದಿದೆಯೋ ಹಾಗೂ ಸಹಕಾರಿ ಸಂಸ್ಥೆಗಳು ಮತ್ತು ಅದರ ಸದಸ್ಯರ ಆದಾಯವನ್ನು ರೂ.10 ಕೋಟಿಗಳವರೆಗೆ ಹೆಚ್ಚಿಸಲು ಅವಕಾಶವಿದೆಯೋ ಅಂತಹ ಸಹಕಾರಿ ಸಂಸ್ಥೆಗಳ ಸರ್‌ಚಾರ್ಜ್ ಅನ್ನು ಶೇ.12 ರಿಂದ ಶೇ.7ಕ್ಕೆ ಇಳಿಸಲಾಗಿದೆ.

- ಕಾರ್ಪೋರೇಟ್ ಸಂಸ್ಥೆಗಳೊಂದಿಗೆ ಸ್ಪರ್ಧಿಸಲು ವೇದಿಕೆಯನ್ನೊದಗಿಸಲು ಸಹಕಾರಿ ಸಂಸ್ಥೆಗಳಿಗೆ ಕನಿಷ್ಠ ಪರ್ಯಾಯ ತೆರಿಗೆ (MAT) ದರವನ್ನು ಶೇ.18.5 ರಿಂದ ಶೇ.15ಕ್ಕೆ ಇಳಿಸಲಾಗಿದೆ.

- ಸಹಕಾರ ಆಧಾರಿತ ಆರ್ಥಿಕ ಅಭಿವೃದ್ಧಿ ಮಾದರಿಗೆ ಉತ್ತೇಜನ ನೀಡಲು ಸಹಕಾರಿ ಸಂಸ್ಥೆಗಳಿಗೆ ಸಮಪರ್ಕತೆಯನ್ನು ಒದಗಿಸಲು ನಾನ್-

ಶೆಡ್ಯೂಲ್ಡ್ ಅರ್ಬನ್ ಕೋಆಪರೇಟಿವ್ ಬ್ಯಾಂಕುಗಳು, ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳನ್ನು ಸದಸ್ಯರಿಗೆ ಕೈಗೆಟಕುವ ಮತ್ತು ಸಕಾಲಿಕ ಸಾಲವನ್ನು ನೀಡುವ ಸಂಸ್ಥೆಗಳಾಗಿ ಗ್ಯಾರಂಟಿ ಫಂಡ್ ಟ್ರಸ್ಟ್ (CGTMSE) ಯೋಜನೆಯನ್ನು ಜಾರಿಗೆ ತರಲಾಗಿದೆ.

• ಸಹಕಾರ ಬ್ಯಾಂಕಿಂಗ್ ವಲಯದಲ್ಲಿ ಸಹಕಾರಿಗಳ ಅಭಿವೃದ್ಧಿಗೆ ಹೊಸ ಉತ್ತೇಜನವನ್ನು ನೀಡಲು ನಿರ್ಧಾರಗಳನ್ನು ಕೈಗೊಳ್ಳಲಾಗಿದ್ದು, ಅವುಗಳೆಂದರೆ, (ಎ) ನಗರ ಸಹಕಾರಿ ಬ್ಯಾಂಕುಗಳಿಗೆ (UCBs) ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕುಗಳಿಗೆ (RCBs) ವೈಯಕ್ತಿಕ ಗೃಹ ಸಾಲದ ಮಿತಿಯನ್ನು ದ್ವಿಗುಣಗೊಳಿಸಿದೆ; (ಬಿ) ವಾಣಿಜ್ಯ ರಿಯಲ್ ಎಸ್ಟೇಟ್ ರೆಸಿಡೆನ್ಷಿಯಲ್ ಹೌಸಿಂಗ್ ವಲಯಕ್ಕೆ ಸಾಲ ನೀಡಲು TCBs ಗಳಿಗೆ ಅವಕಾಶ ನೀಡಲಾಗಿದೆ; (ಸಿ) ವಾಣಿಜ್ಯ ಬ್ಯಾಂಕುಗಳಂತೆ UCB ಗಳು ತಮ್ಮ ಗ್ರಾಹಕರ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸಲು ಪ್ರಸ್ತುತ ಅವಕಾಶ ನೀಡಲಾಗಿದೆ.

• ಸಹಕಾರ ಸಚಿವಾಲಯ ರಚನೆಯಾದಾಗಿನಿಂದ ಇಲ್ಲಿಯವರೆಗೆ ನ್ಯಾಷನಲ್ ಕೋಆಪರೇಟಿವ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್ (NCDC) ನಿಂದ ರೂ.73 ಕೋಟಿಗಳಷ್ಟು ಮೊತ್ತದ ಸಾಲವನ್ನು ಬಿಡುಗಡೆ ಮಾಡಿದೆ. ಇದನ್ನು ಸಮಗ್ರ ಅಭಿವೃದ್ಧಿ ಗುರಿಯನ್ನು ಹೊಂದಿರುವ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸಲು, ಸಹಕಾರಿ ಕ್ಲಸ್ಟರ್ ಬೇಸಾಯ, ಮಾರುಕಟ್ಟೆ ವಿಸ್ತರಣೆ ಮತ್ತು ಉದ್ಯೋಗ ಮಾರ್ಗಗಳ ಸೃಷ್ಟಿ ಸೇರಿದಂತೆ ಎನ್‌ಸಿಡಿಸಿ ನೆರವಿನ 'ರಾಜ್ಯ ಸಮೇಕಿತ್ ಸಹಕಾರಿ ವಿಕಾಸ್ ಪರಿಯೋಜನಾ'ವನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಿದೆ.

• 17ನೇ ಭಾರತೀಯ ಸಹಕಾರಿ ಕಾಂಗ್ರೆಸ್ ಕಾರ್ಯಕ್ರಮದ ಸಂದರ್ಭದಲ್ಲಿ ಸಹಕಾರಿ ಮಾರ್ಕೆಟಿಂಗ್ ಮತ್ತು ಸಹಕಾರ ವಿಸ್ತರಣೆ ಹಾಗೂ ಸಲಹಾ ಸೇವೆಗಳ ಪೋರ್ಟಲ್‌ಗಾಗಿ ಇ-ಕಾಮರ್ಸ್ ವೆಬ್‌ಸೈಟ್‌ನ ಇ–ಪೋರ್ಟಲ್‌ಗಳ ಉದ್ಘಾಟನೆ ಮಾಡಲಾಗಿದೆ.

• 'ವಿಕ್ಷಿತ್ (ವಿಷನ್) ಮತ್ತು ಆತ್ಮನಿರ್ಭರ್ ಭಾರತ್'ನ ಗುರಿಗಳನ್ನು ಸಾಧಿಸಲು ಸಹಕಾರ ಕ್ಷೇತ್ರವನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

• ಖಾದ್ಯ ತೈಲ, ಬೇಳೆಕಾಳುಗಳು, ಮೀನಿನ ಆಹಾರ ಮತ್ತು ಸಂಸ್ಕರಿಸಿದ ಆಹಾರ ಇತ್ಯಾದಿಗಳನ್ನು ಆತ್ಮನಿರ್ಭರ್ ಮೂಲಕ ಉತ್ಪಾದಿಸಲು ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಲಾಗುತ್ತಿದೆ.

• ಅಮೃತ್ ಸರೋವರ, ಜಲ ಸಂರಕ್ಷಣೆ, ಪ್ರತಿ ಹನಿ ಹೆಚ್ಚು ಬೆಳೆ, ಸೂಕ್ಷ್ಮ ನೀರಾವರಿ ಇತ್ಯಾದಿ ಕಾರ್ಯಗಳಲ್ಲಿ ಸಹಕಾರಿ ಸಂಸ್ಥೆಗಳನ್ನು ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತಿದೆ.

• ಕೃಷಿಯಲ್ಲಿ ರಾಸಾಯನಿಕಗಳನ್ನು ಬಳಸದಂತೆ ರಾಸಾಯನಿಕ ಮುಕ್ತ ಗ್ರಾಮವನ್ನು ನಿರ್ಮಾಣ ಮಾಡುವಲ್ಲಿ ಪ್ರತಿ ಜಿಲ್ಲೆಯಲ್ಲಿ 5 ಗ್ರಾಮಗಳನ್ನು ಸಹಕಾರಿ ಸಂಘಗಳು ದತ್ತು ತೆಗೆದುಕೊಳ್ಳುವಂತೆ ಕರೆ ನೀಡಲಾಗಿದೆ.

• ಅಮೃತ್ ಸರೋವರವನ್ನು ಪ್ರತಿ ಹಳ್ಳಿಗಳಲ್ಲಿ ನಿರ್ಮಾಣ ಮಾಡಿ ಪಶು ಪ್ರಾಣಿಗಳಿಗೆ ನೀರಿನ ವ್ಯವಸ್ಥೆಗಾಗಿ ಸಹಕಾರಿ ಸಂಸ್ಥೆಗಳು ಸಹಕರಿಸುವಂತೆ ಕರೆ ನೀಡಲಾಗಿದೆ.

• ಆಧುನಿಕ ತಂತ್ರಜ್ಞಾನದ ಬಳಕೆಗೆ ಒತ್ತು ನೀಡುವುದರ ಮೂಲಕ ಡೈರಿ ಜಾನುವಾರುಗಳ ಡೇಟಾಬೇಸ್ ಅನ್ನು ರಚಿಸಲಾಗುತ್ತಿದ್ದು, ಡೈರಿ ಸಹಕಾರಿ ವಲಯಕ್ಕೆ ಸಂಬಂಧಿಸಿದ ಪ್ರತಿಯೊಂದು ಜಾನುವಾರುಗಳ ಬಯೋಮೆಟ್ರಿಕ್ ಗುರುತಿಸುವಿಕೆಯನ್ನು ನಡೆಸಲಾಗುತ್ತಿದ್ದು, ಇದಕ್ಕೆ 'ಪಶು ಆಧಾರ್' ಎಂದು ಹೆಸರಿಸಲಾಗಿದೆ.

**ಸಹಕಾರಿ ಸಂಸ್ಥೆಗಳ ಭವಿಷ್ಯದ ಸವಾಲುಗಳು :**

ಪ್ರಸ್ತುತ ಸಹಕಾರ ಕ್ಷೇತ್ರವು ಹಿಂದಿನ ಸಾಂಪ್ರದಾಯಿಕತೆಯಿಂದ ಹೊರಬರುತ್ತಿದ್ದರೂ ಸಹ ಮತ್ತು ಇತ್ತೀಚಿನ ಹಲವಾರು ಧನಾತ್ಮಕ ಬೆಳವಣಿಗೆಗಳ ಹೊರತಾಗಿಯೂ ಸಹಕಾರಿ ಸಂಸ್ಥೆಗಳು ಇನ್ನೂ ಕೆಲವು ಸವಾಲುಗಳನ್ನು ಎದುರಿಸುತ್ತಿದೆ. ಡಿಜಿಟಲೀಕರಣದಿಂದಾಗಿ ಆನ್‌ಲೈನ್ ವಂಚನೆಗಳು ಹಾಗೂ ದುರುಪಯೋಗಗಳು ಹೆಚ್ಚಾಗುತ್ತಿದೆ. ಸಹಕಾರಿ ಸಂಸ್ಥೆಗಳ ಸ್ವಾಯತ್ತತೆಯ ಮೇಲೆ ಪರಿಣಾಮ ಬೀರುವ ಶಾಸಕಾಂಗ ಮತ್ತು ನೀತಿ ನಿರ್ಬಂಧಗಳು, ವಿಶೇಷವಾಗಿ ಕೃಷಿ ಸಾಲ ಸಂಘಗಳಲ್ಲಿ ಸಂಪನ್ಮೂಲ ಬಿಕ್ಕಟ್ಟು, ಸಹಕಾರಿ ಸಂಸ್ಥೆಗಳಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯಗಳ ನಿರ್ಬಂಧಗಳು, ವೃತ್ತಿಪರ ಕೊರತೆ, ಸಹಕಾರಿ ಸಂಸ್ಥೆಗಳ ಆಡಳಿತ ಮಂಡಲಿ ಸದಸ್ಯರ ಹಾಗೂ ಸದಸ್ಯರಲ್ಲಿ ಹಕ್ಕುಗಳ ಬಗ್ಗೆ ಅರಿವಿನ ಕೊರತೆ ಮತ್ತು ಸಹಕಾರಿ ಸಂಸ್ಥೆಗಳ ನಿರ್ವಹಣೆಯಲ್ಲಿ ರಾಜಕೀಯ ಹಸ್ತಕ್ಷೇಪ ಈ ಎಲ್ಲಾ ಸವಾಲುಗಳನ್ನು ಒಳಗೊಂಡಿದ್ದು, ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಿದೆ:

• ಬಂಡವಾಳ ರಚನೆಯ ಮೇಲೆ ಸಾಕಷ್ಟು ಗಮನಹರಿಸದಿರುವುದು ಸಹಕಾರಿ ಸಂಸ್ಥೆಗಳ ಕಾರ್ಯಸಾಧ್ಯತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ.

• ಡಿಜಿಟಲೀಕರಣದಲ್ಲಿ ಪರಿಣಿತಿ ಪಡೆದ ಸಿಬ್ಬಂದಿ/ ಸದಸ್ಯರ/ ಮಾನವ ಸಂಪನ್ಮೂಲದ ಕೊರತೆ.

• ಇಂದಿನ ಸಾಮಾಜಿಕ–ಆರ್ಥಿಕ ವಾತಾವರಣದಲ್ಲಿ, ರಾಜ್ಯ ಸಹಕಾರಿ ಕಾನೂನುಗಳು ಹಳೆಯದಾಗಿದ್ದು, ಅವುಗಳಲ್ಲಿ ಕೆಲವು ಭಾಗಗಳನ್ನು ನವೀಕರಿಸಲು/ ಪುನಃ ಬರೆಯುವ ಅವಶ್ಯಕತೆ ಇದೆ.

• ರಾಜಕೀಯ ಉದ್ದೇಶಗಳಿಗಾಗಿ ಸಹಕಾರಿ ಸಂಸ್ಥೆಗಳ ಬಳಕೆಯಾಗುವ

ಸಾಧ್ಯತೆ ಇರುತ್ತದೆ. ಅಲ್ಲದೇ, ಸರ್ಕಾರದ ಹಸ್ತಕ್ಷೇಪವು ಹೆಚ್ಚಾದಲ್ಲಿ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯು ಕುಂಠಿತವಾಗುವ ಸಾಧ್ಯತೆ ಇರುತ್ತದೆ.

- ಇಂದಿನ ಕಾಲಮಾನಕ್ಕೆ ತಕ್ಕಂತೆ ಸಹಕಾರಿ ಸಂಸ್ಥೆಗಳು ಇಂದೀಕರಣವಾಗದೇ ಇದ್ದಲ್ಲಿ ಕಾರ್ಪೋರೇಟ್/ ಖಾಸಗಿ ವಲಯದೊಂದಿಗೆ ಸ್ಪರ್ಧಿಸಲು ಕಷ್ಟಕರವಾಗುತ್ತದೆ.

**ಮುಂದಿನ ದಾರಿ :**

- ಸಹಕಾರಿ ಸಂಸ್ಥೆಗಳು ಭವಿಷ್ಯದ ಸವಾಲುಗಳನ್ನು ಎದುರಿಸಲು ಮತ್ತು ಪ್ರಸ್ತುತವಾಗಿ ಉಳಿಯಲು ದಕ್ಷತೆ, ಸ್ಪರ್ಧಾತ್ಮಕತೆ ಮತ್ತು ಸುಸ್ಥಿರತೆಯನ್ನು ಹೆಚ್ಚಿಸಲು ನಾವೀನ್ಯತೆ ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು.

- ಸಹಕಾರಿ ಸಂಸ್ಥೆಗಳಿಗೆ ಅಗತ್ಯವಿರುವ ಹಣಕಾಸಿನ ಆಧಾರವನ್ನು ಒದಗಿಸುವ ಮಾರ್ಗಗಳನ್ನು ಅನ್ವೇಷಿಸಬೇಕು.

- ಉದಯೋನ್ಮುಖ ವಲಯಗಳಲ್ಲಿ ಇರುವ ಅವಕಾಶಗಳನ್ನು ಸಹಕಾರಿ ಸಂಸ್ಥೆಗಳು ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ ಹಣಕಾಸಿನ ಆದಾಯದ ಮೂಲವನ್ನು ಅನ್ವೇಷಿಸಬೇಕು.

- ಸಹಕಾರಿ ಸಂಸ್ಥೆಗಳು ಭವಿಷ್ಯದಲ್ಲಿ ಡಿಜಿಟಲ್ ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಡಿಜಿಟಲ್ ಯುಗದಲ್ಲಿ ಅಗತ್ಯವಿರುವ ಸ್ಪರ್ಧಾತ್ಮಕತೆಯನ್ನು ಹೊಂದಬೇಕು.

- ಸಹಕಾರಿ ಸಂಸ್ಥೆಗಳು ಲಭ್ಯವಿರುವ ತಂತ್ರಜ್ಞಾನಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು.

- ಆದಾಯ ತೆರಿಗೆ ಹಾಗೂ ಮಿತಿಗಳಿಗೆ ಸಂಬಂಧಿಸಿದಂತೆ ಹಲವಾರು ವಿನಾಯಿತಿಗಳನ್ನು ನೀಡುತ್ತಿರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.

- ನಗರ ಮತ್ತು ಗ್ರಾಮೀಣ ಸಹಕಾರಿ ಸಂಸ್ಥೆಗಳು ಸಾರ್ವಜನಿಕ ಮತ್ತು ಖಾಸಗಿ ವಲಯದೊಂದಿಗೆ ಪಾಲುದಾರಿಕೆಯನ್ನು ಹೊಂದುವ ಮೂಲಕ ಕಾರ್ಪೋರೇಟ್ ಸಂಸ್ಥೆಗಳಂತೆ ಕಾರ್ಯನಿರ್ವಹಿಸಬೇಕು.

- ಸಹಕಾರಿ ಸಂಸ್ಥೆಗಳ ಸುಗಮ ಕಾರ್ಯನಿರ್ವಹಣೆಗೆ ಇರುವ ಅಡೆತಡೆಗಳನ್ನು ತೊಡೆದು ಹಾಕುವಂತೆ ಸಹಕಾರಿ ಕಾನೂನುಗಳನ್ನು ಪರಿಷ್ಕರಿಸಬೇಕು.

- ಸಹಕಾರಿ ಸಂಸ್ಥೆಗಳ ನಿರ್ವಹಣೆಯಲ್ಲಿ ರಾಜಕೀಯ ಹಸ್ತಕ್ಷೇಪವಾಗದೇ ಇರುವ ಕುರಿತು ಹೆಚ್ಚಿನ ಗಮನ ಕೇಂದ್ರೀಕರಣ ಮಾಡಬೇಕು.

- ಗ್ರಾಮೀಣ ಪ್ರದೇಶಗಳ ಸಹಕಾರಿ ಸಂಸ್ಥೆಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಬೇಕು.

- ಸಹಕಾರಿ ಸಂಸ್ಥೆಗಳ ಆಡಳಿತ ಮಂಡಲಿ ಸದಸ್ಯರ ಹಾಗೂ ಸಹಕಾರಿಯ ಸದಸ್ಯರ ಹಕ್ಕುಗಳು ಹಾಗೂ ಕರ್ತವ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಬೇಕು.

- ಇತ್ತೀಚಿನ ವರ್ಷಗಳಲ್ಲಿ, ಭಾರತದಲ್ಲಿ ಸಹಕಾರ ಕ್ಷೇತ್ರವನ್ನು ಪುನರುಜ್ಜೀವನಗೊಳಿಸಲು ಮತ್ತು ಬಲಪಡಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ಪ್ರಯತ್ನಗಳು ಸಹಕಾರಿ ಸಂಸ್ಥೆಗಳ ಆಡಳಿತ ಮತ್ತು ನಿರ್ವಹಣೆಯನ್ನು ಸುಧಾರಿಸಬೇಕು, ಹಣಕಾಸಿನ ಬೆಂಬಲವನ್ನು ಒದಗಿಸಬೇಕು, ನಾವೀನ್ಯತೆಯನ್ನು ಉತ್ತೇಜಿಸಬೇಕು, ಮಾರುಕಟ್ಟೆ ಸಂಪರ್ಕವನ್ನು ಉತ್ತೇಜಿಸಬೇಕು ಮತ್ತು ಸಹಕಾರಿಗಳ ನಡುವೆ ಸಹಯೋಗವನ್ನು ಬೆಳೆಸಬೇಕು.

**ಉಪ ಸಂಹಾರ :**

ಸಹಕಾರಿ ಸಂಸ್ಥೆಗಳು ಆರ್ಥಿಕ ಚಟುವಟಿಕೆಗಳಂತಹ ಸಾಮಾನ್ಯ ವ್ಯವಹಾರಗಳೊಂದಿಗೆ ಇ-ಸ್ಟ್ಯಾಂಪಿಂಗ್ ಪೇಪರ್‌ಗಳ ವಿತರಣೆ, ಇ-ಟಿಕೆಟ್, ಇನ್ಶೂರೆನ್ಸ್ ಸೇರಿದಂತೆ ಈ ರೀತಿಯ ಬಡ್ಡಿಯೇತರ ಆದಾಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ. ಸಹಕಾರಿ ಸಂಸ್ಥೆಗಳು ತಮಗಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವುದರೊಂದಿಗೆ, ಇತ್ತೀಚಿಗೆ ಆಗುತ್ತಿರುವ ಬೆಳವಣಿಗೆಗಳಿಂದ ಸಹಕಾರಿ ಸಂಸ್ಥೆಗಳು ದೇಶದ ಆರ್ಥಿಕ ಮೂಲದ ಪ್ರಬಲ ಮಾಧ್ಯಮವಾಗಲಿವೆ. ಜನಸಾಮಾನ್ಯರನ್ನು ಸಬಲೀಕರಣಗೊಳಿಸುವುದಲ್ಲದೇ, ಸಹಕಾರ ರಚನೆಗಳ ಮೂಲಕ ಭಾರತದ ಸುಸ್ಥಿರ ಆರ್ಥಿಕ ಅಭಿವೃದ್ಧಿ, ಜಾಗತಿಕ ರಂಗದಲ್ಲಿ ಸ್ಪರ್ಧಾತ್ಮಕತೆ ಮತ್ತು ಜನಸಾಮಾನ್ಯರ ಯೋಗಕ್ಷೇಮವನ್ನು ಖಾತರಿಪಡಿಸುತ್ತದೆ. ಸಂಪೂರ್ಣ ಸಹಕಾರ ಕ್ಷೇತ್ರದ ಕಾರ್ಯವಿಧಾನವನ್ನು ಮತ್ತಷ್ಟು ಬಲಪಡಿಸುವ ಸಲುವಾಗಿ, ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಅನ್ನು ನಿರ್ಮಿಸಲಾಗುತ್ತಿದ್ದು, ಡಿಜಿಟಲ್ ಬ್ಯಾಂಕಿಂಗ್ ಸೌಲಭ್ಯಗಳು ಸಹಕಾರಿ ಸಂಸ್ಥೆ/ ಬ್ಯಾಂಕ್‌ಗಳಿಂದ ಲಭ್ಯವಾಗುತ್ತಿದ್ದು, ಇದರಿಂದ ರೈತರು ಮತ್ತು ಜನಸಾಮಾನ್ಯರು ಇತ್ತೀಚಿನ ತಂತ್ರಜ್ಞಾನದ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತಿದೆ. ಮುಂದಿನ ದಿನಗಳಲ್ಲಿ ಸಹಕಾರಿ ಮಾದರಿಯನ್ನು ಅನುಸರಿಸುವ ಮೂಲಕ ಸ್ವಾವಲಂಬಿ ಗ್ರಾಮಗಳನ್ನು ನಿರ್ಮಿಸುತ್ತವೆ ಮತ್ತು ಸದೃಢಗೊಳಿಸುತ್ತದೆ. ಸಹಕಾರಿ ಸಂಸ್ಥೆಗಳ ಸದಸ್ಯರ ಆದಾಯವನ್ನು ದ್ವಿಗುಣಗೊಳಿಸುತ್ತದೆ. ಹಾಗೆಯೇ, ಐದು ಟ್ರಿಲಿಯನ್ ಡಾಲರ್ ಭಾರತದ ಆರ್ಥಿಕತೆಗೆ ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಹಕಾರಿ ಸಂಸ್ಥೆಗಳ ಕೊಡುಗೆಯು ಗುಣಾತ್ಮಕ ಪರಿಣಾಮವನ್ನು ಬೀರುತ್ತದೆ. ಇದಕ್ಕಾಗಿ, ಮೊದಲಿಗೆ ಸಮುದಾಯ ಮಟ್ಟದಲ್ಲಿರುವ ಸಹಕಾರಿ ಸಂಸ್ಥೆಗಳನ್ನು ಸಶಕ್ತಗೊಳಿಸಬೇಕು ಮತ್ತು ಪುನರುಜ್ಜೀವನಗೊಳಿಸಬೇಕು. ಅಲ್ಲದೇ, ಎಲ್ಲಾ ರೀತಿಯ ಸಹಕಾರಿ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢವಾಗಿಸುವ ಮತ್ತು ಸುಸ್ಥಿರಗೊಳಿಸುವುದರ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಪ್ರಮುಖ ಸಾಧನವಾಗಲಿದೆ.

70ನೇ ಅಖಿಲ ಭಾರತ ಸಹಕಾರ ಸಪ್ತಾಹ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಲೇಖನ

# ಮಹಿಳೆಯರು, ಯುವಜನ ಮತ್ತು ಅಬಲವರ್ಗಕ್ಕೆ ಸಹಕಾರಿ ಸಂಘಗಳು

– ಶ್ರೀಮತಿ ಸುನೀತಾ ದೀಪಕ, ಸಹ ಕಾರ್ಯದರ್ಶಿ, ಶ್ರೀ ತಿರುಪತಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ

**ಪರಿಕಲ್ಪನೆ :** "**ವಸುದೈವ ಕುಟುಂಬಕಂ**" ಎಂದರೆ ಇಡೀ ವಿಶ್ವ ಹಿಂದು ಕುಟುಂಬದಂತೆ, ಸಹಕಾರ ಎಂದರೆ ಒಟ್ಟಾಗಿ ಬದುಕುವ ಮತ್ತು ಒಟ್ಟಾಗಿ ಕೆಲಸ ಮಾಡುವ ಜೀವನವಾಗಿದೆ. ವಿಶ್ವ ಏಕತೆಯನ್ನು ಪ್ರತಿನಿಧಿಸುವದಾಗಿದೆ. ಪ್ರತಿಯೊಬ್ಬನು ಎಲ್ಲರಿಗಾಗಿ ಎಲ್ಲರೂ ಪ್ರತಿಯೊಬ್ಬನಿಗಾಗಿ ಎಂಬುದೇ ಸಹಕಾರದ ತತ್ವ. ಸಹಕಾರವು ವ್ಯಕ್ತಿಗಳು ತಮ್ಮ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಸ್ವಯಂ ಪ್ರೇರಣಯಿಂದ ಮಾಡಿಕೊಳ್ಳುವ ಸಂಘಟನೆಯ ಒಂದು ರೂಪವಾಗಿದೆ. ವಿಶ್ವದಾದ್ಯಂತ ಜನರು ತಮ್ಮ ಬದುಕು ಹಸನಾಗಿಸಿಕೊಳ್ಳಲು ಮತ್ತು ಹೆಚ್ಚು ಯಶಸ್ವಿ ಉದ್ಯಮಗಳನ್ನು ಕಟ್ಟಲು ಸಹಕಾರ ಸಂಸ್ಥೆಗಳನ್ನು ರೂಪಿಸಿಕೊಂಡಿದ್ದಾರೆ.

ಪ್ರಜಾಪ್ರಭುತ್ವದ ಆಧಾರದಲ್ಲಿ ನಿಯಂತ್ರಿತವಾದ ಉದ್ಯಮದ ಮೂಲಕ ತಮ್ಮ ಸಾಮಾನ್ಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯ ಮತ್ತು ಆಶಯಗಳನ್ನು ನೇರವೇರಿಸಿಕೊಳ್ಳಲು ವ್ಯಕ್ತಿಗಳು ಸ್ವಯಂ ಪ್ರೇರಿತವಾಗಿ ಮಾಡಿಕೊಳ್ಳುವ ಸ್ವಾಯತ್ತ ಸಂಸ್ಥೆಯೇ ಸಹಕಾರ ಸಂಘ.

ಇಂತಹ ಸಹಕಾರಿ ಸಂಘಗಳಿಂದ ಮಹಿಳೆಯರು, ಯುವಜನ, ಮತ್ತು ಅವಲವರ್ಗಕ್ಕೆ ಯಾವ ರೀತಿಯ ಸವಲತ್ತುಗಳಿವೆ ಹಾಗೂ ಸಹಕಾರ ಸಂಘಗಳಲ್ಲಿ ಮಹಿಳೆಯರ, ಯುವಜನರ ಮತ್ತು ಅಬಲವರ್ಗಗಳ ಪಾತ್ರದ ಬಗ್ಗೆ ತಿಳಿಯೋಣ.

### 1. ಮಹಿಳೆಯರು ಮತ್ತು ಸಹಕಾರ ಸಂಘಗಳು :

ಕಳೆದ 9 ವರ್ಷಗಳಲಿ ದೇಶವು ಮಹಿಳಾ ನೇತೃತ್ವದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಮುನ್ನಡೆದಿದೆ. ತನ್ನ ಹಿಂದಿನ ವರ್ಷಗಳ ಅನುಭವವನ್ನು ನೋಡಿದರೆ, ಭಾರತವು ಜಾಗತಿಕ ರಂಗದಲ್ಲಿ ಮಹಿಳಾ ಅಭಿವೃದ್ಧಿಯಿಂದ ಮಹಿಳಾ ನೇತೃತ್ವದ ಅಭಿವೃದ್ಧಿಯ ಪ್ರಯತ್ನಗಳನ್ನು ಮುಂದುವರಿಸಲು ಪ್ರಯತ್ನಿಸಿದೆ. ಈ ಬಾರಿ ಭಾರತದ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಜಿ–20 ಶೃಂಗಸಭೆಯಲ್ಲಿ ಈ ವಿಷಯವು ಪ್ರಮುಖವಾಗಿ ಕಾಣಿಸಿಕೊಂಡಿದೆ.

ಮಹಿಳೆಯಲ್ಲಿರುವ ಗಾಢನಂಬಿಕೆ ಅಥವಾ ಮನೋ ನಿಶ್ಚಯವೇ ಅವರ ಇಚ್ಛಾಶಕ್ತಿಯಾಗಿದೆ. ಅವರ ಕಲ್ಪನಾಶಕ್ತಿ, ತ್ವರಿತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮಾಥ್ಯ. ನಿಖರ ಗುರಿಗಳನ್ನು ಸಾಧಿಸುವ ಅವರ ಪರಿಶ್ರಮ ಅವರ ಕಠಿಣ ಪರಿಶ್ರಮದ ಫಲಿತಾಂಶಗಳು ಮಹಿಳಾ ಶಕ್ತಿಯ ನೈಜ ಗುರುತು ಮತ್ತು ಪ್ರತಿಬಿಂಬವಾಗಿದೆ.

ಭಾರತ ಮಾತೆಯ ಉಜ್ವಲ ಭವಿಷ್ಯ ಖಾತ್ರಿಪಡಿಸುವಲ್ಲಿ ಮಹಿಳೆಯರ ಶಕ್ತಿಯ ದೇಶದ ಅತ್ಯಮೂಲ್ಯ ಶಕ್ತಿಯಾಗಿದೆ. ಈ ಶತಮಾನದಲ್ಲಿ ಭಾರತದ ಪ್ರಮುಖ ಮತ್ತು ವೇಗ ಹೆಚ್ಚಿಸುವಲ್ಲಿ ಈ ಶಕ್ತಿಯ ಗುಂಪು ಬೃಹತ್ ಪಾತ್ರ ವಹಿಸುತ್ತದೆ. ಭಾರತದಲ್ಲಿ ಇಂದು ವಿಜ್ಞಾನ ಮತ್ತು ತಂತ್ರಜ್ಞಾನ, ಗಣಿತ ರಂಗದಲ್ಲಿ ಹೆಣ್ಣು ಮಕ್ಕಳ ದಾಖಲಾತಿ 43% ತಲುಪಿದೆ. ಇಂದು ಭಾರತದಲ್ಲಿ ಮಹಿಳಾ ಶಕ್ತಿ ಸಾಮಾನ್ಯ ಗೋಚರಿಸುವ ಅನೇಕ ಕ್ಷೇತ್ರಗಳಿವೆ.

- ಮುದ್ರಾ ಸಾಲ ನೀಡಿದ ಕೋಟ್ಯಂತರ ಜನರ ಪೈಕಿ ಶೇ. 70% ರಷ್ಟು ಫಲಾನುಭವಿಗಳು ದೇಶದ ಮಹಿಳೆಯರೇ ಆಗಿದ್ದಾರೆ.
- ಮಹಿಳಾ ಸಾಮಾನ್ಯ ಉಳಿತಾಯ ಪ್ರಮಾಣಪತ್ರ ಯೋಜನೆಯಡಿ ಮಹಿಳೆಯರಿಗೆ 7.5% ಬಡ್ಡಿದರ ನೀಡಲಾಗುತ್ತಿದೆ.
- ಪ್ರಧಾನಮಂತ್ರಿ ಆವಾಸ್ ಯೋಜನೆಯು ಕುಟುಂಬದ ಆರ್ಥಿಕ ನಿರ್ಧಾರಗಳಲಿ ಮಹಿಳೆಯರಿಗೆ ಹೊಸ ಧ್ವನಿ ನೀಡಿದೆ.
- ಸಹಕಾರಿ ಕ್ಷೇತ್ರದಲ್ಲಿ ಮಹಿಳಿಯರು ಯಾವಾಗಲೂ ನಿರ್ಣಯದ ಪಾತ್ರ ವಹಿಸುತ್ತದೆ.
- ಮಹಿಳಾ ಸ್ವಸಹಾಯ ಗುಂಪುಗಳಲ್ಲಿ ನೈತಿಕ ಶಕ್ತಿ, ಸಕಾರಾತ್ಮಕ ಕ್ರಿಯೆ ಎಂಬುದಿರುತ್ತದೆ. ಸಾಲದ ಸದ್ವನಿಯೋಗ, ಮತ್ತು ಸಾಲದ ಮರುಪಾವತಿ ಸಾಧ್ಯವಾಗುತ್ತದೆ.
- ಈ ವ್ಯವಸ್ಥೆಯನ್ನು ಅಧ್ಯಯನ ಮಾಡಿದ ನಬಾರ್ಡ್ ಭಾರತದಲ್ಲಿ ಉಳಿತಾಯ ಕ್ರೇಂದ್ರೀಕೃತ ಗುಂಪುಗಳ ರಚನೆಗೆ ಒತ್ತಾಸೆ ನೀಡಿದರು. ಈ ಗುಂಪುಗಳೇ ಸ್ವಸಹಾಯ ಗುಂಪುಗಳು.
- ಈ ಗುಂಪನ್ನು ಸ್ವತಃ ರಚನೆ ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಸರ್ಕಾರೇತ್ತರ ಸಂಸ್ಥೆಗಳು, ಸಹಕಾರ ಸಂಘ, ಸಹಕಾರಿಗಳು ರಚನೆ ಮಾಡಬಹುದು.
- ಈ ಗುಂಪಿನಲ್ಲಿ ಸಾಲ ಪಡೆದಾಗ, ಅದಕ್ಕೆ ತಕ್ಕ ದಾಖಲಾತಿ ಒಳಗೊಂಡಂತೆ ಒಬ್ಬರು ಒಬ್ಬರಿಗೆ ಮತ್ತೊಬ್ಬರು ಜವಾಬ್ದಾರರಾಗಿರುತ್ತರೆ.

### ಸಹಕಾರ ಸಂಘದಿಂದ ಮಹಿಳೆಯರಿಗಿರುವ ಸವಲತ್ತುಗಳು

- ಸಹಕಾರಿ ಸಂಘಗಳಲ್ಲಿ ಮಹಿಳೆ ಕೆಲಸಮಾಡುತ್ತಿದ್ದರೆ, ಅವರಿಗೆ ಸಮಯಕ್ಕೆ ಸರಿಯಾಗಿ ವೇತನ ಸಿಗುತ್ತದೆ. ಇದುರಿಂದ ಅವರು ತಮ್ಮ ಜವಾಬ್ದಾರಿಗಳಾದ ಶಿಕ್ಷಣ, ಮನೆ ಖರ್ಚನ್ನು ಯಾರ ಸಹಾಯವಿಲ್ಲದೆ ನಿಭಾಯಿಸಬಹುದು.
- ಸಹಕಾರಿ ಸಂಘಗಳಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರಿಗೆ ಆರೋಗ್ಯ ವಿಮೆಯಂತಹ ಸವಲತ್ತು ಕಲ್ಪಿಸಿದೆ ಇದರಿಂದ ಅವರಿಗೆ ಆರೋಗ್ಯದ ಸಮಸ್ಯೆಬಂದಾಗ ಈ ವಿಮೆಯಿಮದ ಅವರಿಗೆ ಹಣಕಾಸಿನ ಅನುಕೂಲವಾಗುತ್ತದೆ.
- ಸಹಕಾರಿಯಲ್ಲಿನ ಮಹಿಳಾ ಸಿಬ್ಬಂದಿಗಳಿಗೆ 6 ತಿಂಗಳ ವೇತನ ಸಹಿತ ಪ್ರಸೂತಿ ರಜೆ ಇರುವುದರಿಂದ ತಾಯಿ & ಮಗು ಆರಾಮಗಿ ಹೊಂದಿ ಮತ್ತೆ ಕಾರ್ಯಕ್ಕೆ ಹಾಜರಾಗುವ ಅವಕಾಶವಿದೆ.
- ಕುಶಲಕರ್ಮಿಗಳ ಸಹಕಾರಿ ಸಂಘಗಳಲ್ಲಿ, ಮಹಿಳೆಯರಿಗಾಗಿ ಹಲವಾರು ತರಬೇತಿಗಳನ್ನು ಏರ್ಪಡಿಸಲಾಗಿದೆ ಹಾಗೂ ಈ ಸಂಘಗಳಲ್ಲಿ ಅವರಿಗೆ ಒಳ್ಳೆಯಗುಣ ಮಟ್ಟದ ಕಚ್ಚಾಸಾಮಾಗ್ರಿಗಳನ್ನು ಒದಗಿಸಿ ಅವರ ಕೆಲಸವನ್ನು ಮುಗಿಸಿ ಉತ್ತಮ ಬೆಲೆಯ ಮಾರುಕಟ್ಟೆಗೆ ತಲುಪಿಸಲು ಸಹಾಯಮಾಡುತ್ತದೆ.

- SACCOS (savings &b credit coopertation) ಗಳು ಮಹಿಳೆಯರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಗಿಂತ ಹೆಚ್ಚಿನ ಸವಲತ್ತುಗಳನ್ನು ನೀಡಿದೆ. ವಿಶೇಷವಾಗಿ ಗ್ರಾಮೀಣ ಭಾಗದ ಮಹಿಳೆಯರಿಗೆ ಅವರ ಉದ್ಯೋಗ, ಆರೋಗ್ಯ, ಶಿಕ್ಷಣದ ಅಗತ್ಯ ತೆಗೆನುಗುಣವಾಗಿ ಅವರಿಗೆ ವ್ಯಾಪಕವಾದ ಸಾಲದ ಸವಲತ್ತುಗಳನ್ನು ನೀಡಲಾಗುತ್ತದೆ.
- ಸಂಘರ್ಷದ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಗ್ರಾಮೀಣ ಭಾಗದ ಮಹಿಳೆಯರಿಗೆ ಲಗತ್ತಗುವ ಕ್ರೀಯಾತ್ಮಕ ಉಪಕರಣಗಳನ್ನು ಸಹಕಾರಿಗಳು ನೀಡುತ್ತದೆ. ಇದರಿಂದ ಅವರ ಹಣಕಾಸಿನ ಸ್ವಾತಂತ್ರ್ಯ ಸುಧಾರಿಸುತ್ತದೆ.
- 1990ರಲ್ಲಿ ಲಿಂಗ ಸಮಾನತೆ ಕಾಯ್ದೆಯಿಂದ ಲಿಂಗ ಸಮಾನತಾ ಸಹಕಾರಿ ಸಂಘಗಳು ನಿರ್ಮಾಣವಾದವು, ಇದರಲ್ಲಿ ಐಸಿಎ ಕೂಡಾ ಸಮ್ಮಿಲನಗೊಂಡು ಸಹಕಾರ ರಂಗದ ಅಭಿವೃದ್ಧಿಗಾಗಿ ಅಧ್ಯಯನ ಸಾಮಾಗ್ರಿಗಳನ್ನು ಭಾಷಾ ಮಾದರಿಗನುಗುಣವಾಗಿ ವಿಶೇಷವಾಗಿ ಮಹಿಳೆಯರಿಗೆ ನೀಡಬೇಕೆಂದು ತಿಳಿಸಿತು. ಹೀಗೆ ಸಹಕಾರಿ ರಂಗದಲ್ಲಿ ಮಹಿಳೆಯ ಪಾತ್ರ ಅತ್ಯಅಮೂಲ್ಯವಾಗಿದೆ.

**2. ಅಬಲವರ್ಗಕ್ಕೆ (ಬಡವರಿಗೆ ಸಹಕಾರ ಸಂಘಗಳು)**

**ಪರಿಕಲ್ಪನೆ :** ಬಡತನವನ್ನು ಎಲ್ಲಾ ರೂಪದಲ್ಲಿ ನಿರ್ಮೂಲನೆ ಮಾಡುವುದು ಸುಸ್ಥಿರ ಅಭಿವೃದ್ಧಿಯ ಮೊದಲ ಗುರಿಯಾಗಿದೆ. ಈ ಗುರಿಯು 2030ರ ವೇಳೆಗೆ ಜಗತ್ತಿನ ಯಾವ ಭಾಗದಲ್ಲಿಯೂ ಕಡು ಬಡತನ, ಅಂದರೆ ದಿನಕ್ಕೆ 1.25 ಅಮೇರಿಕನ್ ಡಾಲರ್‌ಗಿಂತ ಕಡಿಮೆ ಆದಯ ವಿರುವ ಜನರು, ಇರದಿರುವಂತೆ ಮಾಡುವ ಆಶಯ ಹೊಂದಿದೆ.

ವಿಶೇಷವಾಗಿ ಬಡವು, ಆರ್ಥಿಕ, ಸಾಮಾಜಿಕ ಮತ್ತು ಪ್ರಾಕೃತಿಕ ಕಾರಣಗಲಿಂದಾಗಿ ಅವಕಾಶ ವಂಚಿತರಾಗುವುದು ಅಥವಾ ಬಲಿಪಶುಗಳಾಗುವುದನ್ನು ತಡೆಯಬೇಕಾಗಿದೆ.

**ಸಹಕಾರಿ ಕ್ಷೇತ್ರದ ಪಾತ್ರ :**

- ಸಹಕಾರಿ ಸಂಘಗಳು ತಮ್ಮ ಸಾಂಸ್ಥಿಕ ರಚನೆ ಮತ್ತು ಉದ್ದೇಶಗಳಿಂದಾಗಿ ಕಾರ್ಯನಿರ್ವಹಿಸುತ್ತಿವೆ.
- ಆರ್ಥಿಕ ನೆಲೆಯಲ್ಲಿ ಅವು ಉದ್ಯೋಗ ಮತ್ತು ಆದಾಯದ ಅವಕಾಶಗಳನ್ನು ಸೃಷ್ಟಿಸುತ್ತದೆ.
- ಸಾಮಾಜಿಕ ನೆಲೆಯಲ್ಲಿ ಅವುಗಳ ರಕ್ಷಣೆ ಮತ್ತು ಸಮಾನತೆಯನ್ನು ಸಾಧ್ಯವಾಗಿಸುತ್ತದೆ.
- ಭಾರತದ ಸಹಕಾರ ಚಳುವಳಿ ಬಡ ಸಮೂದಾಯಗಳ ಏಳಿಗೆಗಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದೆ.

ಈ ಕೆಳಗೆ ತಿಳಿಸಿರುವ ಹಲವಾರು ಚಟುವಟಿಕೆಗಳಲ್ಲಿ ಸಹಕಾರ ಸಂಘಗಳು ಅಬಲವರ್ಗದವರಿಗೆ, ಅವರ ಆರ್ಥಿಕ ಶಕ್ತಿ ಹೆಚ್ಚು ಮಾಡುವಲ್ಲಿ ಸಹಾಯಕಾರಿಯಾಗಿದೆ.

- ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ಸಾಲ ನೀಡುವಾಗಿ ಅವರ ಆರ್ಥಿಕ ಸ್ಥಾನಮಾನ ಅರಿತು ಬಡ್ಡಿದರಗಳಲ್ಲಿ ವ್ಯತ್ಯಯ ಮಾಡಬಹುದು. ಅಂದರೆ ಬಡ ಸದಸ್ಯರಿಗೆ ಶೇಕಡಾ 1ರಷ್ಟು ಕಡಿಮೆ ಬಡ್ಡಿದರ ವಿಧಿಸುವುದು.
- ಅವರಿಗೆ ಸಾಮಾನ್ಯಕ್ಕಿಂತ ಹೆಚ್ಚಿನ ಕಂತಿನಲ್ಲಿ ಸಾಲ ಮರು ಪಾವತಿಗೆ ಅವಕಾಶ ಮಾಡಿಕೊಡುವುದು.
- ಸ್ವಂತ ಉದ್ಯೋಗಕ್ಕಾಗಿ ಸಾಲ, ಕಡಿಮೆ ಅವಧಿಗೆ ಆಪತ್ತು ಸಾಲ( ಉದಾ: ಒಂದು ವಾರದ ಅವಧಿಯ ಸಾಲ)
- ಪಿಗ್ಮಿ ರೇವಣಿ ಮಾದರಿಯಲ್ಲಿ ಕಡಿಮೆ ಮತ್ತು ಅನಿಚ್ಚಿತ ಆದಾಯದ ಜನ ಉಳಿತಾಯ ಯೋಜನೆಯನ್ನು ಚಾಲ್ತಿಗೆ ತರಬಹುದು.
- ಸಹಕಾರಿ ಸಂಸ್ಥೆಗಳು ಗಳಿಸುವ ಲಾಭದ ಒಂದಾಂಶವನ್ನು ಬಡ ಕುಟುಂಬಗಳ ಸಹಾಯಕ್ಕಾಗಿ ಅಮದರೆ ಅವರಿಗೆ ಆರೋಗ್ಯ ವಸತಿಗಳಿಗೆ ಅವರ ಮಕ್ಕಳಿಗೆ ಶಿಕ್ಷಣ ಸಹಾಯ ಮಾಡಬಹುದು.
- ಪ್ರತಿ ಸಹಕಾರಿ ಸಂಘವು ಪ್ರತಿ ವರ್ಷ ಕೆಲವು ಬಡ ಕುಟುಂಬಗಳನ್ನು ಸಂಘದ ಸದಸ್ಯರನ್ನಾಗಿ ಮಾಡಿಕೊಂಡು ಆ ಕುಟುಂಬಗಳಿಗೆ ಅಗತ್ಯ ಸಹಾಯ ನೀಡಬಹುದು.
- ಸಹಕಾರಿ ಸಂಘಗಳಲ್ಲಿ ಉದ್ಯೋಗಿಗಳನ್ನು ನೇಮಕ ಮಾಡುವಾಗ ಅಬಲ ವರ್ಗದ ಯುವಕ \ಯುವತಿಯರಿಗೆ ಆದ್ಯತೆ ನೀಡಬಹುದು.
- ಕಡುಬಡವ ಸಮುದಾಯದ ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಉದಾ: ಭಿಕ್ಷುಕರ ಸಹಕಾರಿ ಸಂಘ, ಹಾವಡಿಗರ ಸಹಕಾರ ಸಂಘ, ವಸತಿ ಹೀನರ ಸಹಕಾಉಇ ಸಂಘ ಇತ್ಯಾದಿ ಇವರಿಗೆ ಸ್ವಸಹಾಯ ನೆಲೆಯನ್ನು ಉತ್ತಮ ಆರ್ಥಿಕ ನೆಲೆಯನ್ನು ಕಂಡುಕೊಳ್ಳಲು ಸಹಕರಿಸಬಹುದು.
- ಮಾರಾಟ ಸಹಕಾರ ಸಂಘಗಳ ಬಡತನದ ರೇಖೆಯಿಂದ ಕೆಳಗಿರುವವರು ಬೆಳೆದ, ತಯಾರಿಸಿದ ವಸ್ತುಗಳ ಮಾರಾಟಕ್ಕೆ ಯೋಜನೆಗಳನ್ನು ಅನುಷ್ಟಾನಕ್ಕೆ ತರಬಹುದು.
- ಹಲವು ಸಹಕಾರ ಸಂಘಗಳು ಒಟ್ಟಾಗಿ ತಮ್ಮ ಹತ್ತಿರದಲ್ಲಿರುವ ವಸತಿ ಹೀನರಿಗೆ ಸಹಕಾರಿ ಮಾದರಿಯಲ್ಲಿ ವಸತಿ ಸೌಕರ್ಯ ಕಲ್ಪಿಸಬಹುದು.
- ಕೂಲಿ ಕಾರ್ಮಿಕರನ್ನು ಸಂಘಟಿಸಿ ಶ್ರಮಿಕ ಸಹಕಾರಿ ಸಂಘಗಳನ್ನು ರಚಿಸಿ ಸಹಾಯ ಮಾಡಬಹುದು.
- ಆಯ್ದ ಕುಟುಂಬಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಅವರ ಬಡತನಕ್ಕೆ ಕಾರಣಗಳನ್ನು ಗುರುತಿಸಿ, ಅವರಿಗೆ ಪರಿಹಾರೋಪಾಯಗಲನ್ನು ಕಂಡುಕೊಳ್ಳಲು ಬೇಕಾದ ತರಬೇತಿ ಮತ್ತು ಪರಿಕರಗಳನ್ನು ನೀಡಬಹುದು.
- ಜಗತ್ತಿನಾದ್ಯಂತ ಸಹಕಾರಿ ಸಂಘಗಳು "ಬಡವರ ಪರವಾದ ಸಂಘಟನೆಗಳು ಎಂದೇ ಗುರುತಿಸಲ್ಪಡುತ್ತಿದೆ.
- ಜಗತ್ತಿನ ಪ್ರಥಮ ಸಹಕಾರ ಸಂಘ ಇಂಗ್ಲೆಂಡ್‌ನಲ್ಲಿ ಆರಂಭವಾದದ್ದು, ಅಂದಿನ ಬಡಶ್ರಮಿತವರ್ಗದ ಏಳಿಗೆಗಾಗಿಯೇ ಆಗಿತ್ತು.
- ಅಗಲವರ್ಗದವರ ಬಳಿ ಲಭ್ಯವಿರುವ ಸಂಪನ್ಮೂಲಗಳನ್ನು ಗುರುತಿಸಿ ಅವುಗಳನ್ನು ಹೆಚ್ಚು ಉಪಯುಕ್ತವಾಗಿ ಉಪಯೋಗಿಸುವ ಮಾರ್ಗೋಪಾಯಗಳನ್ನು ಸೂಚಿಸಬಹುದು. (ಉದಾ : ಸಣ್ಣ ಪ್ರಮಾಣದ ಭೂಮಿ ಇದ್ದಲ್ಲಿ ಅದನ್ನು ಯಾವ ಆರ್ಥಿಕ ಚಟುವಟಿಕೆಗಳಿಗೆ ಉಪಯೋಗಿಸಹುದೆಂಬ ಬಗ್ಗೆ ಮಾಹಿತಿ &

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 34
Licensed to post without Prepayment License No. PMG BG/WPP-384/2023-2025.

ತರಬೇತಿ ನೀಡುವುದು.

ಹೀಗೆ ಅಬಲವರ್ಗದವರ ಏಳಿಗೆಗಾಗಿ ಸಹಕಾರ ಸಂಘಗಳ ಪಾತ್ರ ಹಿರಿದಾಗಿದೆ.

**3. ಯುವಜನತೆ ಮತ್ತು ಸಹಕಾರ ಸಂಘಗಳು**

**ಪರಿಕಲ್ಪನೆ :** ಸಹಕಾರ ಸಂಘಗಳು ಇವತ್ತಿನ ದಿನ ಯುವ ಜನತೆಗಳನ್ನು ಆಕರ್ಷಿಸಲು ಸಮೂಹ ಮಾಧ್ಯಮಗಳ ಸಹಾಯ ಪಡೆಯುತ್ತಿದೆ. ಐಸಿಎ ದ ನೀಲಿನಕ್ಷೆಯ ಪ್ರಕಾರ 2020ರ ಜನತೆಯಿಂದ ಸಹಕಾರಿ ರಂಗದ ಬೆಳವಣಿಗೆ ಸಾಧ್ಯ ಎಂದಿದೆ.

ಈ ನೀಲನಕ್ಷೆಯ ಪ್ರಕಾರ ಸಹಕಾರ ಸಂಘದ ತತ್ವಗಳು ತನ್ನದೇ ಆದ ಊಹೆ ಮತ್ತು ಮಹತ್ವ ಹೊಂದಿವೆ. ಸಹಕಾರದ ತತ್ವಗಳನ್ನು ಕಟ್ಟುವ ಸಹಕಾರದ ಗುರುತನ್ನು ಈ ನೀಲನಕ್ಷೆ ತಿಳಿಸುತ್ತವೆ.

- ಭಾರತವು ಸದೃಢವಾದ ಯುವ ಜನಸಂಖ್ಯೆ ಹೊಂದಿದೆ.
- ಒಟ್ಟು ಜನಸಂಖ್ಯೆಯ ಶೇಕಡಾ 50%ಕ್ಕಿಂತ ಹೆಚ್ಚು ಜನತೆ 25 ವಯಸ್ಸಿನವರಿಂದ ಕೂಡಿದೆ. ಹಾಗೂ ಶೇಕಡಾ 65% ಕ್ಕಿಂತ ಕಡಿಮೆ 35 ವಯಸ್ಸಿನವರಿಂದ ಕೂಡಿದೆ.
- ಇವತ್ತಿನ ಸಮಗ್ರ ಭಾರತದ ಪರಿಕಲ್ಪನೆ ಯುವಜನತೆ ಆಗಿದೆ.
- ಸಹಕಾರ ಕ್ಷೇತ್ರವನ್ನು ಬಲಪಡಿಸಲು ಯುವ ಜನತೆ ಯಾವ ರೀತಿ ಮುಂದಾಗಿದೆ ಅಥವಾ ಭಾಗಿ ಆಗಿದೆ ಎಂದು ತಿಳಿಯೋಣ.

**ಎ. ಕೌಶಲ್ಯ ಅಭಿವೃದ್ದಿಗಳ ಬೆಳವಣಿಗೆ :** ನವ–ನವೀನ ಕೌಶಲ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಸಹಕಾರ ಸಂಘಗಳ ಬೆಳವಣಿಗೆಗೆ ಜನತೆ ಪ್ರಯತ್ನಿಸುತ್ತಿದೆ. ಅವರಲ್ಲಿ ಹೊಸ, ಹೊಸ ಅಲೋಚನೆಗಳು ಇರುವುದರಿಂದ ಅಭಿವೃದ್ಧಿ ಸಾಧ್ಯ. ಸಹಕಾರ ಸಂಘಗಳು ಯುವಜನಗೆ ಮುಂದೆ ಬರಬೇಕೆಂದು ಹಲವಾರು ತರಬೇತಿಗಳನ್ನು ನೀಡುತ್ತಿದೆ.

**ಬಿ. ಆವಿಷ್ಕಾರ ;** ಯುವಜನರು ಅವಿಷ್ಕಾರಗಳ ನಿರ್ಮಾಪಕರು ಅವರು ಯಾವಾಗಲು ಪ್ರಯೋಗಮಾಡುತ್ತಲೇ ಇರುತ್ತಾರೆ. ಅವರಲ್ಲಿ ಯಾವಾಗಲೂ ಒಂದೇ ರೀತಿಯ ಆಲೋಚನೆಗಳು ಇರುವುದಿಲ್ಲ. ಅವರು ಸಹಕಾರ ಸಂಘದಲ್ಲಿ ಕೆಲಸ ಮಾಡುವಾಗ ಮಾರುಕಟ್ಟೆಯ ಒಳಿತಾಗಿ ಸಮುದಾಯದ ಜವಾಬ್ದಾರಿಯಿಂದ ಮಾರುಕಟ್ಟೆಯ ಅವಿಷ್ಕಾರಗಳ ಅನುಸಾರವಾಗಿ ಕಾರ್ಯನಿರ್ವಹಿಸುತ್ತಾರೆ. ಅವರ ಅವಿಷ್ಕಾರಗಳಿಂದ ಜನರ ಕ್ರೀಯಾಶೀಲತೆಗಳ ಮತ್ತು ಅವರ ಬೇಡಿಕೆಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಾರೆ.

**ಸಿ. ಪ್ರಜಾಪ್ರಭುತ್ವ ಭಾಗವಹಿಸುವಿಕೆ :** ಸಹಕಾರಿ ಸಂಘಗಲು ಪ್ರಜಾಪ್ರಭುತ್ವವಾಗಿದ್ದು, ಇಲ್ಲಿ ಯಾರು ಬೇಕಾದರೂ, ತಮ್ಮದೇ ಆದ ಶೈಲಿಯಲ್ಲಿ ಭಾಗಿಆಗಬಹುದು. ಯುವಜನತೆಯು ಸಹಕಾರಿ ಸಂಘಟನೆಗಳ ಸಮಾನತೆಯ ಮಾನದಂಡಗಳನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅವರು ಯಾರಲ್ಲಿ ತಾರತಮ್ಯ ಬರಲಾರದಂತೆ ಎಲ್ಲರಿಗೂ ಸಹಕಾರಿ ರಂಗದಲ್ಲಿ ಸೇರಲು ಅವಕಾಶ ಮಾಡಿಕೊಡುತ್ತದೆ.

**ಡಿ. ವಾಣೀಜ್ಯೋದ್ಯಮ ಮತ್ತು ಕ್ರೀಯಾತ್ಮಕ ಕೌಶಲ್ಯಗಳು :** ಸಹಕಾರಿ ರಂಗದಲ್ಲಿ ಕಾರ್ಯನಿರ್ವಹಿಸಲು ಪರಿಣಾಮಕಾರಿ ನಾಯಕತ್ವದ ಅವಶ್ಯಕತೆ ಇದೆ. ಯುವಜನರನ್ನು ಆಕರ್ಷಿಸಲು ಸಹಕಾರಿ ಸಂಘಗಳು ಒಳ್ಳೆಯ ವಾಣೀಜ್ಯೋದ್ಯಮ ಮತ್ತು ಸಾಮಾಜಿಕ ಕಳಕಳಿಯ ಯೋಜನೆಗಳನ್ನು ಮಾಡಿಕೊಡುತ್ತದೆ. ಹೀಗಾಗಿ ಯುವಜನರು ಈ ಕೌಶಲ್ಯದ ಆಧಾರದ ಮೇಲಿಂದ ಕಾರ್ಯನಿರ್ವಹಿಸುವುದರಿಮದ ಅವರಲ್ಲಿ ಕ್ರೀಯಾತ್ಮಕ ಕೌಶಲ್ಯಗಳ ಜಾಸ್ತಿ ಇರುತ್ತದೆ.

**ಇ. ನಿರ್ಣಯ ತೆಗೆದುಕೊಳ್ಳುವಿಕೆ :** ಉತ್ತಮ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕಾಗಿ ಸಹಕಾರಿ ಸಂಘಗಳು ಒಮ್ಮತದಿಂದ ಕಾರ್ಯನಿರ್ವಹಿಸುತ್ತವೆ. ಒಮ್ಮತಗಳ ಬೆಳವಣಿಗೆಗಾಗಿ ಯುವಜನರಲ್ಲಿ ಹಲವಾರು ಕೌಶಲ್ಯಗಳಿರುತ್ತವೆ. ಅವರು ಸರಾಗವಾಗಿ/ಸರಳ/ಅತೀ ಸುಲಭವಾಗಿ ಬಲಶಾಲಿ ಕಾರ್ಯಗಳಿಂದ ಸಹಕಾರಿ ಸಂಘಗಳನ್ನು ಬಲಪಡಿಸುತ್ತಾರೆ.

ಹೀಗಾಗಿ ಸಹಕಾರಿ ಸಂಘಗಳಲ್ಲಿ ಯುವ ಜನತೆಯ ಪಾತ್ರ ಹಿರಿಮೆ ಆದರೆ ಇತ್ತೀಚಿನ ದಿನಗಳಲ್ಲಿ ಯುವಜನತೆ ಸಹಕಾರಿ ಸಂಘಗಳಲ್ಲಿ ಕಡಿಮೆ ಭಾಗವಹಿಸುತ್ತಿರುವುವದರಿಂದ ಎನ್.ಸಿ.ಯು.ಐ ದ ವೈಕಂಠ ಭಾಯಿ ಮೆಹೆತ್ ಮೆಮೊರಿಯ ದಂಥಹ ಸಂಘಗಳು ಯುವಕರನ್ನು ಸಹಕಾರಿ ರಂಗದ ಬೆಳವಣಿಗೆಗಳ ಬಗ್ಗೆ ತಿಳಿಸಲು ಆಹ್ವಾನಿಸಿ ಸಹಕಾರಿ ರಂಗಗಳ ಬೆಳವಣಿಗೆಯ ಕುರಿತ, ಪ್ರಬಂಧ ಚಿತ್ರಣ (Drawing) ಭಾಷಣಗಳಂತೆ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತಿದೆ. ಎನ್.ಸಿ.ಯು.ಐ ಯು ಯುವಜನತೆಗಾಗಿ ಸಹಕಾರಿ ತರಬೇತಿಗಳನ್ನು ರೂಪಿಸಿ ಅವರನ್ನು ಸಹಕಾರಿ ರಂಗಕ್ಕೆ ಆಕರ್ಷಿಸುತ್ತಿದೆ. ಇದು ಸಹಕಾರಿ ರಂಗದ ಅಭಿವೃದ್ಧಿಗೆ ಕೇಂದ್ರೀಯ ವಿದ್ಯಾಲಯ ಶಾಲೆಗಳನ್ನು ಶಿಕ್ಷಣಕಾರ್ಯ ಕ್ರಮ ಜರುಗಿಸುತ್ತಿದೆ. ಡಿಪ್ಲೋಮಾ ಕೋರ್ಸ್‌ನ್ನು ಆರಂಭಿಸಿ ಶಿಕ್ಷಣ ಮಾಧ್ಯಮದಿಂದ ಸಹಕಾರಿ ರಂಗವನ್ನು ಪರಿಚಯಿಸುತ್ತಿದೆ.

**:– ಸಹಕಾರ ಗೆಳ್ಗೆ ಃ :–**

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003